
ಸಾಹಿತ್ಯ ದಾಸೋಹ – 237

ಸಂಚಿಕೆ 61 – ಜೂನ್ 2025

10.05.2025ರ ದಾಸೋಹದ ಬರಹಗಳ ಸಂಕಲನ



ತೊಂಗಲು

ಯುಗಾದಿ ಪ್ರಬಂಧ ಸಂಕಲನ ಬಿಡುಗಡೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

10ನೆಯ ಮೇ 2025ರಂದು ನಡೆದ 237ನೆಯ ಸಾಹಿತ್ಯ ದಾಸೋಹದ ಸಂಚಿಕೆ ಇಲ್ಲಿದೆ. ನಮ್ಮ ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಜಿ.ಎನ್. ನರಸಿಂಹಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆದ ದಾಸೋಹದಲ್ಲಿ 19 ದಾಸೋಹಿಗಳು ಪಾಲ್ಗೊಂಡು ತಮ್ಮ ವೈವಿಧ್ಯಮಯ ಬರಹಗಳನ್ನು ಪ್ರಸ್ತುತಪಡಿಸಿದ್ದಾರೆ.

ಈ ಬಾರಿಯ ವಿಶೇಷವೆಂದರೆ, ನಮ್ಮ ವೇದಿಕೆಯು ವಿಶ್ವಾವಸು ಸಂವತ್ಸರದ ಯುಗಾದಿಯಂದು ಅಂದರೆ 30.03.2025ರಂದು ಸ್ವಾನುಭವದ ಪ್ರಬಂಧ ರಚನೆಯ ಅಭಿಯಾನವನ್ನು ನಡೆಸಿತು. ಇದರಲ್ಲಿ ಒಂದೇ ದಿನದ ಅವಧಿಯಲ್ಲಿ 38 ಲೇಖಕರು ಒಟ್ಟು 48 ಪ್ರಬಂಧಗಳನ್ನು ಪ್ರಸ್ತುತ ಪಡಿಸುವುದರ ಮೂಲಕ ತಮ್ಮ ಸ್ವಾನುಭವದ ಬೇವು-ಬೆಲ್ಲವನ್ನು ಸಾಹಿತ್ಯ ರೂಪದಲ್ಲಿ ಹಂಚಿದರು. ಈ ಪ್ರಬಂಧಗಳನ್ನೊಳಗೊಂಡ 'ತೊಂಗಲು ಎಂಬ ಪ್ರಬಂಧ ಸಂಕಲನವು ದಿನಾಂಕ 04.05.2025ರಂದು ಲೋಕಾರ್ಪಣೆಯಾಯಿತು. ಈ ಕಾರ್ಯಕ್ರಮದ ವರದಿ, ಸಂಕಲನದಲ್ಲಿರುವ ವಿವಿಧ ಪ್ರಬಂಧಗಳ ಬಗ್ಗೆ ಡಾ.ಜೆ.ಎನ್.ಜಗನ್ನಾಥ್ ಅವರ ವಿಶ್ಲೇಷಣಾ ಬರಹ, ಚಿತ್ರಗಳು, ಕವನಗಳು ಈ ಸಂಚಿಕೆಯಲ್ಲಿವೆ.

25ನೆಯ ಮೇ 2025ರಂದು 'ತಿಂಗಳ-ಬೆಳಕು 15' ರ ಕಾರ್ಯಕ್ರಮದಲ್ಲಿ ಡಾ.ಶುಭಶ್ರೀ ಪ್ರಸಾದ್ ಅವರು 'ಭಾವಗೀತೆಗಳ ಭಾವಯಾನ' ಕುರಿತು ಕನ್ನಡ ಭಾವಗೀತೆಗಳ ಬಗ್ಗೆ ಅಪಾರ ಮಾಹಿತಿಯುಕ್ತ ಸುದೀರ್ಘ ಉಪನ್ಯಾಸ ನೀಡಿದರು. ಆ ಕಾರ್ಯಕ್ರಮದ ವರದಿಯೂ ಇದರಲ್ಲಿದೆ.

ನಮ್ಮ ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲಾ ಬರಹಗಾರರು, ಅತಿಥಿಗಳು, ತಾಂತ್ರಿಕ ತಜ್ಞರು ಎಲ್ಲರಿಗೂ ನಮ್ಮ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 14.06.2025

ದಾಸೋಹದ ಪುಟಗಳಲ್ಲಿ...

01	ಸಾಹಿತ್ಯ ದಾಸೋಹ 237 – ಕಾರ್ಯಕ್ರಮ ವರದಿ	ರಾಧಿಕಾ ವಿ. ಗುಜ್ಜರ್	4
02	ತಿಂಗಳ ಬೆಳಕು 15 – 'ಭಾವಗೀತೆಗಳ ಭಾವಯಾನ' ಉಪನ್ಯಾಸ – ವರದಿ	ಹು.ವಾ. ಶ್ರೀಪ್ರಕಾಶ್	6
03	'ತೊಂಗಲು' ಪ್ರಬಂಧ ಸಂಕಲನ ಬಿಡುಗಡೆ ಸಮಾರಂಭ– ಕಾರ್ಯಕ್ರಮ ವರದಿ	ರೇಣುಕಾ ದೇಸಾಯಿ	8
04	'ತೊಂಗಲು' ಬಿಡುಗಡೆ ಸಂಭ್ರಮ (ಕವನ)	ಮಂಜುನಾಥ ಎ	14
05	'ತೊಂಗಲು' ಬಿಡುಗಡೆ – ಸ್ವಾಗತ ಗೀತೆ (ಕವನ)	ಧೀರೇಂದ್ರ ಎಸ್.	15
06	'ತೊಂಗಲು' ಸಂಕಲನದ ವಿವಿಧ ಪ್ರಬಂಧಗಳ ವಿಶ್ಲೇಷಣೆ	ಡಾ. ಜೆ.ಎನ್.ಜಗನ್ನಾಥ್	16
07	'ಕವಿ ಮನ' ಅಂಕಣ – ನಾಲ್ಕು ಕವನಗಳು	ವಿವಿಧ ಕವಿಗಳು	22
08	ತಾನೊಂದು ಬಗೆದರೆ ಮಾನವ	ಪೂರ್ಣಿಮ ಭಗವಾನ್	25
09	ಸಾವಿರವ ಕಟ್ಟಿದಾಕೆ (ಕವನ)	ರಾಧಿಕಾ ಗುಜ್ಜರ್	27
10	ಮಿನುಗುತಾರೆ ಕಲ್ಪನಾ	ಟಿ.ಆರ್. ಉಷಾರಾಣಿ	28
11	ಸೃಷ್ಟಿ ವೈಚಿತ್ರ್ಯ (ಕವನ)	ಮಾಲತಿ ಶ್ರೀನಿವಾಸನ್	30
12	ಅಮ್ಮನ ಪರಿಚಯ	ಸಿಂಧು ಹರಿಥಸ್	31
13	ಸಿರಿಯ ಹೂಮಳೆ (ಕವನ)	ಬೆಂ.ಶ್ರೀ. ರವೀಂದ್ರ	34
14	ಅಮರನ ಆಂಬೊಡೆ ಪುರಾಣ	ಸ್ನೇಹ ಶಶಿಧರ	35
15	ಕಾಂತಾಸಮ್ಮಿತ	ಗಣಪತಿ ಹೆಗಡೆ	38
16	ಕನ್ನಡ ಜಾನಪದ ಕಥೆಗಳು	ವಿಠ್ಠಲ ಇಜೇರಿ	40
17	ಪ್ರಕಟವಾಗದಿರುವ ಸುದ್ದಿಗಳು	ರೇಣುಕಾ ದೇಸಾಯಿ	42
18	ಗಟ್ಟಿ ಮೇಳ	ನಾಗರತ್ನ ಚಂದ್ರಶೇಖರ್	44
19	ಸಿಂಹಾನ ಕೆಣಕಿದ ಕೋತಿ	ಎಂ.ಎಸ್. ನರಸಿಂಹ ಮೂರ್ತಿ	47
20	ಮನೆಯೇ ಶಾಲೆ	ಜೆ.ಎನ್.ಜಗನ್ನಾಥ್	50
21	ಒಂದೇ ಬೀಸಿಗೆ ಎರಡು ಹೆಣ್ಣು	ಶೀಲಾ ಅರಕಲಗೂಡು	51
22	ರಂಗಭೂಮಿಯ ರೋಚಕ ಪ್ರಸಂಗಗಳು	ಧೀರೇಂದ್ರ ಎಸ್	54
23	ಜೀವ ಗೌರವ – ರೆವರೆನ್ಸ್ ಆಫ್ ಲೈಫ್	ಮಾಧುರಿ ಕೃಷ್ಣ	56
24	ನಾನಾಗಬಯಸುವ ರಾಮಾಯಣದ ಪಾತ್ರ	ಸುಜಾತಾ ರವೀಶ್	57
25	ನಮ್ಮನೆ ಅಡುಗೆಮನೆ	ರಘುರಾಂ ಎನ್.ವಿ.	58
26	ಶೃಂಗಾರ	ಶ್ರವಣಕುಮಾರಿ ಟಿ.ಎಸ್.	61
27	ಉತ್ತರವಿಲ್ಲದ ಪ್ರಶ್ನೆಗಳು (ಕವನ)	ಬೆಂ.ಶ್ರೀ. ರವೀಂದ್ರ	63
28	ಸಾಹಿತ್ಯ ದಾಸೋಹ 237 – ಅಧ್ಯಕ್ಷರ ಅನಿಸಿಕೆಗಳು	ಜೆ.ಎನ್. ನರಸಿಂಹ ಮೂರ್ತಿ	64

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾ ಹಿತ್ಯ ದಾ ಸೋಹ ವೇದಿಕೆ

ಸಾಹಿತ್ಯ ದಾಸೋಹ – 237


ಕಾರ್ಯಕ್ರಮ ವರದಿ: ರಾಧಿಕಾ ಗುಜ್ಜರ್

10.05.2025ರ ಶನಿವಾರ ಇಳಿ ಮಧ್ಯಾಹ್ನ 3.30ಕ್ಕೆ ಸರಿಯಾಗಿ ಮೇ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಗೂಗಲ್ ಮೀಟ್ ಆನ್‌ಲೈನ್ ವೇದಿಕೆಯಲ್ಲಿ ಆರಂಭವಾಯಿತು. ಶ್ರೀ ಕೆ.ಎನ್.ಮಹಾಬಲ ಅವರು ಸಭೆಯ ಸಾರಥ್ಯ ವಹಿಸಿದ್ದು, ಎಲ್ಲರನ್ನೂ ಔಪಚಾರಿಕವಾಗಿ ಸ್ವಾಗತಿಸಿದರು.

ನಂತರ ಶ್ರೀ ವಿಠ್ಠಲ ಇಜೇರಿಯವರು ಎಲ್ಲರನ್ನೂ ಸ್ವಾಗತಿಸಿ 237ನೇ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಜಿ.ಎನ್.ನರಸಿಂಹ ಮೂರ್ತಿ ಅವರನ್ನು ಸಭೆಗೆ ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ,

- ಪಹಲ್ಗಾಮ್ ದುರಂತವನ್ನು ಉಲ್ಲೇಖಿಸುತ್ತಾ, ದೇಶವು ಸಂಕ್ರಮಣ ಸ್ಥಿತಿಯಲ್ಲಿದೆ. ಅಲ್ಲಿ ನಡೆದ ಉಗ್ರರ ದಾಳಿಯ ಕುಕೃತ್ಯಕ್ಕೆ ನ್ಯಾಯ ದೊರಕಿಸಲು ಭಾರತವು ಶತ್ರು ದೇಶದ ಮೇಲೆ ದಾಳಿ ನಡೆಸಿದೆ. ಈ ಕಾರ್ಯಾಚರಣೆಯಲ್ಲಿ ತೊಡಗಿ ದೇಶ ಕಾಯುತ್ತಿರುವ ಎಲ್ಲ ಯೋಧರಿಗೂ ನಮನ. ನಾವು ಒಗ್ಗಟ್ಟಾಗಿರಬೇಕು, ಒಗ್ಗಟ್ಟನ್ನು ಕಾಪಾಡಬೇಕು, ಎಲ್ಲ ಯುದ್ಧಗಳಲ್ಲೂ ನಾವು ಭಾರತೀಯರು ಒಂದಾಗಿ ನಿಂತಿದ್ದು, ಈ ಬಾರಿಯೂ ಒಂದಾಗಿ ನಿಂತು ನಮ್ಮ ಭಾರತವು ಗೆಲ್ಲಲಿ ಎಂದು ಆಶಿಸೋಣ. ವೀರ ಯೋಧರು ಮತ್ತು ಸರ್ಕಾರವನ್ನು ಬೆಂಬಲಿಸೋಣ ಎಂದು ಕರೆ ನೀಡಿದರು.
- ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಆಶ್ರಯದಲ್ಲಿ ಯುಗಾದಿ ವಿಶೇಷ ಪ್ರಬಂಧಗಳ ಸಂಕಲನ "ತೊಂಗಲು" ಬಿಡುಗಡೆಯಾಗಿರುವ ಕುರಿತು ಸಂತಸ ಹಾಗೂ ಹೆಮ್ಮೆಯನ್ನು ವ್ಯಕ್ತಪಡಿಸಿದರಲ್ಲದೆ, ಈ ಸಂಬಂಧ ಶ್ರೀ ರಂಗರಾಜನ್ ಅವರು ಎಲ್ಲಾ ಪ್ರಬಂಧಕಾರರಿಗೂ ಆಕರ್ಷಕ ಪ್ರಮಾಣಪತ್ರವನ್ನು ತಯಾರಿಸಿ ತಲುಪಿಸಿರುವ ಬಗ್ಗೆ ಮಾಹಿತಿ ನೀಡಿ ಧನ್ಯವಾದಗಳನ್ನು ಅರ್ಪಿಸಿದರು.
- ಶ್ರೀ ಕೆ.ಎನ್.ಮಹಾಬಲ ಅವರು ರಚಿಸಿದ ಬಹು ನಿರೀಕ್ಷಿತ ಕೃತಿ "ನನ್ನ ಅಪ್ಪ ಕೆ.ಎಸ್.ನ." ಬಿಡುಗಡೆಯಾಗಿದೆ. ಈ ಮೌಲಿಕ ಕೃತಿಯನ್ನು ಎಲ್ಲರೂ ಕೊಂಡು ಪ್ರೋತ್ಸಾಹಿಸಿ ಎಂದು ಮನವಿ ಮಾಡಿದರು.



ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಪ್ರಸ್ತುತಿಗಾಗಿ ಮೊದಲೇ ನೋಂದಾಯಿಸಿದ್ದ ಎಲ್ಲ ಹತ್ತೊಂಬತ್ತು ಲೇಖಕರೂ ತಂತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಪಡಿಸಿದರು.

ಎಲ್ಲರ ಪ್ರಸ್ತುತಿಗಳು ಮುಗಿದ ನಂತರ ದಾಸೋಹದ ಅಧ್ಯಕ್ಷರಾದ ಶ್ರೀ ಜಿ.ಎನ್.ನರಸಿಂಹ ಮೂರ್ತಿ ಅವರು, ಎಲ್ಲ ಸಾಹಿತ್ಯ ದಾಸೋಹಿಗಳಿಗೂ ತಮ್ಮ ಅಭಿನಂದನೆಗಳನ್ನು ತಿಳಿಸಿ, ವೇದಿಕೆಯಲ್ಲಿ ಎಲ್ಲರೊಡನೆ ಬೆರೆಯಲು ಅವಕಾಶ ನೀಡುವ ಸಾಹಿತ್ಯ ದಾಸೋಹದ ಅಧ್ಯಕ್ಷತೆಗೆ ತಮ್ಮನ್ನು ಆಹ್ವಾನಿಸಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು. ವೇದಿಕೆಯಲ್ಲಿ ಪ್ರಸ್ತುತವಾಗುವ ವೈವಿಧ್ಯಮಯ ವಿಷಯಾಧಾರಿತ ಲೇಖನ, ಕತೆ, ಕವನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಎಲ್ಲ ಪ್ರಸ್ತುತಿಗಳ ಬಗ್ಗೆಯೂ ತಮ್ಮ ಎಂದಿನ ಹಸನ್ಮುಖ, ಸಮಾಧಾನದ, ಪ್ರಸ್ತುತಿಗಳ ಸಾರವನ್ನು ಹರಳುಗಟ್ಟಿಸಿದ, ಪ್ರೋತ್ಸಾಹ ನೀಡುವ, ಮೌಲಿಕ ಅನಿಸಿಕೆಗಳನ್ನು ದಾಖಲಿಸಿದರು. ಪ್ರತಿಯೊಬ್ಬ ಲೇಖಕರ ಲೇಖನಿಯ ಸತ್ವವನ್ನು ವಿವರಿಸುತ್ತಾ, ಸಾಹಿತ್ಯ ಅವಲೋಕನಾಕಾರರಿಗೆ ಇರಬೇಕಾದ ಸೂಕ್ಷ್ಮದೃಷ್ಟಿಯ ಮಹತ್ವವನ್ನು ದಾಸೋಹಿಗಳಿಗೆ ಮನದಟ್ಟು ಮಾಡಿಕೊಟ್ಟರು.

ಅಂತಿಮವಾಗಿ ಶ್ರೀ ಕೆ.ಎನ್.ಮಹಾಬಲ ಅವರಿಂದ ವಂದನಾರ್ಪಣೆಯೊಂದಿಗೆ ಮೇ ತಿಂಗಳ ಹಾಗೂ 237ನೇ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀಮತಿ ರೇಣುಕಾ ದೇಸಾಯಿ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

(ಇಡೀ ಕಾರ್ಯಕ್ರಮದ ಪೂರ್ಣ ಆವೃತ್ತಿ ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ಲಭ್ಯವಿದೆ)

***



ತಿಂಗಳ ಬೆಳಕು - 15

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಭಾವಗೀತೆಗಳ ಭಾವಯಾನ"

ಉಪನ್ಯಾಸಕರು : ಡಾ. ಶುಭಶ್ರೀ ಪ್ರಸಾದ್

ಕಾರ್ಯಕ್ರಮ ವರದಿ: ಹ.ವಾ. ಶ್ರೀಪ್ರಕಾಶ್

ಮೇ ತಿಂಗಳ 'ತಿಂಗಳು ಬೆಳಕು' ಅಡಿಯಲ್ಲಿ 15ನೇ ಕಾರ್ಯಕ್ರಮವಾಗಿ ದಿನಾಂಕ 25.05.2025ರಂದು ಭಾನುವಾರ ಸಂಜೆ 5.30ಕ್ಕೆ ಡಾ ಶುಭಶ್ರೀ ಪ್ರಸಾದ್ ಅವರಿಂದ 'ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ'ಯ ಗೂಗಲ್ ಮೀಟ್ ಅಂತರಜಾಲ ವಾಹಿನಿಯಲ್ಲಿ 'ಭಾವಗೀತೆಗಳ ಭಾವಯಾನ' ಎಂಬ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

'ತಿಂಗಳ ಬೆಳಕು' ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸುಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ರಂಗರಾಜನ್ ರವರು ಡಾ. ಶುಭಶ್ರೀ ಪ್ರಸಾದ್ ಅವರನ್ನು ಪರಿಚಯಿಸಿದರು.

ಭಾವಗೀತೆಗಳ ಹುಟ್ಟು ಮತ್ತು ಬೆಳವಣಿಗೆಯ ಬಗೆಗಿನ ವಿಶ್ಲೇಷಣೆಯೊಂದಿಗೆ ಶ್ರೀಮತಿ ಶುಭಶ್ರೀ ಪ್ರಸಾದ್ ತಮ್ಮ ಉಪನ್ಯಾಸವನ್ನು ಆರಂಭಿಸಿದರು. ಅವರ ಉಪನ್ಯಾಸದಲ್ಲಿ ಮೂಡಿಬಂದ ಕೆಲವು ಬಹು ಮುಖ್ಯ ಅಂಶಗಳು ಹೀಗಿವೆ.

- ಮನುಷ್ಯ ಭಾವಜೀವಿ. ಭಾವಗೀತೆಗಳು ಎಂದರೆ ಹೆಸರೇ ಹೇಳುವಂತೆ ಭಾವ ತುಂಬಿದ ಗೀತೆ. ಮನದ ಮುದಕ್ಕೆ ಅದು ಮಧುರವಾದ ಮಾಧ್ಯಮ. ಇವು ಹಾಡಲು ಅನುಕೂಲವಾದ ಲಕ್ಷಣಗಳುಳ್ಳ ಕವನಗಳು.
- 18ನೇ ಶತಮಾನದಲ್ಲಿ ಪಾಶ್ಚಾತ್ಯದಲ್ಲಿ ಇದು ಏರು ಮುಖವಾಗಿ ಕಂಡುಬಂದಿತು ಕ್ರಿಸ್ತಪೂರ್ವ 7–8ನೇ ಶತಮಾನದಲ್ಲಿ ಗ್ರೀಕ್ ದೇಶದಲ್ಲಿ ಈ ಪ್ರಕಾರ ಇತ್ತು ಎಂದು ಹೇಳುತ್ತಾರೆ.
- ಭಾವ ಎನ್ನುವುದು ಮನದೊಳಗೆ ಉಕ್ಕುವ ಒಂದು ಒರತೆ.ಭಾವವಿಲ್ಲದೆ ಜೀವವಿಲ್ಲ ಎಂದರೆ ಉತ್ಪ್ರೇಕ್ಷೆಯಲ್ಲ. ಭಾವಗೀತೆಯ ಸ್ವರೂಪ ಕನ್ನಡದಲ್ಲಿ ಮೊದಲು ಕಾಣಿಸಿ ಕೊಂಡದ್ದು 19ನೇ ಶತಮಾನದ ಕೊನೆಯ ಭಾಗದಲ್ಲಿ.
- ಇಂಗ್ಲಿಷ್ ಸಾಹಿತ್ಯ ಸಂಪರ್ಕ ಆಧುನಿಕ ಕನ್ನಡ ಸಾಹಿತ್ಯದ ಮಟ್ಟಿಗೆ ಭರವಸೆಯ ದೊಡ್ಡ ಬಾಗಿಲನ್ನು ತೆರೆಯಿತು. ಭಾವಗೀತೆ ಎನ್ನುವುದು ಗ್ರೀಕಿನ ಲೈರ್ ಎಂಬ ಪದದಿಂದ ಉತ್ಪತ್ತಿಯಾದ ಲಿರಿಕ್ ಎಂಬ ಆಂಗ್ಲ ಪದಕ್ಕೆ ಸಮಾನವಾದ ಕನ್ನಡ ರೂಪ. ಶೃತಿಗೆ ಉಪಯೋಗಿಸುವ ತಂತಿವಾದ್ಯಕ್ಕೆ ಲೈರ್ ಎನ್ನುತ್ತಿದ್ದರು. ಇದರಿಂದ ಭಾವಗೀತೆ ಗೇಯಾತ್ಮಕವಾದುದು ಎಂದು ಅರ್ಥವಾಗುತ್ತದೆ.



- ವೇದ, ಉಪನಿಷತ್ತು, ಸ್ತೋತ್ರಗಳಲ್ಲಿ ಭಾವಗೀತೆಯ ಲಕ್ಷಣಗಳನ್ನು ಕಾಣಬಹುದು. ಮುಕ್ತಕ ಬಹುಮಟ್ಟಿಗೆ ಭಾವಗೀತೆಯನ್ನು ಹೋಲುತ್ತದೆ. ನಮ್ಮ ಜನಪದದಲ್ಲೂ ಭಾವಗೀತೆಯ ಅಂಶ ಎಷ್ಟೋ ಇತ್ತು. ಪಂಪನ ಕಾವ್ಯ, ಹರಿಹರನ ಪುಷ್ಪರಗಳೆ, ಮೊದಲಾದ ನಮ್ಮ ಪ್ರಾಚೀನ ಕಾವ್ಯಗಳಲ್ಲೂ ಭಾವಗೀತೆಯ ಅಂಶಗಳನ್ನು ಕಾಣಬಹುದು. ವಚನ ಸಾಹಿತ್ಯದಲ್ಲೂ ಭಾವನಾತ್ಮಕ ಸ್ಪರ್ಶ ಇರುವ ಅನೇಕ ವಚನಗಳನ್ನು ಕಾಣುತ್ತೇವೆ. (ಉದಾ: ನುಡಿದರೆ ಮುತ್ತಿನ ಹಾರದಂತಿರಬೇಕು). ಹರಿದಾಸರ ಕೀರ್ತನೆಗಳಲ್ಲಿ ಭಾವಗೀತೆಗಳನ್ನು ಸೊಗಸಾಗಿ ಗುರುತಿಸಬಹುದು (ಉದಾ: ಗಿಳಿಯು ಪಂಜರದೊಳಿಲ್ಲ).
- ಒಂದು ಸಣ್ಣ ಘಟನೆ ಕವಿ ಮನಸ್ಸಿನಲ್ಲಿ ಪುಟಗೊಂಡು ರೂಪುಗೊಳ್ಳುವ ರೀತಿ ವೈವಿಧ್ಯಮಯವಾಗಿರುತ್ತದೆ. 1950ರಿಂದ ಈಚೆಗೆ ನವ್ಯ ಕಾವ್ಯ ಮೂಡಿಬಂದರೂ ಭಾವಗೀತೆಗಳ ಒಲವು ಹಿಂಗಲಿಲ್ಲ. 50 ವರ್ಷಗಳ ಅವಧಿಯಲ್ಲಿ ಈ ಕಾವ್ಯ ಪ್ರಕಾರದಲ್ಲಿ ಆದ ಪ್ರಯೋಗ ಮತ್ತು ಸಾಧನೆ ಬೆರಗುಗೊಳಿಸುವಂತಹದು.
- ಪ್ರಾಸತ್ಯಾಗ ಸುಲಭವಲ್ಲ. ಈ ಬಗ್ಗೆ 1911ರಲ್ಲಿ ಪ್ರಾಸ ಬಿಟ್ಟು ಬರೆಯ ತೊಡಗಿದವರು ಗೋವಿಂದ ಪೈಗಳು. ಇದು ಮುಂದೆ ನಿರರ್ಗಳವಾಗಿ ಬರೆದು ವಸ್ತುವಿನಲ್ಲಿ ನೂತನತೆ ತರಲು ಅವಕಾಶ ನೀಡಿತು.
- ಕವಿಯ ವ್ಯಕ್ತಿನಿಷ್ಠ ಅನುಭವದ ತೀವ್ರ ಸಂವೇದನಾ ರೂಪವಾದ ಗೇಯರೂಪದ ಸಶಕ್ತ ಅಭಿವ್ಯಕ್ತಿಯೇ ಭಾವಗೀತೆ. ಭಾವಗೀತೆಗೆ ಛಂದಸ್ಸಿನ ಲಯ ಒಂದೇ ಸಾಕು. ಈ ಲಯವನ್ನು ಕೂಡ ಲೆಕ್ಕಾಚಾರದಿಂದ ಅಳೆಯಬಾರದು ಎಂದು ತೀನಂಶ್ರೀಯವರು ಹೇಳಿದ್ದಾರೆ.
- ಭಾವಗೀತೆಗಳು ಅನುಭವಜನ್ಯವಾದ ರಸಪೂರ್ಣವಾದ ಕಾವ್ಯ. ಹಾಡಾಗಿ ಕೇಳುವುದು ಕರ್ಣರಸಾಯನ. ಕನ್ನಡದಲ್ಲಿ ಭಾವಗೀತೆಗಳ ಲೋಕ ದೊಡ್ಡದು. ಅನೇಕ ಕಲಾವಿದರು ಭಾವಗೀತೆಗಳನ್ನು ಹಾಡಿ ಮನೆ ಮನೆಗೆ ತಲುಪಿಸಿದ್ದಾರೆ. ಎಷ್ಟೋ ಕವಿತೆಗಳು ರಾಗವನ್ನು ಕಾಣದೆ ಮೂಲೆಯಲ್ಲಿ ಉಳಿದುಬಿಟ್ಟಿವೆ. ಸೊಗಸಾದ ಮಾಧುರ್ಯ ಪೂರ್ಣ ಗಾಯನಕ್ಕೆ ವಾದ್ಯಗಳ ರಸಪೂರ್ಣ ಜೊತೆ ಇದ್ದರೆ ಸ್ವರ್ಗಕ್ಕೆ ಒಂದೇ ಗೇಣು ಎಂದ ಅವರು, ಕನ್ನಡ ಸುಗಮ ಸಂಗೀತ ಲೋಕಕ್ಕೆ ಕೊಡುಗೆ ನೀಡಿದ ಅನೇಕ ಹಿರಿ ಕಿರಿಯ ಕವಿಗಳು ಹಾಗೂ ಹಾಡುಗಾರರನ್ನು ತಮ್ಮ ಮಾತಿನ ನಡುವೆ ಸ್ಮರಿಸಿ, ಅವರ ಗೀತೆಗಳಲ್ಲಿ ಅಡಕವಾದ ವಿವಿಧ ಭಾವನಾತ್ಮಕ ಸಂಗತಿಗಳನ್ನು ವಿಶ್ಲೇಷಿಸಿದರು. ಮಧ್ಯೆ ಮಧ್ಯೆ ಹಲವು ಆಯ್ದ ಭಾವಗೀತೆಗಳ ಧ್ವನಿಮುದ್ರಿಕೆಗಳನ್ನು ಕೇಳಿಸಿ ಆಯಾ ಗೀತೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಸುಮಾರು ಒಂದು ಗಂಟೆಗಳ ಕಾಲ ಭಾವಗೀತೆಗಳ ಭಾವಯಾನದಲ್ಲಿ ಶ್ರೋತೃಗಳನ್ನು ಕೊಂಡೊಯ್ದ ಡಾ. ಶುಭಶ್ರೀ ಪ್ರಸಾದ್ ಅವರ ಉಪನ್ಯಾಸ ವಿಚಾರ ಪ್ರಚೋದಕವಾಗಿತ್ತು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಹಲವು ಸದಸ್ಯರು ಭಾಗವಹಿಸಿದರು.

ಕೊನೆಯಲ್ಲಿ ಶ್ರೀಮತಿ ರೇಣುಕಾ ದೇಸಾಯಿಯವರು ವಂದನಾರ್ಪಣೆ ಸಲ್ಲಿಸುವುದರೊಂದಿಗೆ 'ಭಾವಗೀತೆಗಳ ಭಾವಯಾನ' ಕಾರ್ಯಕ್ರಮ ಮುಕ್ತಾಯವಾಯಿತು.

(ಇಡೀ ಕಾರ್ಯಕ್ರಮ ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ಲಭ್ಯವಿದೆ)

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ತೊಂಗಲು" ಪ್ರಬಂಧ ಸಂಕಲನ ಬಿಡುಗಡೆ

ಕಾರ್ಯಕ್ರಮ ವರದಿ: ರೇಣುಕಾ ದೇಸಾಯಿ



ಭಾನುವಾರ, 30 ಮಾರ್ಚ್ 2025ರಂದು ಚಂದ್ರಮಾನ ಯುಗಾದಿ. ಆ ದಿನ ಬೆಳಿಗ್ಗೆ 6:00ರಿಂದ ರಾತ್ರಿ 8:00 ಗಂಟೆಯವರೆಗೆ ನಿಮ್ಮ ಅನುಭವದಲ್ಲಿ ಕಂಡುಂಡ ಸಿಹಿಕಹಿಗಳ ನೆನಪುಗಳನ್ನು ಸುಮಾರು 350 ಪದಗಳಲ್ಲಿ ಕಿರು ಪ್ರಬಂಧ ರೂಪದಲ್ಲಿ ಬರೆದು ಪ್ರಸ್ತುತಪಡಿಸಿ, ಎಂದು ಸಂಚಾಲಕ ಸಮಿತಿಯ ಪರವಾಗಿ ಶ್ರೀರಂಗರಾಜನ್ ಅವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಒಂದು ಮನವಿಯನ್ನು ಪ್ರಕಟಿಸಿದರು. ಈ ಅಭಿಯಾನಕ್ಕೆ "ಸ್ವಾನುಭವದ ಬೇವು ಬೆಲ್ಲ–ಕಿರು ಪ್ರಬಂಧಗಳ ಹೋಳಿಗೆ" ಎನ್ನುವ ಸುಂದರ ಹೆಸರನ್ನು ಕೊಡಲಾಗಿತ್ತು.

ಈ ಮನವಿಗೆ ವೇದಿಕೆಯ ಸದಸ್ಯರಿಂದ ಅಭೂತಪೂರ್ವ ಸ್ಪಂದನೆ ದೊರೆಯಿತು. ಅಂದು 37 ಸದಸ್ಯರು 50 ಪ್ರಬಂಧಗಳನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸಿದರು. 350 ಪದಗಳ ಮಿತಿಯಲ್ಲಿ ವೈವಿಧ್ಯಮಯ ಪ್ರಬಂಧಗಳು ಮೂಡಿ ಬಂದವು. ಹೆಚ್ಚು ಕಡಿಮೆ ಎಲ್ಲವೂ ಸ್ವಾನುಭವವೇ ಆಗಿದ್ದವು. ಕೆಲವು ಪ್ರಬಂಧಗಳು ಮನಸ್ಸನ್ನು ಮುಟ್ಟಿದವು, ಇನ್ನು ಕೆಲವು ಪ್ರಬಂಧಗಳು ಹಬ್ಬದ ಆಚರಣೆಯನ್ನು ವಿವಿಧ ರೀತಿಯನ್ನು ಬಣ್ಣಿಸಿದವು. ಒಟ್ಟಿನಲ್ಲಿ ಬೇವು ಬೆಲ್ಲದ ಸಮ್ಮಿಶ್ರಣ ಬಲು ಹಿತವಾಗಿತ್ತು. ಈ ಅಭಿಯಾನದ ಸಂಚಾಲಕರಾಗಿದ್ದ ಶ್ರೀ ರಾಜನ್ ಅವರು 'ಈ ಪ್ರಬಂಧಗಳನ್ನು ಪಿಡಿಎಫ್ ರೂಪದಲ್ಲಿ ಇಡುವುದು ಬೇಡ, ವಿಶ್ವಾವಸು ಯುಗಾದಿಯ ವಿಶೇಷಾಂಕ ಮಾಡೋಣ' ಎಂದರು. ಅವರಿಗೆ ಜೊತೆಗೂಡಿದವರು ಶ್ರೀ ಗುರುರಾಜ್ ಶಾಸ್ತ್ರಿ. ವಿಶೇಷಾಂಕದ ಪ್ರತಿ ಪ್ರಬಂಧಗಳನ್ನು ಸುಂದರವಾದ ಸೂಕ್ತವಾದ ಚಿತ್ರದೊಂದಿಗೆ ಜೋಡಿಸಿ ಡಿಟಿಪಿ ಮಾಡಿ ಸಂಚಿಕೆಯನ್ನು ಸಿದ್ಧಪಡಿಸಿದರು. ಸ್ನೇಹ ಬುಕ್ ಹೌಸ್‌ನ ಶ್ರೀ ಪರಶಿವಪ್ಪನವರು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಉತ್ಸಾಹ ತೋರಿದರು. ಹೀಗೆ ಅಲ್ಪ ಸಮಯದಲ್ಲಿ ಮೂಡಿಬಂದ 48 ಪ್ರಬಂಧಗಳ ಸಂಕಲನವೇ "ತೊಂಗಲು".



ಈ ಪುಸ್ತಕದ ಬಿಡುಗಡೆಯ ಕಾರ್ಯಕ್ರಮವನ್ನು ದಿನಾಂಕ 04.05.2025ರ ಭಾನುವಾರ ಸಂಜೆ 5:00 ಗಂಟೆಗೆ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ 'ಕಪ್ಪಣ್ಣ ಅಂಗಳದಲ್ಲಿ' ಹಮ್ಮಿಕೊಳ್ಳಲಾಗಿತ್ತು.

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.



'ತೊಂಗಲು' ಸಂಪಾದಕರಲ್ಲೊಬ್ಬರಾದ ಶ್ರೀ ಗುರುರಾಜ ಶಾಸ್ತ್ರಿಗಳು ಸಭೆಯ ಅಧ್ಯಕ್ಷತೆ ವಹಿಸಿದ ಶ್ರೀ ಬೆಂ.ಶ್ರೀ.ರವೀಂದ್ರ ಮತ್ತು ಪುಸ್ತಕದ ಬಗೆಗೆ ಮಾತನಾಡಲು ಆಗಮಿಸಿದ ಡಾ. ಜೆ.ಎನ್. ಜಗನ್ನಾಥ್ ಅವರುಗಳನ್ನು ವೇದಿಕೆಗೆ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು ಮತ್ತು ಕಾರ್ಯಕ್ರಮದ ಪ್ರಸ್ತಾವನೆಯನ್ನು ನಿರ್ವಹಿಸಿದರಲ್ಲದೆ, ಎಲ್ಲ ಸಭಿಕರನ್ನೂ ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ಹೆಸರಾಂತ ನಾಟಕಕಾರ, ಲೇಖಕ ಶ್ರೀಯುತ ಧೀರೇಂದ್ರ ಅವರು ವಿಶೇಷ ಪೋಷಾಕಿನಲ್ಲಿ ಆಗಮಿಸಿ, ಕೈಲಾಸಂ ಅವರ "ನಂಕಂಪ್ನಿ" ನಾಟಕದ ಹಾಡನ್ನು ಈ ಕಾರ್ಯಕ್ರಮಕ್ಕೆ ಅನುಗುಣವಾಗಿ ಸಾಹಿತ್ಯ ಬದಲಿಸಿ,

ಬನ್ನಿರಿ ಭಾಮೆಯರೆಲ್ಲ ತೋಟದೊಳು ಆಡುವ
ಪೊನ್ನು ಲತೆಗಳ ಸೊಬಗಿಗೆ ಮನವನ್ನು ಸೋತು ಪಾಡುವ

ಬನ್ನಿರಿ ಲೇಖಕರೆಲ್ಲಾ ತೊಂಗಲು ಬಿಡುಗಡೆಗೆ
ಹೊಂಗೆ ಹೂವಿನ ತೊಂಗಲಂದದಿ
ನಾವು ಕಟ್ಟಿದ ಕಥೆಗಳೂ...
ಸ್ವಾನುಭವದ ಬೇವು-ಬೆಲ್ಲದ
ರಸಪಾಕವಿದನು ಸವಿಯುವಾ
ಬನ್ನಿರೀ ಲೇಖಕರಲ್ಲಾ ತೊಂಗಲು ಬಿಡುಗಡೆಗೆ...

ಎಂದು ರಂಗಗೀತೆಯನ್ನು ಹಾಡುತ್ತ, ಅಭಿನಯಿಸುತ್ತ, ಸಭಾಂಗಣದಲ್ಲಿ ಆಸೀನರಾಗಿದ್ದ ಎಲ್ಲ 37 ಜನ ಲೇಖಕರನ್ನು ಪುಸ್ತಕ ಬಿಡುಗಡೆಗೆ ಆಹ್ವಾನಿಸಿದ್ದು ಒಂದು ವಿಶೇಷ ರೋಮಾಂಚನ, ಸಂತೋಷ ಸಭಿಕರಲ್ಲಿ ಮೂಡಿಸಿತು. ಅಂದು ಸಭೆಯಲ್ಲಿ ಉಪಸ್ಥಿತರಿದ್ದ ಲೇಖಕರೆಲ್ಲಾ ಅವರೊಂದಿಗೆ ವೇದಿಕೆಗೆ ಆಗಮಿಸಿ ವಿನೂತನ ರೀತಿಯಲ್ಲಿ ಪುಸ್ತಕ ಬಿಡುಗಡೆ ಮಾಡಿದರು.





ನಂತರ, ಪುಸ್ತಕದಲ್ಲಿನ ಪ್ರಬಂಧಗಳ ಬಗ್ಗೆ ಡಾ.ಜಿ.ಎನ್.ಜಗನ್ನಾಥ್ ಅವರು ಮಾತನಾಡಿದರು. ಎಲ್ಲಾ 48 ಪ್ರಬಂಧಗಳನ್ನೂ ಮೊದಲೇ ಓದಿ, ಮನನ ಮಾಡಿಕೊಂಡು, ಸಮರ್ಪಕವಾಗಿ ತಮ್ಮ ಕಂಚಿನ ಕಂಠದಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡಿದ ರೀತಿ ಸಭೆಯಲ್ಲಿದ್ದ ಎಲ್ಲರಿಗೂ 'ತೊಂಗಲು' ಪುಸ್ತಕವನ್ನು ಒಮ್ಮೆ ಓದಲೇಬೇಕು ಎನ್ನುವ ಹಂಬಲವನ್ನುಂಟು ಮಾಡಿತು. ಅವರ ಮಾತುಗಳು ಕಾಂತೀಯವಾಗಿ ಎಲ್ಲರನ್ನೂ ಆಕರ್ಷಿಸಿದುವು. (ವಿವಿಧ ಪ್ರಬಂಧಗಳ ಬಗ್ಗೆ ಡಾ. ಜಗನ್ನಾಥ್ ಅವರ ವಿಶ್ಲೇಷಣಾ ಬರಹವನ್ನು ಈ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.)

ಪ್ರಬಂಧಕಾರರ ಪರವಾಗಿ ಶ್ರೀ ಎನ್.ಶಂಕರ ರಾವ್, ಶ್ರೀಮತಿ ಅನುರಾಧ ನಟರಾಜ್, ಶ್ರೀ ಕೆ.ಆರ್.ಎಸ್. ಮೂರ್ತಿ, ಶ್ರೀಮತಿ ಅನುರಾಧ ನಟರಾಜ್ ಅವರು ಅಭಿಯಾನದ ಆರಂಭದಿಂದ ಪುಸ್ತಕ ಬಿಡುಗಡೆಯಾಗುವ ಕ್ಷಣದವರೆಗಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅವರ ಅನಿಸಿಕೆಗಳು ಸಂಕ್ಷಿಪ್ತವಾಗಿ ಹೀಗಿವೆ:



ಶ್ರೀ ಎನ್. ಶಂಕರ್ ರಾವ್:

“ಕಥೆಗಳು ಸ್ವಾಭಾವಿಕವಾಗಿ ವಾಸ್ತವಕ್ಕೆ ಕಲ್ಪನೆಯ ಮೆರುಗು ನೀಡುತ್ತವೆ. ಆದರೆ ಇದರಲ್ಲಿನ ಪ್ರಬಂಧಗಳು ಎಲ್ಲವೂ ಸ್ವಾನುಭವ, ಉತ್ಪ್ರೇಕ್ಷೆ ಇಲ್ಲದ ಸರಳ ನಿರೂಪಣೆ. ಆ ಅಂಶವೇ ಈ ಪುಸ್ತಕದ ವೈಶಿಷ್ಟ್ಯತೆ ಅಂದರೆ ತಪ್ಪಿಲ್ಲ” ಎಂದರು. ಹಾಗೇನೇ ದಾಸರ ಪದದ ಒಂದೆರಡು ಸಾಲು ಉದಾಹರಿಸಿ,

"ಅನುಭವದಡಿಗೆಯ ಮಾಡಿ
ಅದಕನುಭವಿಗಳು ಬಂದು ನೀವೆಲ್ಲ ಕೂಡಿ"

ಹಾಗೆಯೇ ನೀವೆಲ್ಲ ಸ್ವಾನುಭವದ ಪ್ರಬಂಧಗಳನ್ನು ಬರೆದು, ಅದರ (ಸಮಾರಾಧನೆ) ಸಮಾರಂಭದಲ್ಲಿ ಭಾಗವಹಿಸುತ್ತಿರುವಿರಿ. ನಮ್ಮ ಸ್ವಾನುಭವದ ಬೇವು ಬೆಲ್ಲ, ನಲವತ್ತೆಂಟು ಪ್ರಬಂಧಗಳ ತೊಂಗಲು ಸಹ ತನ್ನ ಪರಿಮಳ ಬೀರುವ ಮೂಲಕ ಎಲ್ಲರ ಮನ ಗೆಲ್ಲುವುದು ಎಂಬುದು ಸತ್ಯ” ಎಂದು ತಮ್ಮ ಅನುಭವ ಹಂಚಿಕೊಂಡರು. ಅಲ್ಲದೆ ತಮ್ಮ ಈ ಹನಿಗವನವನ್ನೂ ವಾಚಿಸಿ, ಮಾತು ಮುಗಿಸಿದರು.



"ಸ್ವಾನುಭವದ ತೊಂಗಲಲಿ
ಸಂತಸ ದುಃಖ ಮಿಶ್ರಿತ
ಕಿರು ಪ್ರಬಂಧಗಳ ಅಭಿಯಾನದಲಿ/
ಜೀವನದ ಬೇವು ಬೆಲ್ಲ
ಆಸ್ವಾದಿಸುವ ನಾವೆಲ್ಲ ಜೊತೆ ಜೊತೆಯಲಿ //"

ಶ್ರೀಮತಿ ಅನುರಾಧಾ ನಟರಾಜ್:

ಈ ಅಭಿಯಾನ ತುಂಬಾ ಸೊಗಸಾಗಿ, ಸುಂದರವಾಗಿ ಮೂಡಿಬಂತು. ಇಂತಹ ಅಭಿಯಾನಗಳು ಪ್ರತಿ ವಿಶೇಷ ದಿನಗಳಲ್ಲೂ ಆಗಬೇಕು. ವೇದಿಕೆ ಹೊಸ ಹೊಸ ವಿಚಾರಗಳಿಂದ ಅಭಿಯಾನ ನಡೆಸಬೇಕು. ಇಂತಹ ಅಭಿಯಾನಗಳಿಂದ ಎಲ್ಲರನ್ನೂ ಬರವಣಿಗೆಗೆ ಪ್ರೋತ್ಸಾಹಿಸಿದಂತೆ ಆಗುತ್ತದೆ. ನೀವು ಸ್ವಾನುಭವದ ಬೇವು ಬೆಲ್ಲ ಅನುಭವ ಬರೆಯಿರಿ ಎಂದು ಆಹ್ವಾನ ಕೊಟ್ಟಿದ್ದರಿಂದ ನನಗೂ ಕೂಡ ಬರೆಯಬೇಕೆಂಬ

ಅಭಿಲಾಷೆಯಾಗಿ ಅದರಂತೆ ಲೇಖನವನ್ನು ಬರೆದೆನು. ಈ ಅಭಿಯಾನದಲ್ಲಿ ಪ್ರಬಂಧಕಾರರಿಗೆ ನೀವು ಪ್ರಮಾಣಪತ್ರ ಕೊಟ್ಟಿರುವಿರಿ. ಅದು ಸುಂದರವಾಗಿದೆ, ಆದರೆ ಅದರ ಅವಶ್ಯಕತೆ ಇರಲಿಲ್ಲವೇನೋ ಎನ್ನುವ ಮನಸ್ಸಿನ ಮಾತನ್ನು ಕೂಡ ಹಂಚಿಕೊಂಡರು.



ಶ್ರೀ ಕೆ.ಆರ್.ಎಸ್. ಮೂರ್ತಿ:

"ಈ ಅಭಿಯಾನದ ಕಿರುಬರಹ ಬರೆಯುವಾಗಿನ ನನ್ನ ತಯಾರಿ ಬಗ್ಗೆ ಒಂದು ಮಾತು. ಯಾವುದೇ ಬರಹಕ್ಕೆ ಸರಳೀಕೃತ ಅಭಿಪ್ರಾಯದಲ್ಲಿ ಮೂರು ಅಂಶಗಳು ಮುಖ್ಯವಾಗುತ್ತೆ. ಅವು ಯಾವ್ಯಾವುದು ಎಂದರೆ ಮೊದಲನೆಯದು ಘಟನೆ ಅಥವಾ ಅನುಭವ (ವಸ್ತು), ಎರಡನೆಯದು ನಿರೂಪಣಾ ಶೈಲಿ ಮತ್ತು ಮೂರನೆಯದು ಚಿಂತನೆ ಅಥವಾ ಸಂದೇಶ. ಈ ಮೂರೂ ಚೆನ್ನಾಗಿದ್ದರೆ ಬರಹದ ಒಟ್ಟಾರೆ ಪರಿಣಾಮವೂ ಚೆನ್ನಾಗಿರುತ್ತದೆ ಎಂಬುದು ಗುರಿಯಾಗಿತ್ತು.

ಸ್ವಾನುಭವದ ಪ್ರಬಂಧ, ಅಥವಾ ಬರಹಗಳಲ್ಲಿ ಸನ್ನಿವೇಶ, ಸಂಭಾಷಣೆ, ಘಟನೆಗಳು ಇವೆಲ್ಲಾ ಹೇಗಿತ್ತೋ ಹಾಗೆಯೇ, ನೈಜತೆಯ ಚೌಕಟ್ಟು ಬಿಡದೆ ಪ್ರಾಮಾಣಿಕವಾಗಿರ ಬೇಕು. ಇಲ್ಲಿ ಹೆಚ್ಚಿನ ಅನವಶ್ಯಕ ಬೆಳವಣಿಗೆಗೆ ಅವಕಾಶವಿಲ್ಲ. ಇದ್ದದ್ದನ್ನು ಇದ್ದ ಹಾಗೆ, ಆದದ್ದನ್ನು ಆದಹಾಗೆ ಹೇಳಬೇಕು. ಆ ದೃಷ್ಟಿಯಿಂದ -ಎಲ್ಲರ ಸಫಲತೆಯ ಹೊತ್ತಿಗೆ- ತೊಂಗಲು ಒಂದು 'ನೈಜತೆಯ ಸಿಹಿ-ಕಹಿ ಪೆಟ್ಟಿಗೆ' ಇದ್ದ ಹಾಗೆ. ಸ್ವಾನುಭವದ ಬರಹಗಳ ಘಟನೆ ಅಥವಾ ಸನ್ನಿವೇಶ ವಿವರಣೆಗೆ ಒಂದು ಆತ್ಮ ಇರುತ್ತದೆ ಮತ್ತು ಸದಾಕಾಲ ಧ್ವನಿಸತಕ್ಕಂತಹ ಜೀವಾಳ ಅದಕ್ಕೆ ಇರುತ್ತದೆ. ಇಲ್ಲಿನ ಬರಹಗಾರರ ಅನುಭವಗಳು ಓದುಗರ ಬದುಕಿಗೂ ಒಂದು ಕನೆಕ್ಟ್ ತರಬಲ್ಲವಂತಹವು. ಅಷ್ಟಿಷ್ಟು ವ್ಯತ್ಯಾಸಗಳಿರಬಹುದು, ಆದರೆ ಭಾವ-ಪ್ರಭಾವ ಅಂದರೆ ಉತ್ಪತ್ತಿ ಆಗತಕ್ಕಂತಹ ಭಾವನೆ, ಚಿಂತನೆಗಳು ಒಂದೇ ಆಗಬಹುದು. ಅದೇ ಸ್ವಾನುಭವಗಳ ವಿಶೇಷತೆ.

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್‌ನಂತಹ ಒಟಿಟಿ ಪ್ಲಾಟ್‌ಫಾರಂಗಳ ಎಷ್ಟೇ ಸೀರಿಯಲ್‌ಗಳನ್ನು ನೋಡಿ ಖುಷಿಪಟ್ಟರೂ, ಪ್ರಾಮಾಣಿಕವಾಗಿ ನಿರೂಪಣೆಯಾದ ಅನುಭವ ಕಥನ, ಸತ್ಯಕಥನ – ಡಾಕ್ಯುಮೆಂಟರಿಗಳನ್ನು ನೋಡಿದಾಗ ಸಿಗುವ ಆನಂದ ಮಾತ್ರ ಅನನ್ಯ. ಒಟ್ಟಿನಲ್ಲಿ ತೊಂಗಲು ಆಗಿದ್ದೇನು? ವೈವಿಧ್ಯಮಯ ಅನುಭವಗಳ ನಿರೂಪಣೆ!, ಸಹಜ ಘಟನೆ, ಚಿಂತನೆಗಳ ಆರೋಗಣೆ! ಒಂದು ರೀತಿಯ ಬದುಕಿನ ಸತ್ಯಾನ್ವೇಷಣೆ! ಎಂದು ಅಭಿಯಾನದ ಯಶಸ್ಸನ್ನು ಮನಃಪೂರ್ವಕವಾಗಿ ಹೊಗಳಿದರು.



ಶ್ರೀಮತಿ ರೇಣುಕಾ ದೇಸಾಯಿ:

"ಬದುಕಿನ ಬಂಡಿಯು ಚಲಿಸುತ್ತಿರುವಾಗ, ನಿತ್ಯದ ಜಂಜಡದ ಕೆಲಸದ ಹೊರತಾಗಿ ಏನನ್ನೋ ವಿಶೇಷ ಕಾರ್ಯ ಮಾಡಲು ವರ್ಷಾನುಗಟ್ಟಲೆ ತಲೆಕೆಡಿಸಿಕೊಳ್ಳದೆ, ಅಲ್ಪ ಸಮಯಾವಕಾಶದಲ್ಲಿ ವಿಚಾರಮಾಡಿ, ಮಾಡಿದ ಕೆಲಸ ಸುಂದರವಾಗಿ ಮೂಡಿ ಬರುತ್ತದೆ. ಅದೇ ರೀತಿ ಮೂಡಿಬಂದಿದ್ದು 'ತೊಂಗಲು' ಎನ್ನುವ ಸುಂದರ ಪುಸ್ತಕ.

ಸ್ವಾನುಭವದ ಬೇವು ಬೆಲ್ಲ ಬರೆಯಿರಿ ಎಂದಾಗ ಸಹಜವಾಗಿ ನನಗಂತೂ ಬಾಲ್ಯದಲ್ಲಿ ನಮ್ಮ ಹಳ್ಳಿಯ ವಿಶಾಲವಾದ ಆರಂಕಣದ ಮನೆಯಲ್ಲಿ ಅಜ್ಜಿ, ಅಪ್ಪ-ಅಮ್ಮ, ಅಣ್ಣ-ತಮ್ಮ, ಅಕ್ಕ-ತಂಗಿಯರು ಒಟ್ಟಿಗೆ ಆಚರಿಸಿದ ಹಬ್ಬದ ಚಿತ್ರಣ

ಬರೆಯಬೇಕೆಂಬ ಅಭಿಲಾಷೆ ಮೂಡಿಬಂತು. ಅದನ್ನು ಬರೆಯುತ್ತಾ ಸಂತಸಪಟ್ಟೆ. ನಂತರ ನಮ್ಮದೇ ಮನೆಯ ಒಂದು ಸಣ್ಣ ವಾಟ್ಸಾಪ್ ಗುಂಪು ಇದೆ. ಅಲ್ಲಿ ಮತ್ತು ವೇದಿಕೆಯಲ್ಲಿಯೂ ನನ್ನ ಬರಹ ಅಂಟಿಸಿದೆ. ನನ್ನ ಅಕ್ಕತಂಗಿಯರು ಆ ಬರಹ ಓದಿ, ತಮ್ಮ ಬಾಲ್ಯದ ನೆನಪಿನಾಳಕ್ಕೆ ಹೋದವೆಂದು ಸಂತಸಪಟ್ಟರು. ಆದರೆ ನಮ್ಮೆಲ್ಲರ ಮಕ್ಕಳು ಮಾತ್ರ, ನಿಮ್ಮ ಕೋಡದಹಳ್ಳಿ ಮನೆಯಲ್ಲಿ ಇಷ್ಟು ಸಂಭ್ರಮದಿಂದ ಆಚರಿಸುತ್ತಿದ್ದಿರಾ?! ಎಂದು ಸಂತೋಷಪಟ್ಟರು. ಅಂದೇ ನನಗನ್ನಿಸಿತ್ತು ಈ ಅಭಿಯಾನ ಜಯಭೇರಿ ಬಾರಿಸಿತು, ನಮ್ಮ ಮುಂದಿನ ತಲೆಮಾರಿಗೆ ನನ್ನ ಸ್ವಾನುಭವದ ಬೇವು ಬೆಲ್ಲ ಹಂಚಿಬಿಟ್ಟೆ ಎಂದು. ಹೀಗೆ ಈ ಅಭಿಯಾನ ಸಾರ್ಥಕವಾಯ್ತು ಎಂದರು.

ಮಹಿಳಾ ವಿಶೇಷಾಂಕ – ಮುಖಪುಟದ ಚಿತ್ರ ಬಿಡುಗಡೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು 08ನೆಯ ಮಾರ್ಚ್ 20025ರ ಅಂತಾರಾಷ್ಟ್ರೀಯ ಮಹಿಳಾ ದಿನದಂದು, ಬೆಳಗಿನ 06.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ 'ಅಂದಿನ ಎಲ್ಲಾ ಪ್ರಸ್ತುತಿಗಳು ಮಹಿಳೆಯರ ಕುರಿತಾಗಿ ಮಾತ್ರಾ ಇರಲಿ' ಎಂದು ಸೂಚಿಸಿತು. ಅಂದು ಸಂಜೆ 5.30ಕ್ಕೆ ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ವಿಶೇಷ 'ತಿಂಗಳ ಬೆಳಕು ಕಾರ್ಯಕ್ರಮವನ್ನು ಕೂಡ ಆಯೋಜಿಸಿತ್ತು. ಅಂದು ವೇದಿಕೆಯ 6 ಜನ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳ ಬಗ್ಗೆ ವಿವರಿಸಿದರು. ಅವರ ಉಪನ್ಯಾಸದ ವಿಷಯಗಳು ಹೀಗಿವೆ:

1. ಶ್ರೀಮತಿ ಜಯಂತಿ ಮನೋಹರ್ – ವೇದಕಾಲದ ಮಹಿಳೆಯರು
2. ಶ್ರೀಮತಿ ಜಿ.ವಿ. ನಿರ್ಮಲ – ವಿಜ್ಞಾನ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ
3. ಶ್ರೀಮತಿ ಎಲ್. ಗಿರಿಜಾ ರಾಜ್ – ಕನ್ನಡ ಸಾಹಿತ್ಯ ಹಾಗೂ ಮಹಿಳೆ
4. ಶ್ರೀಮತಿ ಶಾಂತಾ ನಾಗಮಂಗಲ – ಕರ್ನಾಟಕದ ವಿಶೇಷ ಮಹಿಳೆ
5. ಶ್ರೀಮತಿ ರೇಣುಕಾ ದೇಸಾಯಿ – ಕ್ರೀಡೆಗಳಲ್ಲಿ ಮಹಿಳೆಯರ ಪಾತ್ರ
6. ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿ – ಕನ್ನಡದ ಸಣ್ಣ ಕಥೆಗಾರ್ತಿಯರು





ಅಂದು ವೇದಿಕೆಯಲ್ಲಿ ಪ್ರಕಟವಾದ ಎಲ್ಲ ಲೇಖನಗಳು ಮತ್ತು ವಿಶೇಷ ಪ್ರಬಂಧಗಳ ಸಂಕಲನವೇ 'ಸಾಹಿತ್ಯ ದಾಸೋಹ–ಮಹಿಳಾ ವಿಶೇಷಾಂಕ'. ಈ ಸಂಕಲನವನ್ನು ಪಿ.ಡಿ.ಎಫ್. ಪುಸ್ತಕವನ್ನಾಗಿ ರೂಪಿಸಿದವರು ಶ್ರೀ ಶೃಂಗೇಶ್ವರ ಶರ್ಮ. ಸಮಾರಂಭದಲ್ಲಿ ಭಾಗವಹಿಸಿದ್ದ ಎಲ್ಲಾ ಮಹಿಳೆಯರು ವೇದಿಕೆ ಏರಿ, ಈ ಮಹಿಳಾ ವಿಶೇಷಾಂಕದ ಮುಖಪುಟವನ್ನು ಬಿಡುಗಡೆ ಮಾಡಿದ್ದು ವಿಶೇಷ. ಸಭಾಂಗಣದಲ್ಲಿ ಸಂತೋಷದ ಕಲರವ ತುಂಬಿತ್ತು.

ಸಭೆಯಲ್ಲಿ ಹಾಜರಿದ್ದ ವೇದಿಕೆಯ ಹಿರಿಯ ಸದಸ್ಯರೂ, ಖ್ಯಾತ ಹಾಸ್ಯ ಸಾಹಿತಿಗಳೂ ಆದ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ಮಾತನಾಡಿ, 'ತೊಂಗಲು' ಯುಗಾದಿ ಕಿರು ಪ್ರಬಂಧಗಳ ಹೋಳಿಗೆ ಸಂಪಾದಕದ್ವಯರಾದ ಶ್ರೀ ಶ್ರೀರಂಗರಾಜನ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರು ಬಹುಶಃ ಹೋಳಿಗೆ ಸವಿಯುತ್ತಾ, ಹೊಂಗೆ ಹೂವ ತೊಂಗಲಲ್ಲಿ ಭೃಂಗದ ಸಂಗೀತ ಕೇಳುತ್ತಾ, ಮತ್ತೆ ಮತ್ತೆ ಮರಳಿ ಬರುವ ಯುಗಾದಿಯನ್ನು ನೆನಪಿಸಿಕೊಂಡಿರಬೇಕು. ಆದುದರಿಂದ ಪ್ರಬಂಧ ಸಂಕಲನಕ್ಕೆ 'ತೊಂಗಲು' ಎಂದೂ, ಅಡಿ ಶೀರ್ಷಿಕೆಯಾಗಿ 'ಸ್ವಾನುಭವದ ಬೇವು ಬೆಲ್ಲ – ಕಿರು ಪ್ರಬಂಧಗಳ ಹೋಳಿಗೆ' ಎಂದೂ ನಾಮಕರಣ ಮಾಡಿದ್ದಾರೆ. ಒಂದೇ ದಿನದಲ್ಲಿ ವಿವಿಧ ಲೇಖಕರು 48 ಪ್ರಬಂಧಗಳನ್ನು ರಚಿಸಿ ತಮ್ಮ ವಿಭಿನ್ನ ಬಗೆಯ ಅನುಭವಗಳನ್ನು ದಾಖಲಿಸಿರುವುದು ಅಚ್ಚರಿ ಮೂಡಿಸುತ್ತದೆ. ಪ್ರತಿಯೊಂದು ಪ್ರಬಂಧಕ್ಕೂ ಸರಿಹೊಂದುವಂತಹ ಛಾಯಾಚಿತ್ರಗಳು ಆಕರ್ಷಕವಾಗಿವೆ ಎಂದು ಹೇಳಿ, ತಮ್ಮ ಮಾತಿನ ಮಧ್ಯೆ ಹಲವು ಹಾಸ್ಯ ಚಟಾಕಿಗಳನ್ನು ಹಾರಿಸುವುದರ ಮೂಲಕ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ ಇಂತಹ ಅನೇಕ ಅಭಿಯಾನ ನಡೆಸಿದೆ ಮತ್ತು ನಡೆಸುತ್ತಾ ಇದೆ. ಈ ಯುಗಾದಿಯಲ್ಲಿ ನಾವು ನಡೆಸಿದ 'ಸ್ವಾನುಭವದ ಬೇವು ಬೆಲ್ಲ ಕಿರು ಪ್ರಬಂಧಗಳ ಹೋಳಿಗೆ' ಅಭಿಯಾನಕ್ಕೆ ಉತ್ತಮ ಸ್ಪಂದನೆ ಬಂದಿತು. ಈಗ ಪುಸ್ತಕ ರೂಪವನ್ನು ಪಡೆದಿರುವ ಈ ಕಿರು ಪ್ರಬಂಧಗಳು ಸ ಸ ಕ ಸ ವೇದಿಕೆಯ





ಮತ್ತೊಂದು ಮೈಲಿಗಲ್ಲು. ಇಲ್ಲಿನ ಪ್ರಬಂಧಗಳನ್ನು ಸಂಪಾದಿಸಿ, ಪುಸ್ತಕವನ್ನು ಅಚ್ಚುಕಟ್ಟಾಗಿ ವಿನ್ಯಾಸ ಮಾಡಿದ ಶ್ರೀ ರಂಗರಾಜನ್ ಮತ್ತು ಶ್ರೀ ಗುರುರಾಜ ಶಾಸ್ತ್ರಿ ಇಬ್ಬರಿಗೂ ಅಭಿನಂದನೆಗಳು. ಹಾಗೆಯೇ ನಮ್ಮ ವೇದಿಕೆಯ ಎಸ್. ಶೃಂಗೇಶ್ವರ ಶರ್ಮ ಅವರು ವೇದಿಕೆಯು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ನಡೆಸಿದ ಮಹಿಳೆಯರನ್ನು ಕುರಿತ ಲೇಖನಗಳ ಅಭಿಯಾನದಲ್ಲಿ ಮೂಡಿಬಂದ ಬರಹಗಳನ್ನು ಒಳಗೊಂಡ ಮಹಿಳಾ ವಿಶೇಷಾಂಕವನ್ನು ಪಿ.ಡಿ.ಎಫ್. ರೂಪದಲ್ಲಿ ಹೊರತಂದಿದ್ದಾರೆ. ಇದನ್ನು ನಮ್ಮ ವೇದಿಕೆಯ ಜಾಲತಾಣದಲ್ಲೂ ಹಾಕುತ್ತೇವೆ. ನಂತರ ಅದು ಎಲ್ಲರಿಗೂ ಸದಾ ಲಭ್ಯವಿರುತ್ತದೆ. ಇಂದು ಅದರ ಮುಖಪುಟದ ಬಿಡುಗಡೆ ಆಗಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ. ಒಂದೆರಡು ದಿನಗಳಲ್ಲಿ ಪೂರ್ಣ ಸಂಚಿಕೆಯನ್ನು ವೇದಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಕೊನೆಯಲ್ಲಿ ಶ್ರೀ ಧೀರೇಂದ್ರ ಅವರು ವಂದನಾರ್ಪಣೆ ಸಲ್ಲಿಸಿದರು. ಇಂತಹ ಸುಂದರ ಕಾರ್ಯಕ್ರಮವನ್ನು ಚಾಚೂ ತಪ್ಪದಂತೆ ಕ್ರಮಬದ್ಧವಾಗಿ ಜೋಡಿಸಿ ಸೂತ್ರ ಕೈಯಲ್ಲಿ ಹಿಡಿದು ನಡೆಸಿದ ಸೂತ್ರಧಾರಿ ಶ್ರೀಯುತ ರವಿ ಕುಸಬಿಯವರು.

***

ತೊಂಗಲು' ಬಿಡುಗಡೆ ಸಂಭ್ರಮ

– ಎ. ಮಂಜುನಾಥ

ಸಂಕಲನ "ತೊಂಗಲು"
ಎಲ್ಲೆಡೆ ಹರಡಿದೆ
ಹೋಳಿಗೆಯ ಘಮಲು
ಆಸ್ವಾದಿಸಿ ಎಲ್ಲರೂ

ಮಾಲತಿ ಶ್ರೀನಿವಾಸ್
ಸುಂದರ ಕಂಠದಿಂದ
ಸುಮಧುರ ಪ್ರಾರ್ಥನೆ
ಮಂಗಳಕರ ನಾಂದಿ

ತೊಂಗಲು ಬಿಡುಗಡೆ
ಸುಂದರ ಕಾರ್ಯಕ್ರಮ
ಧೀರೇಂದ್ರರ ಪೋಷಾಕು
ಹೆಚ್ಚಿಸಿದ ಮೆರುಗು

ಸುಂದರ ಮುಖಪುಟ
ಚಿತ್ರಗಳ ಸಹಿತ
ಕಿರು ಪ್ರಬಂಧಗಳು
ನೋಡಲು ಆಕರ್ಷಕ

ಕುಸುಬಿ ನಿರೂಪಣೆ
ರವೀಂದ್ರ ಅಧ್ಯಕ್ಷತೆ
ಕಂಚಿನ ಕಂಠದಲಿ
ಜಗನ್ನಾಥರ ನುಡಿ

ಅನುರಾಧ, ಶಂಕರ
ರೇಣುಕಾ, ಮೂರ್ತಿಯ
ಅನುಭವದ ನುಡಿ
ಮಾಡಿತೆಲ್ಲರ ಮೋಡಿ

ನಗೆಗಾರ ಸಿಂಹರ
ಹಾಸ್ಯದ ಲೇಪನದಿ
ನಗುವಿನ ಸಿಂಚನ
ಸಂತಸದ ಕ್ಷಣವು

ಸ್ವಾಗತಕಾರರಾಗಿ
ಎಲೆ ಮರೆಯ ಕಾಯಿ
ಜಯರಾಮರ ಕಾರ್ಯ
ವರ್ಣಿಸಲಸಾಧ್ಯ

ಗುರು-ರಾಜನ್ ಜೋಡಿ
ಜುಗಲ್ ಬಂದಿಯಲಿ
ಪಟ್ಟ ಪರಿಶ್ರಮಕೆ
ಅದ್ಭುತ ಪ್ರತಿಫಲ

ಲೇಖಕರ ಉತ್ಸಾಹ
ಸಮಿತಿಯ ಪ್ರೋತ್ಸಾಹ
ಯುಗಾದಿ ಅಭಿಯಾನ
ಕಂಡಿತು ಭಾರಿ ಯಶ

ಪರಶಿವರ "ಸ್ನೇಹ"
ನಮಗೆ ಅಚ್ಚುಮೆಚ್ಚು
ಸಾಹಿತ್ಯ ವರ್ಧನೆಗೆ
ನೀಡುವರು ಬೆಂಬಲ

***

'ತೊಂಗಲು' ಬಿಡುಗಡೆ – ಸ್ವಾಗತ ಗೀತೆ

– ಧೀರೇಂದ್ರ ಎಸ್.

ಬನ್ನಿರಿ ಭಾಮೆಯರೆಲ್ಲಾ ರನ್ನ ತೋಟದೊಳಾಡುವಾ
ಪೊನ್ನು ಲತೆಗಳ ಸೊಬಗಿಗೇ ಮನವನು ಸೋತು ಪಾಡುವಾ
ಬನ್ನಿ ಭಾಮೆಯರೆಲ್ಲಾ ರನ್ನ ತೋಟದೊಳಾಡುವಾ...

ಬನ್ನಿರಿ ಲೇಖಕರೆಲ್ಲಾ ಈ ಸಭೆಯೊಳು ಆಡುವಾ
ತೊಂಗಲಿನ ಸೊಬಗಿಗೇ ಮನವನು ಸೋತು ಪಾಡುವಾ...

ಬನ್ನಿರಿ ಲೇಖಕರೆಲ್ಲಾ ತೊಂಗಲು ಬಿಡುಗಡೆಗೆ
ಹೊಂಗೆ ಹೂವಿನ ತೊಂಗಲಂದದಿ
ನಾವು ಕಟ್ಟಿದ ಕಥೆಗಳೂ...
ಸ್ವಾನುಭವದ ಬೇವು-ಬೆಲ್ಲದ
ರಸಪಾಕವಿದನು ಸವಿಯುವಾ

ಬನ್ನಿರಿ ಲೇಖಕರಲ್ಲಾ ತೊಂಗಲು ಬಿಡುಗಡೆಗೆ...

ನೋಡಿವ್ರಾ ನಂ ಪುಸ್ತಕವಾ
ನಂ ತೊಂಗಲು ಪುಸ್ತಕವಾ
ಅದ್ನ ಕೈಯಲ್ಲಿಟ್ಕೊಂಡ್ರೆ ಸಾಕು
ಪುಟ ತೆಗೆದು ಓದಿದ್ರೆ ಸಾಕು
ನಿಂ ಮನ್ಸು ಖುಷಿಯಾಗ್ತೈತೇ ಜುಂಜುಂಜುಂ...

ತೊಂಗಲಿನ ನೋಟಕ್ಕೇವಾ
ಅದರ ಕೀಟಲೆ ಆಟದ್ ಕಾಟಕ್ಕೇವಾ
ಈ ಸಭೇಲಿರೋ ಎಲ್ಲಾರೂವೇ ಗುಂಗುಂಗುಂ..
ನೋಡಿವ್ರಾ ನಂ ಪುಸ್ತಕಾವಾ
ನಂ ತೊಂಗಲು ಪುಸ್ತಕಾವಾ

ಮೂವತ್ತೆಂಟು ಲೇಖಕರು
ನಲವತ್ತೆಂಟು ಹೋಳಿಗೆಗಳು
ಪುಟ ತೆಗೆದು ಓದಿದಾಗ ನೀವು
ನಿಂ ಮನ್ಸು ಖುಷಿಯಾಗ್ತೈತೇ ಜುಂಜುಂಜುಂ...
ನೋಡಿದ್ರಾ ನಂ ಪುಸ್ತಕವಾ
ನಂ ತೊಂಗಲು ಪುಸ್ತಕವಾ"

(ಕೈಲಾಸಂ ಅವರ 'ನಂ ಕಂಪ್ನಿ' ನಾಟಕದ 'ಬನ್ನಿರಿ ಭಾಮೆಯರೆಲ್ಲಾ...' ಮತ್ತು 'ನೋಡಿದ್ರಾ ನಂ ನಂಜೀನಾವಾ...' ಹಾಡುಗಳಿಂದ ಸ್ಫೂರ್ತಿ ಪಡೆದು, ಸಂದರ್ಭಕ್ಕೆ ತಕ್ಕಂತೆ ಹೊಂದಿಸಿ ಕಟ್ಟಿದು)

'ತೊಂಗಲು' ಪ್ರಬಂಧ ಸಂಕಲನ ಬಿಡುಗಡೆ ಸಮಾರಂಭ

ವಿವಿಧ ಪ್ರಬಂಧಗಳ ವಿಶ್ಲೇಷಣೆ – ಡಾ. ಜೆ.ಎನ್. ಜಗನ್ನಾಥ್

(ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಈ ಬಾರಿಯ ಯುಗಾದಿ ಸಂದರ್ಭದಲ್ಲಿ 30.03.2025ರಂದು ಒಂದು ದಿನದ ಪ್ರಬಂಧ ರಚನೆ ಅಭಿಯಾನವನ್ನು ನಡೆಸಿತು. ಈ ಅಭಿಯಾನದಲ್ಲಿ 38 ಲೇಖಕರು ಒಟ್ಟು 50 ಪ್ರಬಂಧಗಳನ್ನು ಪ್ರಸ್ತುತಪಡಿಸುವ ಮೂಲಕ ಸ್ವಾನುಭವದ ಸಿಹಿ–ಕಹಿಗಳನ್ನು ಹಂಚಿಕೊಂಡರು. ಈ ಪೈಕಿ 48 ಪ್ರಬಂಧಗಳ ಸಂಕಲನ 'ತೊಂಗಲು' ಪುಸ್ತಕ ಬಿಡುಗಡೆ ಸಮಾರಂಭ ದಿನಾಂಕ 04.05.2025ರಂದು ನಡೆಯಿತು. ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ, ಜೆ.ಎನ್. ಜಗನ್ನಾಥ್ ಅವರು, ಪ್ರತಿಯೋರ್ವ ಲೇಖಕರ ಆಯ್ದ ಪ್ರಬಂಧಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿ, ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಮಾತನಾಡಿದರು. ಅವರ ಅನಿಸಿಕೆಗಳ ಪೂರ್ಣ ಪಾಠ ಇಲ್ಲಿದೆ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಪ್ ಗುಂಪಿನಲ್ಲಿ ಸೋಜಿಗಗಳು ನಡೆಯುತ್ತವೆ. ಕಥೆ ಬರೆಯಿರಿ ಎಂದರೆ ಸಾವಿರ ಕಥೆಗಳು. ತನಗ ಬರೆಯಿರಿ ಎಂದರೆ ಸುಮಾರು ತನಗಗಳು. ಪ್ರಬಂಧ ಬರೆಯಿರಿ ಎಂದರೆ ಒಂದೇ ದಿನದಲ್ಲಿ 50 ಪ್ರಬಂಧಗಳು. ನಿಜವಾಗಲೂ ಒಂದು ಒಗ್ಗಟ್ಟು, ಕ್ರೀಡಾಮನೋಭಾವ ಈ ಗುಂಪಿನಲ್ಲಿದೆ. ಇಲ್ಲಿಯ ಪ್ರಬಂಧಗಳಲ್ಲಿ ನಾನು ಕಂಡ ಕೆಲವು ಸ್ವಾಮ್ಯ ಎಂದರೆ ಹೆಚ್ಚಿನ ಮಂದಿ,

ಯುಗಾದಿಯ ಬಗ್ಗೆ
ಒಬ್ಬಟ್ಟಿನ ಬಗ್ಗೆ
ಬೇವು ಬೆಲ್ಲದ ಬಗ್ಗೆ
ಕೂಡು ಕುಟುಂಬದ ಬಗ್ಗೆ
ಮಧ್ಯಮ ವರ್ಗದ ಬಗ್ಗೆ
ಬಾಳೆ ಎಲೆ ಊಟದ ಬಗ್ಗೆ
ಸಂಪ್ರದಾಯಗಳ ಬಗ್ಗೆ – ಪ್ರಬಂಧಗಳನ್ನು ಬರೆದಿದ್ದಾರೆ.

ಪ್ರಬಂಧವೆಂದರೆ, ಒಂದು ಪೀಠಿಕೆ, ವಿಷಯ ವಿವರಣೆ, ಮತ್ತು ಉಪಸಂಹಾರ ಇರುತ್ತದೆ. ಇದರಲ್ಲಿ ಶೈಲಿ, ಸರಳ ಭಾಷೆ, ಪದ ಪ್ರಯೋಗ, ವ್ಯಾಕರಣ, ಸಂಕ್ಷಿಪ್ತತೆ, ನಿಖರ, ವಿಷಯಕ್ಕೆ ಪೂರಕವಾದ ವಿವರಣೆ, ನುಡಿಗಟ್ಟು, ಗಾದೆ ಮಾತು, ಲೋಕೋಕ್ತಿ, ವಿಷಯದ ಬಗ್ಗೆ ಪ್ರಬುದ್ಧರು ತಿಳಿಸಿರುವ ವಿಚಾರ ಮುಖ್ಯ.

ನನಗೆ ಪ್ರಬಂಧ ಎಂದರೆ ವಿಸೀಯವರ 'ಮುಗಿಲುಗಳು' ನೆನಪಾಗುತ್ತದೆ. ನಾವು ದೂರ ದಿಗಂತದಲ್ಲಿ ನೋಡುತ್ತಿರುವಾಗ ಮುಗಿಲುಗಳು ನಮ್ಮ ಯೋಚನೆಯ ಪ್ರಕಾರ ವಿನ್ಯಾಸ ತೋರುತ್ತವೆ. ಒಮ್ಮೆ ಆನೆಯಾಗಿ, ಒಮ್ಮೆ ರಾಕ್ಷಸನಾಗಿ, ಒಮ್ಮೆ ಅರಮನೆಯಾಗಿ, ಬೇರೆ ಬೇರೆ ಆಕಾರಗಳಲ್ಲಿ ಕಾಣುತ್ತವೆ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ 2025ರ ಯುಗಾದಿ ಹಬ್ಬದ ವಿಶೇಷಗಳ 'ತೊಂಗಲು' – ಸ್ವಾನುಭವದ ಬೇವು ಬೆಲ್ಲ, ಕಿರು ಪ್ರಬಂಧಗಳ ಹೋಳಿಗೆ ಅಭಿಯಾನದಲ್ಲಿ 38 ಪ್ರಬಂಧಕಾರರು 49 ಪ್ರಬಂಧಗಳನ್ನು ಮಂಡಿಸಿದ್ದಾರೆ. ಅದರ ಬಗ್ಗೆ ಒಂದು ಇಣುಕು ನೋಟ ಹಾಯಿಸೋಣ.

1. ನೆನಪಿನ ಹೂರಣ – ಅನಿತಾ ಪೈ

ನಾಯಿ ನೋಡಿಕೊಳ್ಳುವ ಅನುಭವ ಅನಿತಾ ಪೈಯವರ ಹಾಸ್ಯ ಮಿಶ್ರಿತ ಪ್ರಬಂಧ. ನಾಯಿ ಗಲೀಜು ತೆಗೆಯುವಾಗ ವಾಸನೆ ಬಂದರೂ ಮೂಗು ಮುಚ್ಚುವಂತಿಲ್ಲ ಏಕೆಂದರೆ ಕೈ ಗಲೀಜು. 'ಜಂಭದ ಚೀಲ', 'ಅಪರೂಪದ ಸಂಖ್ಯೆ' ಎಂಬುದು ಅನಿತಾ ಪೈರವರ ಇತರ ಎರಡು ಪ್ರಬಂಧಗಳು.

2. ಆಮ್‌ಸ್ಟರ್ ಡ್ಯಾಮ್ ನಲ್ಲಿ ಒಂದು ಶುಕ್ರವಾರ ಸಂಜೆ – ಅನುರಾಧ ನಟರಾಜ್

ಬೆಂಗಳೂರಿನಲ್ಲಿ ಶುಕ್ರವಾರ ನೆರೆಯವರು ಕುಂಕುಮಕ್ಕೆ ಕರೆಯುತ್ತಿದ್ದ ವಾಡಿಕೆ. ನೆದರ್ಲ್ಯಾಂಡಿನಲ್ಲಿ ಕಲ್ಚರ್ ಶಾಕ್, ಸೆಕ್ಸ್ ಅಂಗಡಿ ಪ್ರವೇಶಿಸಿ ಅನುಭವ ಪಡೆದ ರೋಚಕ ಪ್ರಬಂಧವನ್ನು ಅನುರಾಧ ನಟರಾಜ್ ನೀಡಿದ್ದಾರೆ. ಅನುರಾಧ ನಟರಾಜ್ ಅವರ ಇನ್ನೊಂದು ಪ್ರಬಂಧ – 'ಇಟಲಿಯ ಒಂದು ಯೂರೋ ಮನೆಗಳು'.

3. ರಾಜಮ್ಮ ರೋಜಮ್ಮ ಆದಳು – ಟಿ.ಆರ್. ಉಷಾರಾಣಿ

ಅಜ್ಜಿಯೊಡನೆ ಹರಟೆ ಹೊಡೆದು ಯುಗಾದಿ ದಿನ ಮಾವಿನಕಾಯಿ ಚಿತ್ರಾನ್ನ ತಿನ್ನುತ್ತಿದ್ದ ರಾಜಮ್ಮ, ಮತ ಬದಲಾಯಿಸಿ ರೋಜಿ ಆದಳು. ಅಜ್ಜಿ ಬಿಡಲಿಲ್ಲ. ಕುಂಕುಮ ಕೊಟ್ಟು ಮಾತನಾಡಿಸಿದಳು. ಜನರ ಸ್ನೇಹ ಸಂಬಂಧ ಒಂದು ಅಚ್ಚರಿಯ ಸಂಗತಿ ಎನ್ನುತ್ತಾರೆ ಟಿ.ಆರ್.ಉಷಾರಾಣಿ. 'ಬಯಸದೇ ಬಂದ ಭಾಗ್ಯ' ಉಷಾರಾಣಿಯವರ ಮತ್ತೊಂದು ಪ್ರಬಂಧ.

4. ಅದೊಂದೇ ಫೋಟೋ ನಮ್ಮ ಕುಟುಂಬದ್ದು – ಸಿ.ಆರ್. ಕಮಲಾಕ್ಷಿ

ಯುಗಾದಿಯ ಹಬ್ಬ, ಊಟ, ನೋಟ, ತಿರುಗಾಟ ಮುಗಿಸಿ ಬರುವಾಗ, ಅಪ್ಪ ಒತ್ತಾಯ ಮಾಡಿ ಫೋಟೋ ತೆಗೆಸಿದರು. ಕುಟುಂಬದೊಡನೆ ಅದೇ ಅವರ ಕಡೆಯ ಫೋಟೋ ಆಯಿತು ಎಂಬ ಕಹಿಸತ್ಯ ನೆನಪಿಸಿಕೊಳ್ಳುತ್ತಾರೆ ಕಮಲಾಕ್ಷಿ ಸಿ.ಆರ್. 'ಹೋಳಿಗೆ ಊಟ' ಕಮಲಾಕ್ಷಿಯವರ ಮತ್ತೊಂದು ಪ್ರಬಂಧ.

5. ಹಿರೋಷಿಮಾ – ಕೆ.ಆರ್.ಎಸ್. ಮೂರ್ತಿ

ಕೆ. ಆರ್. ಎಸ್. ಮೂರ್ತಿಯವರು ಜಪಾನ್ ಪ್ರವಾಸದಲ್ಲಿ ಕಂಡ ಅನುಭವ ಅಚ್ಚರಿ ಮೂಡಿಸುತ್ತದೆ.

6. ಪುನರ್ಜನ್ಮ – ಗಣಪತಿ ಹೆಗಡೆ

ದೊಡ್ಡ ಕಲ್ಲು ಮೇಲಿನಿಂದ ಬಿದ್ದರೂ ಮುರುಕಲು ಮರದ ಮೂಲಕ ದಿಕ್ಕು ಬದಲಿಸಿ ಯಾರಿಗೂ ತೊಂದರೆಯಾಗಲಿಲ್ಲ. ಇದು ಪುನರ್ಜನ್ಮ ಎನ್ನುತ್ತಾರೆ ಗಣಪತಿ ಹೆಗಡೆ. ಹೆಗಡೆಯವರ ಮತ್ತೊಂದು ಪ್ರಬಂಧ 'ಹೈಸ್ಕೂಲಿನಿಂದ ಬ್ಯಾಂಕಿಗೆ'.

7. ಮಾತೃ ಹೃದಯ – ಗಾಯತ್ರಿ ಮೂರ್ತಿ

ಅಮ್ಮ ಒಬ್ಬಟ್ಟು ಮಾಡಿ ಮಕ್ಕಳಿಗೆ ಹಂಚುವಲ್ಲಿ ಸಂತಸಪಡುತ್ತಾಳೆ. ಲೇಖಕಿಯ ತಂಗಿ ಶ್ವಾನ ಪ್ರೇಮಿ, ಒಬ್ಬಟ್ಟನ್ನು ನಾಯಿಗೆ ನೀಡಿದಾಗ, ಅದು ತನ್ನ ಮರಿಗೆ ಕೊಟ್ಟು ಆನಂದಿಸುತ್ತದೆ. ಮಾತೃಪ್ರೇಮ ಮನುಜನಿಗೆ ಮಾತ್ರವಲ್ಲ ಎನ್ನುತ್ತಾರೆ ಗಾಯತ್ರಿ ಮೂರ್ತಿ.

8. ಒಬ್ಬಟ್ಟಿನ ಸೀರೆಗಳು – ಗಿರಿಜಾ ರಾಜ್ ಎಲ್.

ಗಿರಿಜಾ ರಾಜ್‌ರವರು ಸೀರೆಯ ಆಯ್ಕೆಗೆ ಪರದಾಡಿ, ತಾವು ಬಯಸಿದ ಸೀರೆ ದೊರೆಯದೆ, ಬೇರೆ ಸೀರೆ ದೊರೆತದ್ದನ್ನು ಸ್ವಾರಸ್ಯವಾಗಿ ವರ್ಣಿಸಿದ್ದಾರೆ. ಮನೆಯಲ್ಲಿ ಎಷ್ಟೇ ಸೀರೆ ಇರಲಿ, ಪೈಪೋಟಿಯ ಮೇಲೆ ಸೀರೆ ಕೊಳ್ಳುವುದೇ ಸ್ವಾರಸ್ಯ.

9. ಯುಗಾದಿ ಹೀಗೊಂದು ನೆನಪು – ಗುರುರಾಜ ಶಾಸ್ತ್ರಿ

ಸ್ನೇಹಿತನ ತಾಯಿ ಹಬ್ಬದ ಊಟಕ್ಕೆ ಆಹ್ವಾನಿಸಿ, ಅಳುತ್ತಾ ಕುಳಿತಿರಲು, ಏಕೆ ಎಂದು ಪ್ರಶ್ನಿಸಿದಾಗ, ಈ ವರ್ಷ ಸಿಂಹ ರಾಶಿಯವರಿಗೆ ಕಷ್ಟವಂತೆ. ನಮ್ಮ ಪತಿರಾಯರು ಸಿಂಹ ರಾಶಿ ಎಂದರು. ಲೇಖಕ ಗುರುರಾಜ ಶಾಸ್ತ್ರಿಗಳು, ನನ್ನದೂ ಸಿಂಹ ರಾಶಿ. ಒಟ್ಟಿಗೆ ಅಳೋಣ ಎಂದಾಗ, ವಾತಾವರಣ ತಿಳಿಯಾಯಿತು.

10. ಬದುಕು ಕಟ್ಟಿಕೊಟ್ಟ ಬಾಲ್ಯ – ಗೌರಿ ಭಟ್ಟ

ಅಣ್ಣಂದಿರ ಹಳೆಯ ಪ್ಯಾಂಟುಶರ್ಟುಗಳು ದರ್ಜಿಯಾದ ಅಕ್ಕನ ಕೈಚಳಕದಿಂದ ಹೊಸ ಫ್ಯಾಷನ್ನಿನೊಂದಿಗೆ ಬಾಲ್ಯದಲ್ಲಿ ನನ್ನನ್ನು ಅಲಂಕರಿಸುತ್ತಿದ್ದವು. ಜೀವನದ ವಿಚಾರಗಳು, ಸಂತಸಗಳು ನಾವು ತೆಗೆದುಕೊಂಡಂತೆ ಎನ್ನುತ್ತಾರೆ ಗೌರಿ ಭಟ್. ಇವರ ಮತ್ತೊಂದು ಪ್ರಬಂಧ, 'ಪುತ್ರೋತ್ಸವ'.

11. ಆರೂಡುವ ಸೌರ ಯುಗಾದಿ – ಜನಾರ್ದನ ತುಂಗ

ಚಾಂದ್ರಮಾನದ ಬದಲು ಸೌರಮಾನ ಯುಗಾದಿ ಬಗ್ಗೆ ವಿವರಗಳನ್ನು ನೀಡಿದ್ದಾರೆ. ಹಬ್ಬಗಳು ಕೃಷಿ ಚಟುವಟಿಕೆಗಳಿಗೆ ಹೊಂದಿಕೊಂಡೆ ಆಚರಿಸುತ್ತಾರೆ. ಮನಸ್ಸೆಂಬ ಹೊಲವನ್ನು ಆರು ಬಾರಿ ಹೂಡಬೇಕು. ಮನಸ್ಸಿನ ಒಳಿಗಳಲ್ಲಿರುವ ಚಪಲಗಳನ್ನು ಬೆಂಕಿ ಹಾಕಿ ಸುಡಬೇಕು ಎಂದು ಜನಾರ್ದನ ತುಂಗ ತಿಳಿಸುತ್ತಾರೆ.

12. ಬೇವು ಬೆಲ್ಲ – ಧೀರೇಂದ್ರ ಎಸ್.

ಕಲಾವಿದರಿಗೆ ಬದುಕಿನಲ್ಲಿ ಬಣ್ಣ ಹಚ್ಚಿದರೆ ಖುಷಿ ಮತ್ತು ಸಮಾಧಾನ. ಇಲ್ಲದಿದ್ದರೆ ಯಾವಾಗಲೂ ತುಡಿತ, ಬೇಸರ. ಅಪಘಾತ ಅದು ನಾಟಕದ ಮೊದಲ ದೃಶ್ಯ. ನೈಜವಾಗಿ ಮೂಡಿ ಬಂತು ಏಕೆಂದರೆ ನಿಜವಾಗಿ ಅಪಘಾತವಾಗಿದೆ ಎನ್ನುತ್ತಾರೆ ಧೀರೇಂದ್ರ ಎಸ್. ಇವರ ಮತ್ತೊಂದು ಪ್ರಬಂಧ 'ಜೀವನದಲ್ಲಿ ಬೇವು ಬೆಲ್ಲ'.

13. ಗಾಡಿ ನೀ ಎಲ್ಲಿ – ನಾಗರತ್ನ ಎಂ.ಜಿ.

ನೇತ್ರಧಾಮದ ಬಳಿ ಪತಿರಾಯರು ಬಿಟ್ಟು ಬಂದ ದ್ವಿಚಕ್ರ ವಾಹನವನ್ನು ನಾಲ್ಕು ದಿನದ ನಂತರ ನೆನಪಿಸಿಕೊಂಡು ವಾಪಸ್ಸು ತಂದ ಪ್ರಸಂಗ ವಿವರಿಸುತ್ತಾರೆ ನಾಗರತ್ನ ಎಂ.ಜಿ. ನಾಗರತ್ನ ಅವರ ಮತ್ತೊಂದು ಪ್ರಬಂಧ 'ಅಸಹಾಯಕತೆ'.

14. ಹಳೇ ಬೇರು ಹೊಸ ಚಿಗುರು – ನಾಗರತ್ನ ಚಂದ್ರಶೇಖರ್

ಇಳಿ ವಯಸ್ಸಿನಲ್ಲಿ ಸಕ್ಕರೆ ಇಲ್ಲದೆ ನಕ್ಕರೆ ಆರೋಗ್ಯ ಎಂದು ವರ್ಣಿಸಿದ್ದಾರೆ, ನಾಗರತ್ನ ಚಂದ್ರಶೇಖರ್.

15. ಅಜರಾಮರ ಒಬ್ಬಟ್ಟು – ನಿರ್ಮಲ ಜಿ.ವಿ.

ಸಂಡಿಗೆ ಹುಳಿ, ಒಬ್ಬಟ್ಟು ಇಷ್ಟವೆಂದು ಹೂವೀಳ್ಯಕ್ಕೆ ಸಂತಸದಿಂದ ಹೋದರೆ, ಹೊಸ ಅಡುಗೆಯವರಿಗೆ ಒಬ್ಬಟ್ಟು ಮಾಡಲು ಬರದೆ ಒದ್ದಾಡಿದ ಪ್ರಸಂಗವನ್ನು ನಿರ್ಮಲ ಜಿ.ವಿ.ಯವರು ಬಹಳ ವಿನೋದವಾಗಿ ವರ್ಣಿಸಿದ್ದಾರೆ.

16. ಯೋಚನೆ – ಪತ್ತಂಗಿ ಎಸ್. ಮುರಳಿ

ಎರಡು ಹಬ್ಬ ಭಾನುವಾರ ಬಂದಿದೆ. ರಜೆ ಕಡಿಮೆಯಾಯಿತು ಎಂದು ಯೋಚಿಸುತ್ತಿದ್ದ ಪತಿಗೆ, ಬುದ್ಧಿವಂತ ಮಡದಿ, ಸೋಮವಾರ ಒಂದು ರಜೆ ಬಂದಿದೆ, ಪ್ರವಾಸಕ್ಕೆ ಹೋಗಬಹುದು ಎಂದು ಒಳ್ಳೆಯ ಮೂಡಿಗೆ ತರುವ ಯೋಜನೆಯನ್ನು ಪತ್ತಂಗಿ ಎಸ್ ಮುರಳಿ ವಿವರಿಸಿದ್ದಾರೆ.

17. ಸಂತೆಯೊಳಗೊಂದು ದಿನ – ಪದ್ಮಾ ಕಲ್ಮಾಡಿ

ದುಡಿಯುವ ಕೈ ಒಂದು ತಿನ್ನುವ ಬಾಯಿ ಎಂಟು. ಬುದ್ದಿವಂತಿಕೆಯಿಂದ ಸಂಸಾರ ತೂಗಿಸುತ್ತಿದ್ದ ಅಮ್ಮ ತರಕಾರಿ ಬೆಳೆದಳು. ಮಕ್ಕಳಿಬ್ಬರಿಗೆ ಮಾರಲು ಕಳುಹಿಸಿದರು. ತಂದೆ ಶಿಸ್ತು ಸ್ವಾಭಿಮಾನಕ್ಕೆ ಹೆದರುವವರು. ಆದರೂ ತರಕಾರಿ ಮಾರಲು ಹೋಗಿದ್ದ ತಮ್ಮ ಮಕ್ಕಳ ಬೆನ್ನು ತಟ್ಟಿದಾಗ ಸಂತಸದ ಹೊನಲು ಎನ್ನುತ್ತಾರೆ ಪದ್ಮಾ ಕಲ್ಮಾಡಿ.

18. ನೆನಪಿನ ಹೂರಣ – ಪೂರ್ಣಿಮ ಭಗವಾನ್

ಹಳೆಯ ನೆನಪಿನ ಹೂರಣ ಬಲು ಸಿಹಿ ಎಂದಿದ್ದಾರೆ ಪೂರ್ಣಿಮ ಭಗವಾನ್. 'ಯುಗ ಯುಗಾದಿ ಕಳೆ' ಇವರ ಮತ್ತೊಂದು ಪ್ರಬಂಧ.

19. ಬಾಲ್ಯದ ನೆನಪು – ಮಂಜುನಾಥ ಎ.

ಮಂಜುನಾಥ್ ರವರು ನೆನಪಿನ ಶಕ್ತಿ ಮಾನವನಿಗೆ ದೈವದತ್ತ. ಮುಂದಿನ ಜೀವನ ನಡೆಸಲು ಬಾಲ್ಯದ ಸವಿ ನೆನಪುಗಳು ಬೇಕು. ಯುಗಾದಿ ದಿನದ ಎಣ್ಣೆ ಸೀಗೆಕಾಯಿ ಸ್ನಾನ, ರುಚಿಕರವಾದ ಒಬ್ಬಟ್ಟು, ನೆನಪಿಸಿಕೊಳ್ಳುತ್ತಾರೆ.

20. ಮತ್ತಷ್ಟು ಉಸಿರಿತ್ತವರು – ಬೆಂ.ಶ್ರೀ. ರವೀಂದ್ರ

ಒಟ್ಟು 23 ಇಂಜೆಕ್ಷನ್‌ಗಳನ್ನು ತೆಗೆದುಕೊಂಡು ಪ್ರಯಾಸದಲ್ಲಿ ಇರುವಾಗ, ಡಾಕ್ಟರ್ ನೀವು ಸಂಪೂರ್ಣ ಗುಣ ಹೊಂದಿದ್ದೀರಿ ಎಂದುದೇ ಸಿಹಿ. ಹೆದರಿದ ನನಗೆ ಮತ್ತಷ್ಟು ಉಸಿರಿಟ್ಟವರು ಡಾಕ್ಟರ್, ಸಂಬಂಧಿಕರು ಎನ್ನುತ್ತಾರೆ ಬೆಂ. ಶ್ರೀ. ರವೀಂದ್ರ.

21. ಶುಭಾಶಯ ಪತ್ರ – ಮಹಾಬಲ ಕೆ.ಎನ್.

ಹಬ್ಬದ ಶುಭಾಶಯ ಪತ್ರವೊಂದನ್ನು ಮುದ್ರಿಸಿ, ಅದನ್ನು ಆಪ್ತರಿಗೆ ಕಳುಹಿಸುವುದು ಮಹಾಬಲರ ಅಭ್ಯಾಸ.
'ಹೊಸತು ವರುಷ
ಹೊಸತು ಹರುಷ
ಹೊಸತು ಬಯಕೆ ನಮ್ಮವು' – ಎಂಬ ಕೆ.ಎಸ್.ನರಸಿಂಹ ಸ್ವಾಮಿಯವರ ಸಾಲುಗಳನ್ನು ಪತ್ರದಲ್ಲಿ ಸೇರಿಸುತ್ತಾರೆ. ವೇದಿಕೆಯ ಮಾಲತಿ ಶ್ರೀನಿವಾಸನ್, ಮಾಲತಿ ಮೇಲುಕೋಟೆಯವರ ಅವರ ಕವನಗಳನ್ನೂ ಮಹಾಬಲರು ಉಲ್ಲೇಖಿಸಿದ್ದಾರೆ.

22. ಯುಗಾದಿಯ ಸಂಭ್ರಮ ಅಂದು ಇಂದು – ಮಾಲತಿ ಶ್ರೀನಿವಾಸನ್

ಮಾಲತಿ ಶ್ರೀನಿವಾಸನ್‌ರವರು ಮಲ್ಲೇಶ್ವರದ ತುಂಬು ಕುಟುಂಬದ ಮನೆ, ಯುಗಾದಿ ಆಚರಣೆ ನೆನಪಿಸಿಕೊಳ್ಳುತ್ತಾರೆ.

23. ಕಳೆದುಕೊಂಡೆ – ಶ್ರೀರಂಗರಾಜನ್

ದಾವಣಗೆರೆಯಲ್ಲಿ ಅಚ್ಚುಮೆಚ್ಚಿನ ಸಹೋದ್ಯೋಗಿ, ಬಹಳ ವಿಶ್ವಾಸಿ ರೂ.10,000 ಕೇಳಿ ಪಡೆದು ಸಂಪರ್ಕ ಕಳೆದುಕೊಂಡ ಎಂಬ ಬೇವಿನ ಕಹಿ ನೆನಪಿಸಿಕೊಳ್ಳುತ್ತಾರೆ ಶ್ರೀರಂಗರಾಜನ್.

24. ಗುಡಿಪಾಡ್ವಾ – ರಾಧಿಕಾ ಗುಜ್ಜರ್

ಗುಡಿ ಎಂದರೆ ಧ್ವಜ. ಪಾಡ್ವಾ ಎಂದರೆ ಮಾಸದ ಮೊದಲ ದಿನ ಪಾಡ್ಯ. ರಾಧಿಕಾ ಗುಜ್ಜರ್‌ರವರು ಮರಾಠಿಗರ ಹೊಸವರ್ಷದ ಆಚರಣೆ ವಿವರಿಸುತ್ತಾರೆ.

25. ಚಂದ್ರ ದರ್ಶನ – ರೇಣುಕಾ ದೇಸಾಯಿ

ಯುಗಾದಿ ಹಬ್ಬದ ಮರುದಿನ ಚಂದ್ರ ದರ್ಶನ. ಬಿದಿಗೆಯಂದು ಹೊಸ ಬಟ್ಟೆ ತೊಟ್ಟು ಆಗಸದಲ್ಲಿ ಚಂದ್ರನನ್ನು ನೋಡಿದರೆ ಶುಭ ಎಂಬ ನಂಬಿಕೆಯ ಬಗ್ಗೆ ರೇಣುಕಾ ದೇಸಾಯಿ ತಿಳಿಸುತ್ತಾರೆ.

26. ಯುಗಾದಿ ಅಭಿಯಾನ – ಲೀಲಾ ವಾಸುದೇವ

ಮಲ್ಲೇಶ್ವರದ ಕಾಡು ಮಲ್ಲೇಶ್ವರನ ದೇವಾಲಯಕ್ಕೆ ಹೋಗಿ ಬರುವುದು, ಆಯುಷ್ಯ ಆರೋಗ್ಯ ಸಕಲ ಸಂಪತ್ತು ಪ್ರಾಪ್ತಿಗಾಗಿ ಸಕಲ ಅರಿಷ್ಠ ನಿವಾರಣೆಗಾಗಿ ಶ್ಲೋಕ ಹೇಳಿ, ಬೇವು ಬೆಲ್ಲ ಸೇವಿಸುವುದರ ಕುರಿತು ಲೀಲಾ ವಾಸುದೇವ ವಿವರಿಸಿದ್ದಾರೆ.

27. ಮನಸ್ಸಿನಲ್ಲಿ ಮರೆಯಾದಳು – ವಿಠ್ಠಲ್ ಇಜೇರಿ

ಮದುವೆಯ ಮೊದಲು ಮತ್ತು ನಂತರವೂ ಒಟ್ಟು ಮೂರು ವರ್ಷ ಸುಂದರ ಯುವತಿ ಒಬ್ಬಳು ತನ್ನ ಜೊತೆ ಅತೀ ಸ್ವತಂತ್ರವಾಗಿ ಸ್ನೇಹ ಹೊಂದಿದಳು. ಯಾವ ಕೆಟ್ಟ ಭಾವನೆಯೂ ನಮ್ಮಲ್ಲಿರಲಿಲ್ಲ ಎಂದು ವಿಠಲ್ ಇಜೇರಿ ತಮ್ಮ ಕಾಲದ ಬಗ್ಗೆ ಅಚ್ಚರಿ ವ್ಯಕ್ತಪಡಿಸುತ್ತಾರೆ.

28. ಮಳೆಯಲ್ಲಿನ ಆತಂಕ – ಎನ್. ಶಂಕರರಾವ್

ಶಂಕರರಾಯರು ಮಗಳು 2025ರಲ್ಲಿ ಮುಂಬಯಿಯಲ್ಲಿ ಸುರಿದ 944 ಮಿಲಿಮೀಟರ್ ಮಳೆಯಲ್ಲಿ ರಾತ್ರಿ ಪೂರ್ತಿ ಒಂದೆಡೆ ನಿಂತು ಅರ್ಧ ಮುಳುಗಿದ್ದ ಬಸ್ಸಿನಲ್ಲಿ ಕಳೆದ ಅನುಭವ ನೆನಪಿಸಿಕೊಳ್ಳುತ್ತಾರೆ.

29. ಬಂದು ಹೋಗುತ್ತಿವೆ ಬೇವು ಬೆಲ್ಲಗಳು – ಶಾಂತ ನಾಗಮಂಗಲ

ಯುಗಾದಿಯ ಮರುದಿನ ವರ್ಷತೊಡಕು. ಅಂದು ಏನು ಆಗುತ್ತದೆಯೋ ಅದು ವರ್ಷ ಪೂರ್ತಿ ಆಗುತ್ತದೆ ಎಂಬ ನಂಬಿಕೆ. ಈ ಬಗ್ಗೆ ಶಾಂತ ನಾಗಮಂಗಲರು ವಿನೋದವಾಗಿ ಚಿತ್ರಿಸಿದ್ದಾರೆ. ನೈವೇದ್ಯವಾಗದ ಭಕ್ಷ್ಯ, ಆಪತ್ತಿಗೊದಗದ ನೆಂಟರಂತೆ ನಮಗೆ ಸಿಗುತ್ತಿರಲಿಲ್ಲ ಎನ್ನುತ್ತಾರೆ.

30. ಮಕ್ಕಳಿಲ್ಲದ ಯುಗಾದಿ – ಶುಭಶ್ರೀ ಪ್ರಸಾದ್

ಉಂಡು ಯುಗಾದಿ ಮಿಂದು ದೀಪಾವಳಿ ಎನ್ನುವಂತೆ, ಜನರಿದ್ದರೆ ಹಬ್ಬದಡುಗೆ. ಇಬ್ಬರೇ ಇದ್ದರೆ ಊಟ ರುಚಿಹತ್ತದು ಎನ್ನುತ್ತಾರೆ ಶುಭಶ್ರೀ ಪ್ರಸಾದ್.

31. ಯುಗಾದಿಯೊಂದಿಗೆ ಬರುವ ಅಣ್ಣನ ನೆನಪುಗಳು – ಶ್ರವಣ ಕುಮಾರಿ ಟಿ.ಎಸ್.

ಪ್ರಬಂಧದಲ್ಲಿ ಬೇವು ಕಂಡದ್ದು ಇಲ್ಲಿ. ಯುಗಾದಿಯ ಮರುದಿನ ಜನಿಸಿದ ಅಣ್ಣ ಚಂದ್ರಶೇಖರ ತಂಗಿಯರನ್ನು ಆತ್ಮೀಯವಾಗಿ ಕಾಣುತ್ತಿದ್ದ. ಎಲ್ಲರಿಗೂ ಪ್ರಿಯ. ಆದರೆ ಅನಾರೋಗ್ಯಕ್ಕೆ ತುತ್ತಾಗಿ ಇಲ್ಲವಾದ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಶ್ರವಣಕುಮಾರಿ.

32. ಅಮ್ಮ ತಮ್ಮ – ಹೆಚ್. ಶ್ರೀಧರ ರಾವ್

ತಾಯಿಗೆ ಹನ್ನೆರಡನೆಯ ಹೆರಿಗೆ. ದೊಡ್ಡ ಮಗನನ್ನು ಕರೆಸಿಕೊಂಡಳು. ರಕ್ತಸ್ರಾವದ ಕಷ್ಟಗಳೆಲ್ಲ ಮಾಯವಾಗಲು ತಾಯಿಗೆ ಮಗುವಿನ ಮುಖ ನೋಡಿದರೆ ಸಾಕಾಯಿತು ಎನ್ನುತ್ತಾರೆ ಶ್ರೀಧರ ರಾವ್.

33. ಪವಾಡ – ಶ್ರೀನಿವಾಸ್ ಬಿ.ಎಸ್.

ಶಿವನಿಗೆ ಪರ್ಜನ್ಯ ಜಪಮಾಡಿ ದಂಪತಿಗಳು ಜಲಾಭಿಷೇಕ ಮಾಡುವ ಅವಕಾಶ. ದೇವಾಲಯದವರು ಜನರ ಬಿಸಿಲಿನ ಬೇಗೆ ಕಳೆಯಲು ಮಳೆಗಾಗಿ ಈ ಕಾರ್ಯ ಹಮ್ಮಿಕೊಂಡಿದ್ದರು. ಅಭಿಷೇಕ ಮಾಡುವಾಗಲೇ ಧಾರಾಕಾರ ಮಳೆ ಬಂದಿತು. ಇದು ಜಪದಿಂದಲೋ ಕಾಕತಾಳಿಯವೋ ಎಂದು ಪ್ರಶ್ನಿಸುತ್ತಾರೆ ಶ್ರೀನಿವಾಸ್ ಬಿ. ಎಸ್.

34. ಕರಿಬೇವು ಕಹಿಬೇವು – ಸರಸ್ವತಿ ನಟರಾಜ್

ನಸುಗತ್ತಲಲ್ಲಿ ಕರಿಬೇವು ಎಂದು ಬುಟ್ಟಿಯಲ್ಲಿದ್ದ ಕಹಿಬೇವನ್ನು ಎಲ್ಲ ಅಡುಗೆಗೂ ಬಳಸಿದ್ದೆ ಎಂದು ಹಾಸ್ಯ ಚಟಾಕಿ ಹಾರಿಸುತ್ತಾರೆ ಸರಸ್ವತಿ ನಟರಾಜ್.

35. ಜನನದ ಸುತ್ತ ಬೇವು ಬೆಲ್ಲ – ಸಿಂಧು ಹರಿಥಸ್

ಆಸ್ಪತ್ರೆ ಸೇರಿದಾಗ ಕರೋನ ಇದೆ ಎಂದು, ನಂತರ ಇಲ್ಲವೆಂದಾಗ ಸಿಹಿ ಸಂಭ್ರಮ. ಕರೋನಾದ ತಪ್ಪು ಫಲಿತಾಂಶದಿಂದ ಪಟ್ಟ ಕಹಿ ಅನುಭವಗಳು ಸ್ವಲ್ಪ ಮಟ್ಟಿಗೆ ಮರೆಮಾಚಿದುವು ಮಗುವನ್ನು ಎತ್ತಿಕೊಂಡಾಗ, ಎನ್ನುತ್ತಾರೆ ಸಿಂಧು ಹರಿಥಸ್.

36. ಈ ಜೀವನ ಬೇವು ಬೆಲ್ಲ – ಸುಜಾತಾ ರವೀಶ್

ತಂದೆ ತಾಯಿಯ ಜೊತೆ ಹಬ್ಬ ಆಚರಿಸುವುದೇ ಜೀವನದ ಬೆಲ್ಲ. ಅವರಿಲ್ಲದ ದುಃಖವೇ ಬಾಳಿನ ಬೇವು ಎನ್ನುತ್ತಾರೆ ಸುಜಾತಾ ರವೀಶ್.

37. ಲಾಕ್ ಡೌನ್ ಉಪನಯನ – ಸ್ನೇಹ ಶಶಿಧರ್

ಲಾಕ್‌ಡೌನಿನಲ್ಲಿ ಉಪನಯನಕ್ಕೆ ಯಾರೂ ಬರಲಾಗದಿದ್ದರೂ ತಂತ್ರಜ್ಞಾನದ ಸಹಾಯದಿಂದ ಎಲ್ಲರೂ ನೋಡುವಂತೆ ಆಯಿತು. ಲಾಕ್‌ಡೌನಲ್ಲಿ ಕಾರ್ಯಕ್ರಮ ಮಾಡಿ ನೋಡು ಎನ್ನುವುದು ಹೊಸ ನುಡಿಗಟ್ಟು ಎನ್ನುತ್ತಾರೆ ಸ್ನೇಹ ಶಶಿಧರ್.

38. ಹಬ್ಬದ ಹೊಸ ಬಟ್ಟೆ – ಹು.ವಾ.ಶ್ರೀಪ್ರಕಾಶ್

ಅಂದಿನ ಆಚರಣೆ, ಸಂಪ್ರದಾಯಗಳಲ್ಲಿ ಒಂದು ರೀತಿಯ ಶಿಸ್ತು, ಸೌಂದರ್ಯ ಇತ್ತು ಎನ್ನುತ್ತಾರೆ ಹು. ವಾ. ಶ್ರೀಪ್ರಕಾಶ್.

'ತೊಂಗಲು' ಪುಸ್ತಕ ಸೊಗಸಾಗಿ ಬಂದಿದೆ. ಪ್ರತಿಯೊಂದು ಪ್ರಬಂಧಕ್ಕೂ ಉತ್ತಮವಾದ ಚಿತ್ರಗಳನ್ನು ವಿಷಯಕ್ಕೆ ಪೂರಕವಾಗಿ ಸೇರಿಸಿರುವ ಗುರುರಾಜ ಶಾಸ್ತ್ರಿಗಳ ಆಸಕ್ತಿ ಅಭಿನಂದನೀಯ. ಪ್ರತಿಯೊಬ್ಬರನ್ನೂ ಪ್ರಬಂಧ ಬರೆಯುವಂತೆ ಹುರಿದುಂಬಿಸಿರುವ ಬೆಂ ಶ್ರೀ ರವೀಂದ್ರ, ಸಂಪಾದಕರಾದ ಶ್ರೀ ರಂಗರಾಜನ್ ಮತ್ತು ಗುರುರಾಜ ಶಾಸ್ತ್ರಿಯವರ ಪಾತ್ರ ಶ್ಲಾಘನೀಯ.

ನನಗೆ ಪುಸ್ತಕ ಪರಿಚಯ ಮಾಡಿಕೊಡಲು ಅವಕಾಶ ನೀಡಿದ್ದಕ್ಕೆ ಕೃತಜ್ಞತೆಗಳು.

***

ಕವಿಮನ

ಲಭಿಸೀತೇ ಬದಲಾವಣೆ

ಅಬ್ಬರಿಸಿ ನೆಗೆಯಲಿದ್ದ ಹುಲಿರಾಯ
ತತ್ತರಿಸಿ ಪುಣ್ಯಕೋಟಿ
ನಡುಗಿ ಬೇಡಿಕೊಂಡಿತು ವಿನಮ್ರವಾಗಿ

ಹುಲಿರಾಯ
ದಯವಿಟ್ಟು ತಿನ್ನ ಬೇಡ ನನ್ನನ್ನು
ಕಂದನಿಗೆ ಹಾಲುಡಿಸಿ ಬರುವೆ
ಕರುಣೆ ತೋರು.

ಹಿಂದಿರುಗಿ ಹುಲಿರಾಯನಿಗೆ
ಖಂಡವಿದೆಕೋ, ಮಾಂಸವಿದೆಕೋ
ಅರ್ಪಿಸಿತು ಆಹಾರವಾಗಲು ಪುಣ್ಯಕೋಟಿ.

ಮೆಚ್ಚಿದೆ ನಿನ್ನ ಮಾತು.
ನಿನ್ನ ತಿಂದರೆ ಮೆಚ್ಚನಾ ಪರಮಾತ್ಮನು
ಎಂದು ನೆಗೆದು ಹುಲಿರಾಯ
ಪ್ರಾಣ ತ್ಯಜಿಸಿತು.

ದೇವದಾಸಿಯರು, ಬಸವಿಯರು
ಕರೆಯುವ ಹೆಸರು ಏನಾದರೇನು
ಕಸುಬೊಂದೇ
ನೀಡುತ್ತಾರೆ ಖಂಡವಿದೆಕೋ
ಮಾಂಸವಿದೆಕೋ
ತೀರಿಸಬೇಕು ಗಂಡಸಿನ ಅದಮ್ಯ ಆಸೆ
ಇದೇ ಬದುಕು ತಲೆತಲಾಂತರದಿಂದ

ಪುಣ್ಯಕೋಟಿಯ ಕಾಲವಿದಲ್ಲ
ಹುಲಿರಾಯ ದಯಾಮಯತೆಗೆ ಹೆಸರಾದ
ಕಣ್ಣು ಕಾಣದ ಪೈಶಾಚಿಕ ಮನದ ಮನುಷ್ಯ
ಹೆಣ್ಣು ಹಸಿವಿನ ದಾಹ ತೀರುವುದು
ಅಸಂಭವ.
ಹಾಲುಡಿಸಿ ಬರುವೆನೆಂದರೆ
ಕರುಣೆ ತೋರುವರೇ

ಅಸಹ್ಯ ಚಿಂತನೆಯೆಂದು ಅಂದು
ಹುಲಿರಾಯ ನೆಗೆದು ಸತ್ತ.
ಮನುಜರಿಗಿಂತ
ಮೇಲೆಂದು ಸಾಬೀತುಪಡಿಸಿದ
ಹೇಯವೆಂದರಿಯದ ಮನುಜನಿಗಿದು
ಗಂಡಸತ್ವದ ಮಾದರಿಯೇ

ದೇವದಾಸಿ, ಬಸವಿಯರಿಗೆ ಸ್ವಾತಂತ್ರ್ಯವಿಲ್ಲ
ಮಕ್ಕಳಿಗಾದರೂ ಲಭಿಸೀತೇ
ಬದಲಾಗುವ ದೆಶೆ.

– ಗೋಪಿನಾಥ್
07.05.2025

ಕವಿಮನ

ಮಿಂಚಿದ ಆ ಪದ ಮೀ.. ಟೂ

ಮೀಟಿದ ಆ ಪದ ಮೀ... ಟೂ
ಮೀಟುತ್ತಿತ್ತು ಒಳಗೊಳಗೆ
ಒಂದೇ ಸಮನೆ
ಹೇಳಿ ಹಗುರಾಗೆಂದು ಆ ಪದ
ಸತ್ತಂತಿದ್ದ ಮೈ ಮನಸುಗಳ ಗೋರಿಯೊಳಗಿಂದ
ತೆರೆದಿಡಲು ವೇದನೆಯ ಆ ಕದ.

ಸತ್ತ ಬಾಯಿಗೊಂದು ಗಟ್ಟಿ ದನಿ ಸಿಕ್ಕಾಗ
ಮೈ ಕೊಡವಿ ಮೇಲೆದ್ದು
ಕೂಗಿ ಹೇಳಬೇಕೆನಿಸಿತ್ತು.
ಕೇಳಿಸಿಕೊಂಡವರೆಲ್ಲ ರಾಮ, ಲಕ್ಷ್ಮಣರಾಗಿರಲಿಲ್ಲ
ಲಜ್ಜೆಗೆಟ್ಟ ಗಂಡುಗಳು ಇಂದ್ರ ದೇವೇಂದ್ರರಾಗಿದ್ದರು.

ಕೃಷ್ಣ ಭೀಮರಿಲ್ಲದ
ಕಲಿಯುಗದ ತಡ ರಾತ್ರಿಗಳಲ್ಲಿ
ನಡು ಬೀದಿಯಲಿ ಕೀಚಕ, ದುಶ್ಯಾಸನರಾದವರು
ಅದೆಷ್ಟೋ ಮಂದಿ.
ಕಲ್ಲಾದ ಅಹಲ್ಯೆಗೆ, ಭೂಮಿಗಿಳಿದ ಸೀತೆಗೆ
ನ್ಯಾಯ ಸಿಗುವ ನಂಬಿಕೆಯೇ ಇಲ್ಲ.

ಸಿಡಿದ ಅಗ್ನಿಪರ್ವತಗಳಿಂದ
ಹರಿಯಲಿಲ್ಲ ಲಾವ
ಹರಿದದ್ದು ಅಪಮಾನಗಳ ನೋವು
ಹೇಳಿ ಹಗುರಾಗುವೆನೆಂದು ಹೊರಟ
ಅಕ್ಕಂದಿರು ಮತ್ತಷ್ಟು ಬೆತ್ತಲಾದರೆ
ಮಾನ ಮರ್ಯಾದೆಗಳ ಮೆಟ್ಟಲುಗಳ ಮೇಲೆ
ಅಸಹಾಯಕತೆ ಬೋರಲು ಬಿದ್ದಂತಾಯಿತು.

ಬಣ್ಣದ ಜಗತ್ತಿನ ಬಯಲಾದ
ರಹಸ್ಯಗಳ ತೂಕ ಹೆಚ್ಚೋ
ಬಡಗುಡಿಸಲ ಒಳಗಿನ ಕತ್ತಲಲ್ಲಿ
ನೆಲಕ್ಕೆ ಬಿದ್ದ ನಾರಿಯ ನರಕ ಹೆಚ್ಚೋ
ಕಟ್ಟಿದ ಗಂಟಲೊಳಗೆ ಸಿಕ್ಕಿಕೊಂಡ ಮಾತುಗಳು
ಒಳ ಹೋಗದೆ, ಹೊರ ಬಾರದೆ
ಕ್ಯಾನ್ಸರ್ ಹುಣ್ಣಿನಂತೆ ಕೊರೆಯುವುದು
ದೇಹ ಅಳಿದು ಹೋಗುವ ತನಕ

ಸೀತೆ ಅಹಲ್ಯೆಯರ ಸ್ಯಾಂಪಲ್ಲುಗಳಿವೆ
ಕಣ್ಣ ಮುಂದೆ
ಪತಿವ್ರತೆಯರ ಪಟ್ಟಿಯಲ್ಲಿವರು
ಶಾಶ್ವತವೆಂಬ ಹೆಗ್ಗಳಿಕೆ
ಬೇಕಿತ್ತೆ ಹೀಗೆ ಹೇಳಿ ಹಗುರಾಗುವ ಪರಿ
ಉಳಿಯುವುದೆಂತು
ಬೇಟೆಗಾರನ ಬಲೆಯೊಳಗೆ ಬಿದ್ದ ಹರಿಣಿ.

ಈಗ ಹೇಳಿ,
ಅಸಹಾಯಕತೆಗೆ ಒಂದೇ ಭಾಷೆ ಒಂದೇ ಪದ.
ಆ ನೋವಿನ ಕದ ತೆರೆಯದಂತೆ
ಜಡಿಯಲಾಗಿದೆ ಒಂದು ದೊಡ್ಡ ಬೀಗ.
ಮಿಂಚಿದ ಆ ಪದ ಮೀ..ಟೂ

– ನಾಗರತ್ನ ಚಂದ್ರಶೇಖರ್
14.05.2025

ಕವಿಮನ

ನೆಲಸಮ

ಅದು ಹಿರಿಯರು ಕಟ್ಟಿ ಸಂತೃಪ್ತಿಯಲಿ ಬಾಳಿದ ಮನೆ
ದಾಳಿ ಎಸಗುತಿದೆ ರಕ್ಕಸ ಯಂತ್ರ ಒಂದೇ ಸಮನೆ

ಸಾಹಿತ್ಯ ಸೃಷ್ಟಿಗೆ ಸಾಕ್ಷಿಯಾದ ವ್ಯಾಸಂಗದ ಕೊಠಡಿ
ಹೇಳ ಹೆಸರಿಲ್ಲದಂತಾಗಿದೆ ಆ ಜೆಸಿಬಿ ಆರ್ಭಟದಡಿ

ಬಂದವರ ಸ್ವಾಗತಿಸಿ ಆದರಿಸುತ್ತಿದ್ದ ವರಾಂಡ
ಕಳೆದುಕೊಂಡಿದೆ ಅಸ್ತಿತ್ವ; ಯಂತ್ರಗಳದೇ ಕೈವಾಡ

ಸಿಹಿ, ಕುರುಕು ಮೆಲ್ಲುತ್ತ ಕಾಫಿ ರುಚಿ ಸವಿಯುತ್ತ
ಕ್ರಿಕೆಟಾಟದ ಏಳುಬೀಳುಗಳಿಗೆ ಸ್ಪಂದಿಸುತ್ತ
ಮೆರೆದಿದ್ದ ಆ ಭವನದ ಸುವಿಶಾಲ ಹಜಾರ
ನಿರಂತರ ತುಳಿತಕೆ ಸಿಲುಕಿ ಮುಗಿಸಿದೆ ವ್ಯಾಪಾರ.

ಸವಿಯೂಟದಿಂದ ರುಚಿ ತಣಿಸಿದ ಪಾಕಶಾಲೆ
ವಿನಾಶದ ಪರ್ವಕೆ ಸಿಲುಕಿ ಈಗ ಬರಿ ನೆನಪಷ್ಟೆ

ಹಳತೆಲ್ಲ ಹಿಂಸರಿದು ಹೊಸತಿಗೆ ನೀಡಿದೆ ದಾರಿ
ಮುರಿದು ಕಟ್ಟುವುದೇ ಹೊಸಪೀಳಿಗೆಯ ಗುರಿ.

– ಕೆ ಎನ್ ಮಹಾಬಲ

21.05.2025

ಎಲೆಯ ಮೇಲಿನ ನೀರು

'ಕೊರಮ, ಖದೀಮ!' ಏನೂ ಅನ್ನಿ ಅವನಿಗೆ
ಯಾವ ಕಸಿವಿಸಿಯೂ ಇಲ್ಲದೇ
ಸುಮ್ಮನೆ ಮುಗುಳು ನಗುತ್ತಾನೆ
ಯಾವುದೋ ಹಾಡು ಮಾರ್ನವಮಿಯ
ಚೌಪದಿಯ ಗುನುಗುತ್ತಾನೆ
ಕೈಯಲ್ಲಿ ತಾಳ ಹಾಕುತ್ತ ಚಿಟಿಕೆ
ಹೊಡೆಯುತ್ತ

ಇಂದು ಯಾವುದೋ ಸಂತರ್ಪಣೆ
ನಾಳೆ ದಾಸೋಹ ನಾಡಿದ್ದು
ಎಂತದೋ ಪಾದಯಾತ್ರೆ ಎಲ್ಲಕ್ಕೂ
ಸೈ ಅವನು

ಎಲ್ಲವನ್ನೂ ಮಾಡುತ್ತ ಯಾವುದನ್ನೂ
ಅಂಟಿಸಿಕೊಳ್ಳದೆ...

ಎಂಥಾ ಆಸಾಮಿ ಈತ ಯಾವ ಲೋಕದ ಮಾಲು
ಎಂದೆಲ್ಲ ನೀವು ಅಂದುಕೊಳ್ಳುವ
ಹೊತ್ತಿಗೆ

ಎಲೆಯ ಮೇಲಿನ ನೀರಂತೆ
ಜಾರಿ ಹೋಗುತ್ತಾನೆ
ಮತ್ತದೇ ಚೌಪದಿಯ ಗುನುಗುತ್ತ

– ಡಾ ಗೋವಿಂದ ಹೆಗಡೆ

28.05.2025

ತಾನೊಂದು ಬಗೆದರೆ ಮಾನವ

– ಪೂರ್ಣಿಮ ಭಗವಾನ್

ಉತ್ತರ ದಿಕ್ಕಿನಲ್ಲಿ ಭಾರತದ ಶಿರಭಾಗದಂತೆ ಇರುವ ಜಮ್ಮು ಕಾಶ್ಮೀರವನ್ನು ಭೂಲೋಕದ ಸ್ವರ್ಗವೆಂದೇ ಪರಿಗಣಿಸುತ್ತಾರೆ. ಸಾಲು ಸಾಲು ಮರಗಳು, ದಟ್ಟವಾದ ಪೈನ್ ಕಾಡುಗಳು, ಹುಲ್ಲುಗಾವಲುಗಳು ಮತ್ತು ಹಿಮದಿಂದ ಆವೃತವಾದ ಹಿಮಾಲಯ ಪರ್ವತಗಳಿಂದ ಸುತ್ತುವರೆದಿರುವ ಶ್ರೀನಗರದ ಕಣಿವೆ ಪ್ರದೇಶಗಳನ್ನು ನೋಡುವುದೇ ಒಂದು ಅವಿಸ್ಮರಣೀಯ ಅನುಭವ. ಬೇಸಿಗೆಯಲ್ಲೂ ಹಚ್ಚಹಸಿರಿನಿಂದ ಕಂಗೊಳಿಸುವುದು. ಚಳಿಗಾಲದಲ್ಲಿ ಹಿಮಾಚ್ಛಾದಿತವಾದ ಬೆಟ್ಟಗುಡ್ಡಗಳು, ಹುಲ್ಲುಗಾವಲು, ಮರಗಿಡಗಳನ್ನು ನೋಡುವುದೇ ಆನಂದ. ಅದಕ್ಕಾಗಿಯೇ ಇದನ್ನು ಭೂಲೋಕದ ಸ್ವರ್ಗ ಎಂದು ಕರೆದಿದ್ದಾರೆ. ಸ್ವರ್ಗದ ಬಣ್ಣನೆಯನ್ನು ಕತೆಗಳಲ್ಲಿ ಓದಿ ಅದಕ್ಕೆ ಹೋಲಿಕೆ ಮಾಡಿದ್ದಾರೆ. ನಿಜವಾದ ಸ್ವರ್ಗವನ್ನು ನೋಡಿ ಹಿಂದಿರುಗಿ ಬಂದವರಿಲ್ಲ. ಪ್ರಕೃತಿಯ ರಮಣೀಯ ದೃಶ್ಯಗಳನ್ನು ಮನದುಂಬಿಕೊಂಡು ಇಹಲೋಕದ ಜಂಜಾಟಗಳನ್ನು ಕೆಲಕಾಲ ಮರೆಸುವ ಅತ್ಯದ್ಭುತ ಸೌಂದರ್ಯ ಕಾಶ್ಮೀರದಲ್ಲಿ ನೆಲೆಸಿದೆ. ನಮ್ಮ ಕರ್ನಾಟಕದ ಕೊಡಗು ಜಿಲ್ಲೆಯು ದಕ್ಷಿಣ ಕಾಶ್ಮೀರ ಎಂದು ಪ್ರಸಿದ್ಧವಾಗಿದೆ.

ಬಹುತೇಕ ಪ್ರವಾಸಿಗರಿಂದಲೇ ಕಾಶ್ಮೀರದ ಜನಜೀವನ ನಡೆಯುತ್ತಿದೆ. ಮಾನವನಾಗಿ ಹುಟ್ಟಿದ ಮೇಲೆ ಈ ಭೂನಾಕವನ್ನು ಒಮ್ಮೆ ಕಣ್ತುಂಬಿಕೊಳ್ಳುವ ಹಂಬಲ ಭಾರತೀಯ ಪ್ರವಾಸಿಗರದ್ದು. ಅಲ್ಲಿನ ಗಲಾಟೆಗಳು, ನಮ್ಮ ಸೀಮಿತ ರಜೆಗಳಿಂದಾಗಿ ಕಾಶ್ಮೀರ ದರ್ಶನ ಭಾಗ್ಯ ಲಭಿಸಿರಲಿಲ್ಲ.

ನನ್ನ ಗೆಳತಿಯರು ಕಾಶ್ಮೀರ ಪ್ರವಾಸದ ಬಗ್ಗೆ ವಿಚಾರಿಸಿಕೊಂಡು 3–4 ಪ್ರವಾಸ ಕಚೇರಿಗಳಿಗೆ ಭೇಟಿ ನೀಡಿ ಕೊನೆಗೆ ನಮ್ಮ ದಿನಾಂಕಕ್ಕೆ, ನಿರೀಕ್ಷೆಗೆ ಒದಗಿ ಬಂದಿದ್ದು, ಮುಂಗಡ ಹಣ ಕಳುಹಿಸಿದ್ದು ಎಲ್ಲವೂ ನೇತಾಜಿ ಟ್ರಾವೆಲ್ಸ್ ನಲ್ಲಿ. ಪ್ರಯಾಣಕ್ಕೆ ಕೇವಲ ಹತ್ತು ದಿನಗಳಿದ್ದವು. ಆದರೆ ನಾವು ಕಾಶ್ಮೀರ ಪ್ರವಾಸ ಕೈಗೊಂಡದ್ದು ಗೋಯಾತ್ರಾದಿಂದ. ನಮಗೆ ಆ ವಿಷಯ ತಿಳಿದದ್ದು ಬೆಂಗಳೂರು ವಿಮಾನ ನಿಲ್ದಾಣದಲ್ಲಿ. ಬಜಾಜ್ ಅಲಿಯನ್ಸ್ ನಿಂದ ಪ್ರತಿಯೊಬ್ಬ ಪ್ರವಾಸಿಯ ಹೆಸರಿನಲ್ಲಿ ಟ್ರಾವೆಲ್ ಇನ್ಸ್ಯೂರೆನ್ಸ್ ಮಾಡಿಸಿದ್ದು ಒಂದು ವಿಶೇಷ ಸಂಗತಿ. ನಮ್ಮ ವಿಮಾನದ ಟಿಕೆಟ್ ತಾರೀಖು 2024ರ ಡಿಸೆಂಬರ್ ತಿಂಗಳಿನಲ್ಲಿ. ಆ ಬಗ್ಗೆ ವಿಚಾರಿಸಿದಾಗ ತಿಳಿದಿದ್ದು ಟಿಕೆಟ್ಟುಗಳನ್ನು ಮುಂಗಡವಾಗಿ ಹಲವು ತಿಂಗಳುಗಳ ಮೊದಲೇ ಕಾದಿರಿಸಿ ಒಂದು ವಾರ ಮುಂಚಿತವಾಗಿ ಹೆಸರುಗಳನ್ನು ತಿಳಿಸಿದರೆ ಸಾಕು ಎಂದು. ಪ್ರವಾಸ ಚೆನ್ನಾಗಿ ಆದರೆ ಸಾಕು ಎಂದು ನಾವುಗಳು ಅದರ ಬಗೆಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಸುಮಾರು ನಾಲ್ಕು ದಶಕಗಳಿಂದ ಒದಗಿಬಾರದಿದ್ದ ಸಮಯ 2025ರ ಏಪ್ರಿಲ್ 17ರಂದು ಒದಗಿ ಬಂದಿತು. ಟುಲಿಪ್ ಫೆಸ್ಟಿವಲ್ ನೋಡಬೇಕು ಎನ್ನುವುದು ನಮ್ಮ ಆಶಯವಾಗಿತ್ತು.

2025ರ ಏಪ್ರಿಲ್ 17ರಂದು ಬೆಳಗ್ಗೆ ಏಳು ಗಂಟೆಗೆ ಬೆಂಗಳೂರು ವಿಮಾನ ನಿಲ್ದಾಣದಿಂದ ಇಂಡಿಗೋ ವಿಮಾನದಲ್ಲಿ ಹೊರಟು ದೆಹಲಿ, ನಂತರ ಅಲ್ಲಿಂದ ಶ್ರೀನಗರಕ್ಕೆ ಪಯಣ. ಮದ್ಯಾಹ್ನ 3 ಗಂಟೆಗೆ ಶ್ರೀನಗರ ವಿಮಾನ ನಿಲ್ದಾಣ ಸೇರಿದೆವು. 2015ರಲ್ಲಿ, ಕಾಶ್ಮೀರ ರಾಜ್ಯ ಸರ್ಕಾರವು ಪೂಜ್ಯ ಕಾಶ್ಮೀರಿ ಸೂಫಿ ಸಂತ ಶೇಖ್–ಉಲ್–ಆಲಂ ಅವರ ಹೆಸರನ್ನು ವಿಮಾನ ನಿಲ್ದಾಣಕ್ಕೆ ಶೇಖ್–ಉಲ್–ಆಲಂ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಮರುನಾಮಕರಣ ಮಾಡಿತು. ಅಲ್ಲಿ ಫೋಟೋ ತೆಗೆಯುವ ಹಾಗಿಲ್ಲ. ಸೆಕ್ಯುರಿಟಿಯು ಬಹಳ ಇರುತ್ತದೆ. ನಮ್ಮ ವಿಮಾನ ಕಾಶ್ಮೀರ ತಲುಪಿತು ಎಂದು ಕೇಳಿದ ಕೂಡಲೇ ಒಂದು ರೀತಿಯ ಪುಳಕ. ನಮ್ಮ ಲಗೇಜ್ ಅನ್ನು ತೆಗೆದುಕೊಂಡು ಮೊದಲೇ ನಿಗದಿಪಡಿಸಿದ ವಾಹನದಲ್ಲಿ ಕುಳಿತು ಮಧ್ಯಾಹ್ನದ ಊಟಕ್ಕೆ ಹೊರಟೆವು. ಎಲ್ಲರ ಹೊಟ್ಟೆಯೂ ಹಸಿವಿನಿಂದ ತಾಳ ಹಾಕುತ್ತಾ ಇತ್ತು. ಅದರ ಜೊತೆಗೆ ವಿಪರೀತ ಟ್ರಾಫಿಕ್ ಜಾಮ್. ಎಲ್ಲಾ ಕಡೆಯೂ ಆಂಗ್ಲ ಭಾಷೆಯ ಬೋರ್ಡುಗಳು. ಹುಡುಕಿದರೂ ನಮಗೆ ಹಿಂದಿ ಭಾಷೆಯ ಬೋರ್ಡ್ ಕಾಣಿಸಲಿಲ್ಲ. ಸ್ವಲ್ಪ ದೂರ ಮುಖ್ಯ ರಸ್ತೆಯಲ್ಲಿ ಚಲಿಸಿದ ನಂತರ ಸಣ್ಣ ಸಣ್ಣ ಗಲ್ಲಿಗಳದೇ ಸಾಮ್ರಾಜ್ಯ. ಒಂದು ಚಿಕ್ಕ ವಾಹನ ಮಾತ್ರ ಚಲಿಸುವಷ್ಟು ಜಾಗ ಇತ್ತು. ಅಂದು ಮದ್ಯಾಹ್ನದ ಊಟ ಫೋರ್ ಸೀಸನ್ಸ್ ರೆಸಾರ್ಟ್ ನಲ್ಲಿ ಎಂದು ನಿಗದಿಯಾಗಿತ್ತು. ಹೋಟೆಲ್ ಬೋರ್ಡ್ ಕಾಣಿಸುತ್ತಾ ಇದ್ದರೂ ಒಳಗಡೆ ಹೋಗಲು ಅರ್ಧ ಗಂಟೆಗೂ ಅಧಿಕ ಸಮಯ ಬೇಕಾಯಿತು. ನಮ್ಮ ವಾಹನವನ್ನು

ಹಿಂದೆ ಮುಂದೆ ಚಲಿಸಲೂ ಆಗದೆ, ಕಿಷ್ಕಿಂಧೆಯಂತಿದ್ದ ಸಣ್ಣ ಗೇಟಿನೊಳಗೆ ತೂರಿಸಲೂ ಆಗದೆ ವಾಹನದ ಚಾಲಕ ಹರಸಾಹಸಪಡುತ್ತಿದ್ದ. ಇಳಿದು ನಡೆದು ಹೋಗೋಣವೆಂದರೆ ವಾಹನದ ಬಾಗಿಲು ತೆರೆಯಲೂ ಸಹ ಇಕ್ಕಟ್ಟಾದಂತಹ ಸ್ಥಳ. ಅಂತೂ ಇಂತೂ ಸುಮಾರು ಐದು ಗಂಟೆಯ ಸುಮಾರಿಗೆ ಟೊಮೆಟೊ ಸೂಪ್, ಆಲೂ ಪರೋಟ, ಪನೀರ್ ಕರಿ, ಕಾಶ್ಮೀರಿ ಪಲಾವ್, ಹಪ್ಪಳ, ಶಾವಿಗೆ ಕೀರು, ಮತ್ತಿತರ ವ್ಯಂಜನಗಳೊಂದಿಗೆ ಪುಷ್ಕಳ ಭೋಜನ ಮಾಡಿದೆವು.

ನಂತರ ಹೋಟೆಲಿನತ್ತ ಪಯಣ. ಅದೇ ಟ್ರಾಫಿಕ್ ಜಾಮ್. ಆದರೂ ನಮ್ಮ ಹೋಟೆಲ್ ದಾಲ್ ಲೇಕ್ ಸಮೀಪವೇ ಇದ್ದುದ್ದರಿಂದ ದಾಲ್ ಸರೋವರದ ಸೌಂದರ್ಯವನ್ನು ಆಸ್ವಾದಿಸುತ್ತಾ ಅದರ ಸುತ್ತಲಿನ ಮಾರ್ಗದಲ್ಲಿ ಸಂಚರಿಸಿದೆವು. ಹೆಜ್ಜೆ ಹೆಜ್ಜೆಗೂ ಶ್ರೀನಗರದ ಪ್ರಜೆಗಳನ್ನು, ಪ್ರವಾಸಿಗಳ ಕ್ಷೇಮವನ್ನು ಕಾಪಾಡಲು ನಿಯೋಜಿಸಿರುವ ಫೌಜಿಗಳು. ನೋಡಿದಷ್ಟೂ ಉದ್ದಕ್ಕೂ ಸ್ವಚ್ಛ ನೀರಿನಿಂದ ಆವೃತವಾದ ವಿಸ್ತಾರವಾದ ಸರೋವರ. ಹದಿನೈದು ಕಿಲೋಮೀಟರಿಗಿಂತಲೂ ಅಧಿಕವಾದ ಸುತ್ತಳತೆ, ಸರೋವರ ಒಟ್ಟು ಹದಿನೆಂಟು ಚದರ ಕಿಲೋಮೀಟರ್ ವಿಸ್ತೀರ್ಣವಿದೆ

ಹೋಟೆಲ್ ತಲುಪಿದ ತಕ್ಷಣ ಬಿಸಿಬಿಸಿಯಾದ ಕಾಶ್ಮೀರಿ ವಿಶೇಷ ಪಾನೀಯ ಕಹ್ವಾ ಕಂಪು ಮನ ಸೆಳೆಯಿತು. ಸುವಾಸನಾಭರಿತ ಕಹ್ವಾ, ಭಾರತೀಯ ಮಸಾಲೆಗಳ ಮಿಶ್ರ ಪಾನೀಯ, ಆರೋಗ್ಯದಾಯಕವೂ ಹೌದು. ಗುಲಾಬಿ ದಳಗಳು, ದಾಲ್ಚಿನ್ನಿ, ಏಲಕ್ಕಿ, ಸೋಂಪು, ಶುಂಠಿ, ಹಸಿರು ಚಹಾ, ಲವಂಗ ಮತ್ತು ಕೇಸರಿಯ ಉತ್ತಮ ಗುಣಗಳಿಂದ ತುಂಬಿರುವ ಈ ಮಿಶ್ರಣವು ಅದರ ಅದ್ಭುತ ವಿಶಿಷ್ಟ ಸುವಾಸನೆಯಿಂದ ಆಹ್ಲಾದಕರ. ಆಗಲೇ ಬಹಳ ತಡವಾಗಿತ್ತು. ಆದ್ದರಿಂದ ಅಂದು ನಿಶಾತ್ ಬಾಗ್ ನೋಡಿಕೊಂಡು ಬಂದೆವು.

ಮುಘಲ್ ಗಾರ್ಡನ್ ಗಳಲ್ಲಿ ಒಂದಾದ ನಿಶಾತ್ ಬಾಗ್‌ನ್ನು ಮುಘಲ್ ದೊರೆಗಳು ಕಟ್ಟಿಸಿದರು. ಇದು ದಾಲ್ ಸರೋವರದ ಪೂರ್ವ ಭಾಗದಲ್ಲಿ ನಿರ್ಮಿಸಿರುವ ಒಂದು ಟೆರೇಸ್ಡ್ ಮೊಘಲ್ ಉದ್ಯಾನವನವಾಗಿದೆ. ಕಾಶ್ಮೀರ ಕಣಿವೆಯಲ್ಲಿರುವ ಎರಡನೇ ಅತಿ ದೊಡ್ಡ ಮೊಘಲ್ ಉದ್ಯಾನವನ. ಹಂತಹಂತವಾಗಿ ನಿರ್ಮಾಣ ಮಾಡಿರುವ ನಿಶಾತ್‌ಬಾಗ್‌ನಲ್ಲಿ ಕಾಶ್ಮೀರದ ಸಾಂಪ್ರದಾಯಿಕ ಉಡುಗೆ ತೊಟ್ಟು ಫೋಟೋ ತೆಗೆಸಿಕೊಳ್ಳುವ ಪ್ರವಾಸಿಗರ ದಂಡು ನೋಡುವುದೇ ಒಂದು ರೋಚಕ ಅನುಭವ. ಗಾತ್ರದಲ್ಲಿ ದೊಡ್ಡದು ಶಾಲಿಮಾರ್ ಬಾಗ್. ಇದು ದಾಲ್ ಸರೋವರದ ದಡದಲ್ಲಿದೆ. MUGHAL GARDEN NISHATH ಎಂದು ಆಂಗ್ಲ ಭಾಷೆಯಲ್ಲಿ ಬರೆದಿದೆ. ನಿಶಾತ್‌ಬಾಗ್‌ನ ವಿನ್ಯಾಸವು ಪರ್ಷಿಯನ್ ಉದ್ಯಾನಗಳ ಮೂಲ ಪರಿಕಲ್ಪನೆಯನ್ನು ಆಧರಿಸಿದೆ.

(ಸಶೇಷ)

***

ಸಾವಿರವ ಕಟ್ಟಿದಾಕೆ

– ರಾಧಿಕಾ ಗುಜ್ಜರ್

ರೇಶಿಮೆಯಂತಹ ನುಣುಪು ಬೆಳ್ಳಿ ಕೂದಲು
ಒಪ್ಪವಾಗಿ ಎಣ್ಣೆ ಹಚ್ಚಿಕೊಳ್ಳುವ ಸುಕ್ಕು ಬೆರಳು
ಕಟ್ಟಿಗೆಯ ಹಣಿಗೆ ಈಗ ಪೂರಾ ಕಪ್ಪು
ಸವೆದರೂ ಸೀದಾ ಹಲ್ಲುಗಳು ಅದರವು
ಬಿಡು... ನೆತ್ತಿಗೆ ಕೊರೆಯುವುದಿಲ್ಲ ಅನ್ನುತ್ತಾಳೆ
ಕನ್ನಡಿಯ ಗರಜಿಲ್ಲದೆಯೇ ತನ್ನ ಕಾಣುತ್ತಾಳೆ
ಎಡ ಹಸ್ತದ ಕೊನೆಯೆರಡು ಬೆರಳಿಂದ ಬೈತಲೆ ಗೀರುತ್ತಾಳೆ
ನೆತ್ತಿಯಿಂದ ತುರುಬಿನೆಡೆಗೆ ಕೊದ್ದು ಬಾಚುತ್ತಾಳೆ

ಎರಡೇ ಬೆರಳಗಲ ಉಳಿದಿದೆ ಜಡೆ
ಒಂದೂ ಕಾಲು ಕೆದರದಂತೆ ಹೆಣೆಯುತ್ತಾಳೆ
ಎಡ ಹೆಗಲಿಗಿಳಿದು ಸಾಗುವ ತುದಿಗೆ
ಮುಗಿವ ಮೊದಲೇ ಕಪ್ಪು ದಾರ ಅಳವಡಿಸುತ್ತಾಳೆ
ದಾರವ ಸೇರಿಸಿ ಹೆಣೆದು ಗಂಟು ಹಾಕಿ
ಬಿಗಿಯ ಬಿಡದೆಲೆ ತುರುಬು ಸುತ್ತಿಕೊಳ್ಳುತ್ತಾಳೆ
ಕನ್ನಡಿ, ಹಣಿಗೆ, ಎಣ್ಣೆ ಎಲ್ಲವೂ ಹಾಗೇ ಇವೆ
ನಾಳೆಗೆಂದುಳಿಸುತ್ತಲೇ ಎಣ್ಣೆ ಕೈಯ ಕಾಲಿಗೆ ನೀವಿಕೊಳ್ಳುತ್ತಾಳೆ

ಎಡ ಬಲಗಳ ಸಂಭಾಳಿಸಿದಾಕೆ ಅವಳು
ಯಾವ ಭಾಗವೂ ನವೆಯದಂತೆ ಕಾಪಿಡುತ್ತಾಳೆ
ತನ್ನವರಾಗಲಿ, ತನ್ನ ವಸ್ತುಗಳೇ ಆಗಲಿ
ಗೀರಿ ವಿಭಾಗಿಸಿ ವಿಂಗಡಿಸಿಕೊಳ್ಳುತ್ತಾಳೆ
ಆಲೋಚನೆಗಳ ಹಳಿ ತಪ್ಪದು ವಿವೇಕದಲಿ
ನೇರ ಸಾಗುತ್ತವೆ ಸಹಜ ಅವಳಿರುವಿಕೆಯಲಿ
ಅದೇ ಸಂಸಾರವೆಂಬ ಬಿಗಿ ಹೆಣೆಯುವಿಕೆ
ಅದೇ ಎಲ್ಲರನ್ನೊಂದಾಗಿಸಿ ಅಪ್ಪುವ ಹಿರಿತನದಾಕೆ

"ಉರ್ವಾರುಕಮಿವಾ ಬಂಧನಾನ್" ಜಪಿಸುವಾಕೆ
ಸವೆದಿದ್ದಾಳೆ, ಮಾಗಿದ್ದಾಳೆ, ಸುಕ್ಕುಗಟ್ಟಿದ್ದಾಳೆ
ಆದರೂ ಅದೇ ನಿರಂತರಿತ, ಅದೇ ನಚ್ಕೆ
ಕಡಿಮೆಯಾದರೂ ಕಡಿದುಕೊಳ್ಳದ ಚಾಚುವಿಕೆ
ಅನಿವಾರ್ಯತೆ ಆಕೆಯದು ಎಂದುಕೊಂಡಿದ್ದ ನಮಗೆ
ಆರುವವರೆಗೂ ಉರಿದು, ಅರಿವ ದೀಪವಾಗಿದ್ದಾಳೆ
ಮೊಳದುದ್ದ ದಾರವ ಬಳಸಿ ಸಾವಿರವ ಕಟ್ಟಿದಾಕೆ
ಅಂತಃಕರಣದ ಎಣ್ಣೆಯ ಈಗಲೂ ಗಿಂಡಿಗುಳಿಸಿದ್ದಾಳೆ

***

ಮಿನುಗುತಾರೆ ಕಲ್ಪನಾ

– ಟಿ.ಆರ್. ಉಷಾರಾಣಿ



12 ಮೇ 1978 – ಕನ್ನಡ ಚಲನಚಿತ್ರಲೋಕದ ಮಿನುಗುವ ತಾರೆ, ನಿಜ ಅರ್ಥದಲ್ಲಿ ಪಂಚಭೂತಗಳಲ್ಲಿ ಲೀನವಾಗಿ ಆಕಾಶದಲ್ಲಿ ಮಿನುಗುವ ತಾರೆಯಾದ ದಿನ. ಕರಾವಳಿಯ ನೆಲದ ಶರತ್ ಲತಾ ಎಂಬ ಹುಡುಗಿ ಕಲೆಯನರಸಿಕೊಂಡು ಮದ್ರಾಸು ತಲುಪಿ ಸೀದಾ ರಷ್ಯಾದಲ್ಲಿ ಪ್ರಶಸ್ತಿ ಸ್ವೀಕರಿಸಿದಂತಹ ಅಭಿಜಾತ ಕಲಾವಿದೆ. ಜೀವನದಲ್ಲಿ ಹಲವು ಎಡರು ತೊಡರುಗಳನ್ನು ಕಂಡರೂ ಒಮ್ಮೆ ನೆಲೆ ನಿಂತ ಮೇಲೆ ಆಕೆ ಹಿಂದಿರುಗಿ ನೋಡಿದ್ದೇ ಇಲ್ಲ. ಚಿತ್ರಲೋಕ ಎಂಬುದೇ ಮಾಯಾನಗರಿ. ಯಾವುದೇ ಪೂರ್ವಾಪರ ಇಲ್ಲದೆ ಅಭಿನಯದ ಆಸೆಯಿಂದ ಬರುವವರಿಗೆ ಅದು ಮಯನ ಅರಮನೆಯಂತೆ. ಪ್ರತಿಸಲ ಬಿದ್ದಾಗಲೂ ಗರಿಗೆದರಿ ಎದ್ದು ನಿಂತಳು ಅಭಿನೇತ್ರಿ ಕಲ್ಪನಾ. 1963ರಲ್ಲಿ ತೆರೆಕಂಡ ಆಕೆಯ ಮೊತ್ತ ಮೊದಲ ಚಿತ್ರ 'ಸಾಕುಮಗಳು' ಮೂಲಕ ಬೆಳ್ಳಿತೆರೆಗೆ ಪರಿಚಿತಳಾದಳಾರೂ ಸಂಪೂರ್ಣ ತೃಪ್ತಿ ತಂದುಕೊಟ್ಟಿರಲಿಲ್ಲ. ಹಾಗೆಂದು ಧೃತಿಗೆಟ್ಟವಳಲ್ಲ. ಹೊಸ ಪಾತ್ರಗಳ ಅನ್ವೇಷಣೆಯಲ್ಲಿ ತೊಡಗಿ ಎತ್ತರೆತ್ತರಕ್ಕೆ ಏರಿದ ಕಲಾವಿದೆ.

1963–1978ರವರೆಗೆ ಸುಮಾರು 78 ಚಿತ್ರಗಳಲ್ಲಿ ನಟಿಸಿ, ಕೊನೆಯ ಹಂತದಲ್ಲಿ ಅವಕಾಶ ವಂಚಿತಳಾಗಿ ನಾಟಕರಂಗದಲ್ಲಿ ಸೇವೆ ಸಲ್ಲಿಸಿದ್ದಳು. ತ್ರಿವೇಣಿ, ಎಂ.ಕೆ. ಇಂದಿರಾ, ವಾಣಿ, ಚದುರಂಗ, ಭಾರತೀಸುತ, ಆರ್ಯಾಂಭ ಪಟ್ಟಾಭಿ ಹೀಗೆ ಪ್ರಸಿದ್ಧ ಸಾಹಿತಿಗಳ ಕಾದಂಬರಿ ಆಧಾರಿತ ಚಿತ್ರಗಳಲ್ಲಿ ನಾಯಕಿಯ ಸ್ಥಾನದಲ್ಲಿ ಅಲಂಕರಿಸಿದ ಹಿರಿಮೆ ಈಕೆಗಿದೆ. ಬಹುತೇಕ ಎಲ್ಲವೂ ಸ್ತ್ರೀ ಪ್ರಧಾನವಾದ ಕತೆಗಳಾದ್ದರಿಂದ ಅಲ್ಲಿ ಆಕೆಯ ಅಭಿನಯ ಒರೆಗೆ ಹಚ್ಚಿದ ಚಿನ್ನದಂತೆ ಮತ್ತಷ್ಟು ಪ್ರಬುದ್ಧತೆಯನ್ನು ಪಡೆಯುತ್ತಾ ಹೋಯಿತು. ಕಲ್ಪನಾ ಅಪ್ರತಿಮ ಸುಂದರಿಯಲ್ಲ. ತೆಳ್ಳಗೆ, ಬೆಳ್ಳಗೆ ಬಳಕುವ ದೇಹ ಸೌಂದರ್ಯವೇನೂ ಹೊಂದಿರಲಿಲ್ಲ. ಎತ್ತರದ ನಿಲುವು, ಸ್ವಲ್ಪ ಉದ್ದವಾದ ಕತ್ತು ಆ ಕತ್ತಿನ ಮೇಲೊಂದು ಕರಿಯ ಮಚ್ಚೆ, ದಪ್ಪ ಧ್ವನಿ. ಚರ್ಮದ ಮೇಲೆ ಎದ್ದು ಕಾಣುತ್ತಿದ್ದ ಚಿಬ್ಬುಗಳನ್ನು ಮರೆಮಾಚಲು ಆಕೆ ಪೂರ್ಣ ತೋಳಿನ ಕುಪ್ಪಸಗಳನ್ನು ತೊಡುತ್ತಿದ್ದಳು. ಇವೆಲ್ಲವನ್ನೂ ಮೀರಿ ಅಭಿನಯವೇ ಆಕೆಯ ಸೌಂದರ್ಯ, ಮೇರು ಶಿಖರಕ್ಕೇರಲು ಸೋಪಾನ. ಪಾತ್ರಗಳಲ್ಲಿ ಮುಳುಗಿ ಪಾತ್ರವೇ ತಾನು, ತಾನೇ ಪಾತ್ರ ಎಂಬಂತಹ ಭಾವ. ಎಷ್ಟೋ ಸಲ ಪಾತ್ರದಿಂದ ಆಕೆಯನ್ನು ಹೊರತರುವುದು ನಿರ್ದೇಶಕರಿಗೆ ಕಷ್ಟವಾಗುತ್ತಿತ್ತಂತೆ. ಕಲೆ ಎಂದರೆ ಆರಾಧನೆ ಎಂದು ತಿಳಿದವಳು ಕಲ್ಪನಾ. ಆಕೆಯ ಸಹ ಕಲಾವಿದರೂ ಸಹ ಆಕೆಯೊಂದಿಗೆ ನಟಿಸಲು ಹೆದರುತ್ತಿದ್ದರೆಂಬುದು ಅತಿಶಯೋಕ್ತಿಯೇನಲ್ಲ. ಆಕೆಯ ಅಭಿನಯಕ್ಕೆ ಸೋತ ಮೇರು ನಟರೇ "ಎಂತಹ ಉತ್ತಮ ಕಲಾವಿದೆಯಮ್ಮ ನೀನು" ಎಂದು ಕೈಮುಗಿದು ಆಕೆಯ ಅಭಿನಯವನ್ನು ಆಸ್ವಾದಿಸುತ್ತಾ ತಮಗೆ ಆ ಸಂದರ್ಭದಲ್ಲಿ ಸಂಭಾಷಣೆಯೇ ಬೇಡಾ ಎಂದು ಭಾವಾಭಿನಯ ನೀಡಿದ್ದು ಇಂದಿಗೆ ಇತಿಹಾಸವಾದರೂ ಸತ್ಯ.

'ಬೆಳ್ಳಿಮೋಡ', 'ಶರಪಂಜರ', 'ಯಾವ ಜನ್ಮದ ಮೈತ್ರಿ', 'ಹಣ್ಣೆಲೆ ಚಿಗುರಿದಾಗ' ಚಿತ್ರಗಳು ಆಕೆಗೆ ಅತ್ಯುತ್ತಮ ನಟಿ, ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ, ಫಿಲಂಫೇರ್ ಪ್ರಶಸ್ತಿ ತಂದುಕೊಟ್ಟ ಚಿತ್ರಗಳು. ಹೆಣ್ಣಿನ ಮನಸ್ಸಿನ ತೊಳಲಾಟವನ್ನು ಮನೋಜ್ಞವಾಗಿ ಅಭಿನಯಿಸಿದ ತಾರೆ. ಬಹುತೇಕ ಚಿತ್ರಗಳಲ್ಲಿ ಆಕೆ ದುರಂತ ನಾಯಕಿಯ ಪಾತ್ರವನ್ನು ವಹಿಸಿದ್ದರು. ಸ್ವಂತ ಜೀವನವೂ ರುದ್ರನಾಟಕದ ಪಾತ್ರಧಾರಿಯಂತೆ ಇತಿಹಾಸವಾದದ್ದು ಮಾತ್ರ ಬೇಸರದ ಸಂಗತಿ. 1963ರಲ್ಲಿ ಆಕೆ ಬೆಳ್ಳಿತೆರೆಗೆ ಪರಿಚಿತಳಾದರೂ ಅವಕಾಶಗಳು ಆಕೆಯನ್ನು ಅರಸಿಕೊಂಡು ಬಾರದೇ ಇದ್ದಾಗ ತಮಿಳು, ಮಲೆಯಾಳಂ, ತುಳು ಚಿತ್ರಗಳಲ್ಲೂ ಆಕೆ ನಟಿಸಿ ಸೈ ಅನ್ನಿಸಿಕೊಂಡಿದ್ದಳು.

ಕಲ್ಪನಾಳ ಮತ್ತೊಂದು ಮರೆಯಲಾರದಂತಹ ವ್ಯಕ್ತಿತ್ವ ಎಂದರೆ ಆ ಕಾಲದ ಫ್ಯಾಶನ್ ಐಕಾನ್ ಆಗಿದ್ದಳು. ಸೀರೆಯೇ ಉಟ್ಟರೂ ಅದರಲ್ಲೊಂದು ಹೊಸತನ, ಇದುವರೆಗೂ ಯಾರೂ ಮಾಡದೇ ಇರುವ ಹೊಸ ನಮೂನೆಯ ಫ್ಯಾಶನ್, ಆಕೆ ಹೊಲಿಸಿ ಕೊಳ್ಳುತ್ತಿದ್ದ ಕುಪ್ಪಸದ ವಿನ್ಯಾಸಗಳೆಲ್ಲಾ ಇಂದು ಫ್ಯಾಶನ್ ಆಗಿವೆ. ಕಡಲೇಕಾಯಿ ಮಾರಿದರೂ ಆಕೆಯ ವಸ್ತ್ರ ವಿನ್ಯಾಸ ವಿನೂತನ. ಇನ್ನು ಮಹಿಳಾ ಲೇಖಕಿಯರು ತಮ್ಮ ಕಾದಂಬರಿಗಳಲ್ಲಿ ವರ್ಣಿಸುತ್ತಿದ್ದಂತೆ, ಬುಟ್ಟಾಗಳಿರುವ ಸೀರೆ, ಜರಿಯ ಪತ್ತಲವಿರುವ ಚೋಲಿ, ಬಹುವಿನ್ಯಾಸದ ಹೆರಳುಗಳು, ಕೈಗೆ ಬಹಳಷ್ಟು ಅಗಲವಾದ ಚಿತ್ತಾರವಿರುವ ಉಂಗುರಗಳು, ಉದ್ದನೆಯ ಮಣಿ ಸರಗಳು ಒಮ್ಮೊಮ್ಮೆ ಉಗುಳು ನುಂಗುವ ಹಾಗೂ ಸರವನ್ನು ಕಚ್ಚುವ ಮೂಲಕ ನಾಚಿಕೆ ತೋರಿಸುತ್ತಿದ್ದ ಆಕೆಯ ಅಭಿನಯವನ್ನು ಮರೆಯಲು ಸಾಧ್ಯವೇ? ಆಕೆಯ ವಸ್ತ್ರ ವಿನ್ಯಾಸ, ಹೆರಳು, ಮೇಕಪ್ಪು ಮಾಡಿಕೊಂಡು ಎಷ್ಟು ಜನ ಮಹಿಳೆಯರು ಆನಂದಪಟ್ಟಿರಲಿಲ್ಲ. 60-70ರ ದಶಕದಲ್ಲಿ ಕನ್ನಡ ಚಿತ್ರರಂಗದ ಅನಭಿಷಿಕ್ತ ಸಾಮ್ರಾಜ್ಞಿಯಾಗಿ ಮೆರೆದವಳು ಮತ್ತು ಆಗಿನ ಕೆಲವು ನಾಯಕಿಯರಿಗೆ ಒಳ್ಳೆಯ ಸ್ಪರ್ಧೆಯನ್ನು ನೀಡಿದ್ದಳೆಂದರೆ ತಪ್ಪಾಗಲಾರದು. ಪಾತ್ರಗಳಿಗೆ ಜೀವತುಂಬಿ, ಕಾದಂಬರಿಯಲ್ಲಿ ವರ್ಣಿಸಿರುವುದಕ್ಕಿಂತಲೂ ಅತ್ಯುನ್ನತ ಮಟ್ಟದ ಅಭಿನಯ. ಬಹುಶ: ಒಂದೇ ಟೇಕಿಗೆ ಶಾಟ್ ಓಕೆ ಆಗುತ್ತಿತ್ತು ಎನ್ನುವುದರಲ್ಲಿ ಸಂಶಯವೇ ಇಲ್ಲ. ಯಾವುದರಲ್ಲೂ ರಾಜಿ ಮಾಡಿಕೊಳ್ಳುವ ವ್ಯಕ್ತಿತ್ವ ಅವಳದಲ್ಲ.

ಕೆಲವೊಮ್ಮೆ ಅತಿಯಾದ ಮೇಕಪ್ಪು, ವಸ್ತ್ರ ವಿನ್ಯಾಸ, ಓವರ್ ಆಕ್ಟಿಂಗ್ ಎನ್ನುವಂತಹ ಅಭಿನಯ ಚಿತ್ರ ರಸಿಕರಿಗೆ ಪಾಯಸದಲ್ಲಿ ಕಲ್ಲು ಸಿಕ್ಕಿರುವುದೂ ಉಂಟು. ಉದಾಹರಣೆಗೆ ಶರಪಂಜರದ ಅಷ್ಟು ಪ್ರಬುದ್ಧ ಅಭಿನಯದಲ್ಲಿ ರೇಡಿಯೋ ತಂದು ಅತ್ತೆಯ ರೂಮಿನಲ್ಲಿಟ್ಟು ತನ್ನ ಅತ್ತೆಗೆ ಅಭಿನಯಪೂರ್ವಕವಾಗಿ ಅವರು ರೇಡಿಯೋದಲ್ಲಿ ಏನೇನು ಕೇಳಬೇಕೆಂದು ವಿವರಿಸುವ ಓವರ್ ಆಕ್ಟಿಂಗ್ ಸ್ವಲ್ಪ ಮುಜುಗರವೇ. ಏನೆಂದರೂ ನಮ್ಮ ದೃಷ್ಟಿಯಲ್ಲಿ ಕಲ್ಪನಾ ಎಂದರೆ ಸೋಲಿಲ್ಲದ, ಅಭಿನಯದಲ್ಲಿ ಯಾವುದೇ ರಾಜಿ ಇಲ್ಲದ, ಮಿನುಗುತಾರೆ. ಆಕೆಯ ಅಭಿನಯ ಸಾಮರ್ಥ್ಯಕ್ಕೆ ಸಂದ 'ಮಿನುಗುತಾರೆ' ಗೌರವದ ಬಿರುದು ಎಪ್ಪತ್ತರ ದಶಕದಲ್ಲಿ ಚಲನಚಿತ್ರರಂಗ ಮತ್ತು ಅಂದಿನ ಮಹಿಳಾಮಣಿಗಳಿಗೆ ಮತ್ತಷ್ಟು ಆಕೆ ಹತ್ತಿರವಾಗಿದ್ದಳು. ಆಕೆಯನ್ನು ತುಂಬಾ ಮೊಂಡು, ಅಹಂಕಾರಿ, ಹಠಮಾರಿ, ಮಹತ್ವಾಕಾಂಕ್ಷಿ ಹೆಣ್ಣು ಎಂದು ಹೇಳುವವರಿದ್ದಾರೆ. ಪರದೆಯ ಮೇಲೆ ರಾಜಿ ಮಾಡಿಕೊಳ್ಳದ ಆಕೆಯ ಅಭಿನಯವನ್ನು ನೋಡಿದ ನಮಗೆ ನಿಜವಿರಬಹುದೇನೋ ಅನಿಸಿದ್ದುಂಟು.

ತನ್ನ ಅಭಿನಯದಿಂದ ಚಿತ್ರರಸಿಕರನ್ನು ಮಂತ್ರಮುಗ್ಧಗೊಳಿಸಿದ್ದ ನಟಿಯ ಸ್ವಂತದ ಜೀವನ ಬರೀ ಮುಳ್ಳುಗಳಿಂದಲೇ ತುಂಬಿತ್ತು. ವೈಯಕ್ತಿಕ ಜೀವನದಲ್ಲಿ ಆಕೆಗೆ ಸಂತೋಷವಿರಲಿಲ್ಲ, ಸುಖವಿರಲಿಲ್ಲ, ನೆಮ್ಮದಿ ಇರಲಿಲ್ಲ. ಅವಳಿಂದ ಅಭಿನಯವನ್ನು ಹೊರಚಿಮ್ಮಿಸಿದ ಮಂದಿ ಅವಳಿಗೂ ಒಂದು ಬದುಕಿದೆ ಎಂದು ತಿಳಿಯಲೇ ಇಲ್ಲ. ಆಕೆ ಮನ:ಪೂರ್ವಕವಾಗಿ ಬಯಸಿದ್ದು ಒಂದು ಪುಟ್ಟ ಸಂಸಾರವನ್ನು. ಅಲ್ಲಿ ತಾನು, ತನ್ನನ್ನು ಅತ್ಯಂತ ಪ್ರೀತಿಸುವ ಗಂಡ, ಮಕ್ಕಳ ಪ್ರಪಂಚವನ್ನು. ಆಕೆ ಚಿತ್ರಾಕಾಶದಲ್ಲಿ ಮಿನುಗುತಾರೆಯಾಗಿದ್ದ ಕಾಲ 1973ರಲ್ಲಿ ತೆರೆಕಂಡ 'ಬಿಡುಗಡೆ' ಚಿತ್ರದಲ್ಲಿ ಆಕೆಯದು ಅತ್ಯಂತ ಚಿಕ್ಕ ಪಾತ್ರ. ಆಕೆಗಾಗಿಯೇ "ನನ್ನ ಪುಟ್ಟ ಸಂಸಾರ ಲೋಕದಿಂದ ಬಹು ದೂರ" ಎನ್ನುವ ಹಾಡು ಬರೆಸಿದ್ದರೇನೊ ಎನಿಸುತ್ತದೆ. ವೃತ್ತಿ ಮತ್ತು ವೈವಾಹಿಕ ಜೀವನ ಇವೆರಡನ್ನೂ ತೂಗಿಸಲು ಸಾಧ್ಯವಾಗದೆ ಹೋದದ್ದು ವಿಪರ್ಯಾಸ. ಕಲ್ಪನಾಳಾಂತಹ ಅತ್ಯುತ್ತಮ ನಟಿಯಿಂದ ಜನರಿಗೆ ಅಭಿನಯ ಮಾತ್ರವೇ ಬೇಕಿತ್ತೇ ಹೊರತು, ಆಕೆ ಸಂಸಾರಿಯಾಗಿ ಅಭಿನಯದಿಂದ ದೂರ ಸರಿಯುವುದು ಬೇಕಿರಲಿಲ್ಲ. ಶ್ರೀಕೃಷ್ಣ ಪರಮಾತ್ಮನನ್ನೂ ಕೂಡ ತಕ್ಕಡಿಯಲ್ಲಿ ಸಮವಾಗಿ ತೂಗಿ ಬಿಡಿಸಿಕೊಳ್ಳಲು ರುಕ್ಮಿಣಿಯ ಸಮರ್ಪಣಾಭಕ್ತಿ, ಪ್ರೀತಿಯ ಒಂದು ತುಲಸೀದಳ ಸಾಕಾಯಿತು, ಅಲ್ಲಿ ಸತ್ಯಭಾಮೆಯ ನಗ ನಾಣ್ಯಗಳು ನಗಣ್ಯವಾದವು. ಈ ಕೊರತೆಯಿಂದಲೇ ಅವಳ ವೈವಾಹಿಕ ಜೀವನ ಯಶಸ್ವಿಯಾಗಲಿಲ್ಲ. ಒಂದು ವೇಳೆ ಕಲ್ಪನಾ ಉಚ್ಛ್ರಾಯ ಸ್ಥಿತಿಯಲ್ಲಿರುವಾಗಲೇ ಅಭಿನಯವನ್ನು ತೊರೆದು ವೈವಾಹಿಕ ಜೀವನಕ್ಕೆ ಅಡಿ ಇಟ್ಟಿದ್ದಿದ್ದರೆ ಕೇವಲ 35 ವಸಂತಗಳನ್ನು ಮಾತ್ರ ಕಂಡು ಕಣ್ಮರೆಯಾಗುತ್ತಿರಲಿಲ್ಲವೇನೋ. ಅಸ್ಪಷ್ಟ ಭವಿಷ್ಯದ ಛಾಯೆ ಕಣ್ಣೆದುರಿಗಿರುವಾಗ ಆಕೆ ಮೊಂಡಿ, ಹಠಮಾರಿ, ಅಹಂಕಾರಿ ಆಗದೇ ಇರಲು ಸಾಧ್ಯವೇ? ಅವಳ ಜೀವನ ಪುಟದಲ್ಲಿ ಉಳಿಯುವಂತಹ ಹೆಸರು ಯಾರೂ ಬರೆಯಲಿಲ್ಲ.

ಒಂದು ಅನುಭವವನ್ನು ಹಂಚಿಕೊಂಡು ಲೇಖನವನ್ನು ಮುಗಿಸುತ್ತೇನೆ. ಬೆಳ್ಳಿಮೋಡ ಚಿತ್ರದ ಶೂಟಿಂಗ್ ನಡೆದದ್ದು ಚಿಕ್ಕಮಗಳೂರಿನ ಕಾಫಿ ಎಸ್ಟೇಟಿನಲ್ಲಿ. ಆಗ ನಾವು ಚಿಕ್ಕಮಗಳೂರಿನಲ್ಲಿ ನೆಲೆಸಿದ್ದೆವು. ಚಿತ್ರದ ನಿರ್ದೇಶಕ ಪುಟ್ಟಣ್ಣ ಕಣಗಾಲ್

ನನ್ನ ಅಜ್ಜಿಯ ದೂರದ ಸಂಬಂಧಿ. ಎಷ್ಟೇಟಿನಲ್ಲಿ ಕಲಾವಿದರನ್ನು ಉಳಿಸಿದ್ದರೂ, ತಿಳಿಸಾರು ಅನ್ನದ ಮನೆಯ ಊಟಕ್ಕಾಗಿ ನಮ್ಮ ಮನೆಗೆ ಬರುತ್ತಿದ್ದರಂತೆ. ಆಗ ನಾನು 3 ವರ್ಷದ ಬಾಲಕಿ. ಅದೇನು ಅಂತಹ ಸ್ವಾರಸ್ಯ ಊಟದಲ್ಲಿ ಎಂದು ಕಲ್ಪನಾ ಅವರೂ ಸಹ ಒಮ್ಮೆ ನಮ್ಮ ಮನೆಗೆ ಊಟಕ್ಕೆ ಬಂದಿದ್ದರಂತೆ. ಆಗ ಸೊಪ್ಪಿನ ಕಡಲೆ ಹೇರಳವಾಗಿ ಸಿಗುತ್ತಿದ್ದ ಕಾಲ. ನನ್ನ ಅಜ್ಜಿ ಆಕೆಗಾಗಿ ಬಿಡಿಸಿ ಬಿಡಿಸಿ ಕೊಡುತ್ತಿದ್ದರಂತೆ. ಶೂಟಿಂಗ್ ನೋಡಲು ಹೋದಾಗ "ಅಮ್ಮಾ ಎಲ್ಲಿ ನನ್ನ ಸೊಪ್ಪಿನ ಕಡಲೆ" ಎಂದು ಮುದ್ದು ಮುದ್ದಾಗಿ ಕೇಳುತ್ತಿದ್ದಳಂತೆ. "ನನಗೆ ಒಳ್ಳೆಯ ಜೀವನ ಸಿಗಲಿ ಅಂತಾ ಆಶೀರ್ವಾದ ಮಾಡಿ" ಎಂದು ನನ್ನ ಅಜ್ಜಿಯ ಕಾಲಿಗೆರಗಿದ್ದಳಂತೆ. ನಾನು ಆಕೆಯ ಅಭಿಮಾನಿ ಆಗುವ ವೇಳೆಗೆ ಆಕೆ ಇಹಲೋಕದ ಯಾತ್ರೆಯನ್ನು ಮುಗಿಸಿದ್ದಳು. ಆಕೆಯ ಬಗ್ಗೆ ಬರೆಯಲು ಸಾಕ್ಷಷ್ಟು ವಿಷಯಗಳಿವೆ. ಆದರೆ ಸಮಯಾಭಾವದಿಂದ ಇಲ್ಲಿ ನನ್ನ ವಾಣಿಗೆ ವಿರಾಮವನ್ನು ನೀಡುತ್ತಿದ್ದೇನೆ.

***

ಸೃಷ್ಟಿ ವೈಚಿತ್ರ್ಯ

– ಮಾಲತಿ ಶ್ರೀನಿವಾಸನ್

ಈ ಬೊಮ್ಮನಾಟವ ನೋಡು
ಜಗದ ನಾಟಕ ರಂಗದಿ, ಸುತ್ತೆಲ್ಲ
ಅಗಾಧ ಶರಧಿ, ಏನೆಲ್ಲ ತೆರೆದಿಟ್ಟಿಹನಿವ
ಅದ್ಭುತ ಜಾದುಗಾರನ ತೆರದಿ.
ಈ ಸೃಷ್ಟಿಯ ವೈವಿಧ್ಯತೆಗೆ ಎಲ್ಲುಂಟು
ಪರಿಧಿ.

ಸಜ್ಜಾಗಿಸಿಹನು ಬಣ್ಣಗಳಲಿ ಮೆರೆವ
ರಂಗಭೂಮಿ,
ಸಾರುತಿಹನು ಎಲ್ಲೆಡೆ ತನ್ನಿರವ ಈ
ಸೃಷ್ಟಿ ಸ್ಥಿತಿ, ಲಯಕಾರಕ, ಜಗನ್ನಿಯಂತ್ರಕ
ಮೂರು ಲೋಕದ ಸ್ವಾಮಿ.

ನೇಸರನ ಕಿರಣ ಸೋಂಕದ ಬೆಳಕು
ಕಾಣದ ಅರಿವು ಮೂಡದ ಮನದಂತೆ
ಕಗ್ಗತ್ತಲ ಖಂಡ, ಚಿತ್ರ ವಿಚಿತ್ರ ಪ್ರಾಣಿ
ಪಕ್ಷಿಗಳ ಬೀಡು ಪುಟ್ಟ ಬ್ರಹ್ಮಾಂಡ.

ಪರದೆ ಸರಿಸೆ ಸದಾ ಕಣ್ಣುಚ್ಚಲಾಗದ
ಹೊಳಪು ಥಳುಕು ನೇಸರನಿಗಿಲ್ಲ ಇಲ್ಲಿ
ಸುತ್ತಾಟದಲ್ಲಿ ಸ್ವಲ್ಪವೂ ಅಳುಕು.
ಅರಿವು ಮೂಡಿದ ಮನದೊಲು
ಸದಾ ಸ್ಫುರಿಸುವನು ಎಲ್ಲೆಡೆ
ಹೊಂಬಣ್ಣದ ನಿತ್ಯ ಬೆಳಕು.

ಇಲ್ಲೊಂದಡೆ ಶುದ್ಧ ಬಿಳಿ ಮಂಜಿನ
ಕೌದಿ ಹೊತ್ತ ವೀರಯೋಧರೊಲು
ಗಗನಚುಂಬಿಸುತ ನಿಂತಿಹ ಪರ್ವತ
ಶ್ರೇಣಿ, ಚುಮುಚುಮು ಚಳಿಯಲ್ಲಿ
ನೀರಿನ ಜುಳು ಜುಳು, ಯಾರು
ಹಾಕಿದರಿಲ್ಲಿ, ಭುವಿಯಿಂದ ಸಗ್ಗಕ್ಕೆ ಏಣಿ.

ಶುಷ್ಕತೆಯಲ್ಲಿ ನಿರ್ಜಲತೆಯ ಸಾರುತ್ತ
ಸಾಗುವಾ
ಮರುಭೂಮಿ ಮರಳರಾಶಿ,
ದೂರದಲಿ ಹರಿದ್ವರ್ಣದಲ್ಲಿ ನಳನಳಿ–
–ಸುತ ಆಗಸದೆಡೆ ತಲೆ ಚಾಚಿ ನಿಂತ
ಸಸ್ಯಕಾಶಿ

ಸೃಷ್ಟಿಯ ವೈ ಚಿತ್ರ ನೋಡಿಲ್ಲಿ
ಋತುಚಕ್ರದ ತಿರುಗಣಿಗೆ ಒಮ್ಮೆ
ಬೋಳಾಗಿ ಮತ್ತೆ ಸೋಲೊಪ್ಪದೆ
ಹಸಿರಲಿ ಚಿಗುರುವಾ ಪ್ರಕೃತಿ
ಹಾಕುತಿದೆ ಮಾನವನ ಇರುವಿಕೆಗೆ
ಸವಾಲು,

ತಣಿದಷ್ಟು ದಣಿದಷ್ಟು ಎದ್ದು ನಿಲ್ಲು
ನೀ ಮಾನವ, ಸಹಕರಿಸು ಕನಿಕರಿಸು
ನನ್ನ ನೋಡಿ ನೀ, ಆಗದಿರು
ದಾನವ.

***

ಅಮ್ಮನ ಪರಿಚಯ

– ಸಿಂಧು ಹರಿಥಸ್

ಮುಸ್ಸಂಜೆ ವೇಳೆ. ಒಂಟಿ ದೀಪ ಉರಿಯುತ್ತಿತ್ತು. ಸ್ವಾತಿ ಮೂಲೆಯಲ್ಲಿ ಕುಳಿತಿದ್ದಳು. ಅವಳ ಸುತ್ತ ಕುಳಿತಿದ್ದ ನೆಂಟರು, ಅವಳ ಕೈಹಿಡಿದು ಸಂತೈಸುತ್ತಿದ್ದರು. ಎಲ್ಲರ ಕಣ್ಣು ರೇಖಾರ ನಿರ್ಜೀವ ದೇಹದ ಕಡೆ ಇತ್ತು. ಒಳಗಿನ ಕೋಣೆಯಲ್ಲಿ ಸ್ವಾತಿಯ ತಂದೆ ಸುರೇಶ ಮೌನವಾಗಿ ಕುಳಿತಿದ್ದರು. ಬಂದ ನೆಂಟರಲ್ಲಿ ಕೆಲವರು ಕಣ್ಣೀರಿಟ್ಟರು, ಕೆಲವರು ಧೃತಿಗೆಟ್ಟವರ ನೆರವಿಗೆ ಕುಳಿತರು. ಸ್ವಾತಿಯ ಗಂಡ ಸ್ವರೂಪ್ ಮುಂದಿನ ಕಾರ್ಯಗಳ ಸಿದ್ಧತೆಯಲ್ಲಿ ತೊಡಗಿದ್ದ. ಮಗ ಆರ್ಯನ್ ಪಕ್ಕದ ಮನೆಯಲ್ಲಿರ ಬೇಕೇನೋ, ಅವನ ಸದ್ದಿರಲಿಲ್ಲ.

ರೇಖಾರದ್ದು ಮಹಾಲಕ್ಷ್ಮಿಯಂತೆ ಲಕ್ಷಣವಾದ ಮುಖ, ಸಾಧಾರಣ ಮೈಕಟ್ಟು. ಹಿತ ಮಿತ ಆಹಾರದೊಂದಿಗೆ, ಸ್ವಲ್ಪ ವ್ಯಾಯಾಮ. ಒಟ್ಟಾರೆ ಶಿಸ್ತುಬದ್ಧ ಜೀವನ ಶೈಲಿ ನಡೆಸಿಕೊಂಡು ಬಂದಿದ್ದರು. ಹೆಚ್ಚು ಮಾತಿಲ್ಲ, ತಮ್ಮಷ್ಟಕ್ಕೆ ತಾವಿರುವ ವ್ಯಕ್ತಿತ್ವ. ರೇಖಾ ಒಂದು ನಿಮಿಷವೂ ವ್ಯರ್ಥ ಮಾಡುತ್ತಿರಲಿಲ್ಲ. ಮನೆಯನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದರು. ಗೃಹಿಣಿಯಾಗಿ ಮನೆಯ ಎಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಳ್ಳುತ್ತಿದ್ದರು. ಮನೆಯ ಮುಂದೆ ದೊಡ್ಡ ಅಂಗಳವಿತ್ತು. ಅಂಗಳದ ತುಂಬಾ ಗಿಡಗಳನ್ನು ಬೆಳೆಸಿದ್ದರು. ಪೂಜೆಗೆ ಬೇಕಾಗುವಷ್ಟು ಹೂವಿನ ಗಿಡಗಳು, ಅಡುಗೆಗೆ ಬೇಕಾಗುವ ಮೆಣಸಿನಕಾಯಿ, ಬೆಂಡೆಕಾಯಿ, ಹುರುಳಿಕಾಯಿ, ಬದನೇಕಾಯಿ ಹೀಗೆ ಬೇಕಾದಷ್ಟು ತರಕಾರಿಯ ಗಿಡಗಳು ಇದ್ದವು, ಕೊತ್ತಂಬರಿ, ಕರಿಬೇವು, ಪುದಿನ ಅಂತ ಸೊಪ್ಪುಗಳನ್ನೂ ಬೆಳೆಸಿದ್ದರು. ಸ್ವಾತಿಗೆ ಸಪೋಟ ಹಣ್ಣೆಂದರೆ ಇಷ್ಟ. ಹಾಗಾಗಿ ಹಿತ್ತಲಿನಲ್ಲಿ ಎರಡು ಸಪೋಟ ಮರಗಳನ್ನೂ ಬೆಳೆಸಿದ್ದರು ರೇಖಾ.

ಅವರ ಗಂಡ ಸುರೇಶರದ್ದು ಎತ್ತರದ ಕಾಯ. ಎಲ್ಲರನ್ನೂ ಮಾತಿಗೆಳೆಯುವ ಮಾತುಗಾರ. ಮಾತೇ ಬಂಡವಾಳ ಅನ್ನುವ ಅಭಿಪ್ರಾಯ ಅವರದ್ದು. ಪಿತ್ರಾರ್ಜಿತವಾಗಿ ಬಂದಿದ್ದ ಜವಳಿ ಅಂಗಡಿಯ ಮಾಲೀಕರಾಗಿದ್ದರು. ವ್ಯಾಪಾರ ವ್ಯವಹಾರಗಳು ಚೆನ್ನಾಗಿಯೇ ನಡೆಯುತ್ತಿತ್ತು. ಸುರೇಶ ಮತ್ತು ರೇಖಾರ ಒಬ್ಬಳೇ ಮಗಳು ಸ್ವಾತಿ. ಅವಳು ರೂಪದಲ್ಲಿ ಅಮ್ಮ ಮತ್ತು ಗುಣದಲ್ಲಿ ಅಪ್ಪನನ್ನು ಹೋಲುತ್ತಿದ್ದಳು. ಅವಳು ಅಪ್ಪನ ಮುದ್ದಿನ ಮಗಳು, ಅವಳಿಗೂ ತಂದೆಯೇ ಸರ್ವಸ್ವ. ಅವಳು ಕೇಳಿದ್ದು, ಅವಳಪ್ಪ ನಡೆಸದ ಸಂಗತಿಯೇ ಕಡಿಮೆ. ಅಮ್ಮನ ಜೊತೆ ಬಾಂಧವ್ಯ ಮಿತವಾಗಿತ್ತು. ಅವಳ ಪ್ರಕಾರ ಅಮ್ಮನಿಗೆ ಪ್ರಪಂಚ ಜ್ಞಾನ ಇಲ್ಲ, ಮನೆಕೆಲಸಕ್ಕಷ್ಟೇ ಸೀಮಿತ. ಹೀಗಾಗಿ ಅಮ್ಮನನ್ನು ಕಡೆಗಣಿಸಿದ್ದೂ ಉಂಟು.

ಸ್ವಾತಿ ಚೆನ್ನಾಗಿ ಓದಿ, ಕಾಲೇಜೊಂದದರಲ್ಲಿ ಶಿಕ್ಷಕಿ ಆಗಿದ್ದಳು. ಅವಳ ಗಂಡ ಸ್ವರೂಪ್, ಎಂ.ಬಿ.ಎ ಮುಗಿಸಿ, ತನ್ನ ತಂದೆಯವರ ಟ್ರಾವೆಲ್ ಬಿಸಿನೆಸ್‌ಅನ್ನು ವಿಸ್ತರಿಸಿದ್ದ. ಟಾಲ್, ಡಾರ್ಕ್ ಅಂಡ್ ಹ್ಯಾಂಡ್ಸಮ್ ಅನ್ನುವ ಹಾಗಿದ್ದ. ಆರ್ಯನ್, ಅವರಿಬ್ಬರ ಮೂರು ವರ್ಷದ ಮಗ. ಶಿಶುವಿಹಾರಕ್ಕೆ ಹೋಗುತ್ತಿದ್ದ. ಕಲಿತ ಶಿಶುಗೀತೆಗಳನ್ನು ಮೂರು ಹೊತ್ತೂ ಒಂದೇ ಸಮ ವದರುತ್ತಿರುತ್ತಿದ್ದ. ತಿನ್ನುವಾಗ ಅಥವಾ ಮಲಗಿದ್ದಾಗ ಮಾತ್ರ ಬಾಯಿಗೆ ವಿರಾಮ ಕೊಡುತ್ತಿದ್ದ.

ರೇಖಾರ ಅಂತಿಮ ಸಂಸ್ಕಾರಗಳು ನಡೆದವು. ಬಂದವರೆಲ್ಲಾ ರೇಖಾರನ್ನು ಹೊಗಳಿದವರೇ. ಅವರ ಜೊತೆ ಕಳೆದ ಸವಿ ನೆನಪುಗಳನ್ನು ಹಂಚಿಕೊಂಡರು. ದಿನಗಳು ಕಳೆದಂತೆ ನೆಂಟರು ಒಬ್ಬೊಬ್ಬರಾಗಿ ಹೊರಟುಬಿಟ್ಟರು. ಸೂತಕದ ವಾತಾವರಣದಲ್ಲಿ ಆರ್ಯನ್ ಇರುವುದು ಬೇಡವೆಂದು ಅವನನ್ನು ಅವರಪ್ಪ ಕರೆದುಕೊಂಡು ಹೋಗಿದ್ದರು. ಕಡೆಗೆ ಮನೆಯಲ್ಲಿ ಸುರೇಶ ಮತ್ತು ಸ್ವಾತಿ ಇಬ್ಬರೇ ಉಳಿದಿದ್ದರು. ಅಂಗಡಿಗೆ ಹೋಗಿ ನಿತ್ಯಕ್ರಮವನ್ನು ಮತ್ತೆ ಆರಂಭಿಸಿದರೆ ಮನಸ್ಸು ಸಮಾಧಾನವಾಗಿರುತ್ತದೆ ಎಂದು ಸುರೇಶ್ ಮತ್ತೆ ಕೆಲಸಕ್ಕೆ ಹೋಗುವುದನ್ನು ಪ್ರಾರಂಭಿಸಿದ್ದರು. ಸ್ವಾತಿ ವರ್ಕ್ ಫ್ರಮ್ ಹೋಮ್ ಆಯ್ದುಕೊಂಡು ಅಪ್ಪನ ಮನೆಯಲ್ಲಿ ಇದ್ದಳು.

ಒಂದು ದಿನ ಮಧ್ಯಾಹ್ನ, "ನೋಡಮ್ಮ, ನಿನಗೆ ಬಿಡುವಾದಾಗ ನಿಮ್ಮಮ್ಮನ ವಸ್ತುಗಳನ್ನು ಪರಿಶೀಲಿಸಿ, ನಿನಗೆ ಬೇಡವಾಗಿದ್ದನ್ನ ವಿಲೇವಾರಿ ಮಾಡಿಬಿಡಮ್ಮ. ಅವುಗಳನ್ನು ನೋಡುತ್ತಿದ್ರೆ ಅವಳ ನೆನಪಾಗುತ್ತೆ. ಅವಳಿಲ್ಲದೆ ಒಬ್ಬನೇ ಬದುಕಬೇಕಾ ಅಂತ ಸಂಕಟ ಆಗುತ್ತೆ." ಎಂದು ಸುರೇಶ್ ಕೇಳಿಕೊಂಡರು. ಅಪ್ಪನ ಮಾತಿಗೆ ತಲೆಯಾಡಿಸಿದಳು ಸ್ವಾತಿ.

ಹೆಚ್ಚು ಕೆಲಸ ಇಲ್ಲದ ವೇಳೆಯಲ್ಲಿ ಅಮ್ಮನ ಕಪಾಟನ್ನು ತೆಗೆದಳು. ಆಡಂಬರ ಹಿಡಿಸದ ರೇಖಾರ ಕಾಪಾಟಿನಲ್ಲಿ ಮೂರ್ನಾಲ್ಕು ರೇಷ್ಮೆ ಸೀರೆಗಳು, ಐದಾರು ಕಾಟನ್ ಸೀರೆಗಳು ಮತ್ತು ಮನೆಯಲ್ಲಿ ತೊಡುತ್ತಿದ್ದ ಕೆಲವು ಚೂಡಿದಾರ್‌ಗಳು ಮಾತ್ರ ಇದ್ದವು. ಒಳಗಿನ ಲಾಕರ್ ತೆರೆದರೆ, ಕೇವಲ ಮನೆಯ ಪತ್ರಗಳು, ಅದು ಇದು ಅಂತ ಕಾಗದಗಳಿದ್ದವು. ಸ್ಥಿತಿವಂತರಾಗಿದ್ದರೂ, ರೇಖಾ ಸ್ವಾತಿಯ ಮದುವೆಯಲ್ಲಿ ತನ್ನ ಒಡವೆಗಳನ್ನೇ ಕರಗಿಸಿ, ಹೊಸ ಆಭರಣಗಳನ್ನು ಮಾಡಿಸಿ ಇಟ್ಟಿದ್ದರು. ರೇಖಾ ಸಾಯುವಾಗ ಮೈಮೇಲಿದ್ದ ಮಾಂಗಲ್ಯದ ಸರ, ಪದ್ಮದೋಲೆ ಮತ್ತು ಒಂದು ಜೋಡಿ ಬಳೆಗಳನ್ನು ಬಿಟ್ಟರೆ ಮನೆಯಲ್ಲಿ ಇನ್ನಾವ ಒಡವೆಯೂ ಇರಲಿಲ್ಲ. ಬೆಳ್ಳಿಯ ಪೂಜೆ ಸಾಮಾನುಗಳನ್ನು ನಿತ್ಯ ಪೂಜೆಯಲ್ಲಿ ಬಳಸುತ್ತಿದ್ದರಿಂದ ಅದೂ ಅಲ್ಲಿ ಇರಲಿಲ್ಲ. ಅಮ್ಮನ ರೇಷ್ಮೆ ಸೀರೆಗಳನ್ನು ಬಿಟ್ಟು ಇನ್ನೆಲ್ಲವೂ ಕೆಲಸದವರ ಪಾಲಾಯಿತು. ಅಪ್ಪನ ಬಳಿ, "ನೀವು ಹೇಳಿದ ಹಾಗೆ ಅಮ್ಮನ ಕಪಾಟನ್ನು ಖಾಲಿ ಮಾಡಿದೆ. ಎಷ್ಟ್ ಕಡಿಮೆ ಬಟ್ಟೆ ಇಟ್ಟುಕೊಂಡಿದ್ರಪ್ಪ ಅಮ್ಮ. ಜವಳಿ ಅಂಗಡಿ ಒಡತಿಯ ಕಪಾಟು ಅನ್ನಿಸಲೇ ಇಲ್ಲ. ಎಂತಹ ನೀರಸ ಜೀವನ ನಡೆಸಿದರಪ್ಪ ಅವರು!" ಆಶ್ಚರ್ಯದಿಂದ ಹೇಳಿದಳು ಸ್ವಾತಿ. ಅವಳ ಮಾತಿಗೆ ಸುರೇಶ ನಕ್ಕು ಸುಮ್ಮನಾದರು.

ಅಮ್ಮನ ಕಪಾಟು ಖಾಲಿಯಾದ ಮೇಲೆ ಮನೆಯನ್ನು ಸ್ವಚ್ಛಗೊಳಿಸಲು ಸ್ವಾತಿ ಮುಂದಾದಳು. ಏಣಿ ಹತ್ತಿ ಅಟ್ಟವನ್ನು ಗುಡಿಸುತ್ತಿದ್ದಾಗ ಸ್ವಾತಿ ಕಣ್ಣಿಗೆ ಒಂದು ಪೆಟ್ಟಿಗೆ ಬಿತ್ತು. ಅದು ಅಮ್ಮನ ಪೆಟ್ಟಿಗೆ. ಸ್ವಾತಿ ಚಿಕ್ಕವಳಿದ್ದಾಗ ಅದರಲ್ಲೇನಿದೆಯೋ ಎಂಬ ಕುತೂಹಲ ಬಹಳ ಇತ್ತು. ಅಮ್ಮ ಎಂದಿಗೂ ಅದನ್ನು ತೆರೆಯಲು ಬಿಡುತ್ತಿರಲಿಲ್ಲ. ಈಗ ಅದರ ಮೇಲೆ ಹೆಚ್ಚು ಆಸಕ್ತಿ ಇರಲಿಲ್ಲ. ಆದರೂ ಒಮ್ಮೆ ತೆಗೆದು ನೋಡೋಣವೆಂದು ಒಳಮನಸ್ಸು ಪ್ರೇರೇಪಿಸಿತು. ಕೆಳಗಿಳಿಸುವಾಗ ಸಪ್ಪಳವಾಯಿತು. "ಏನಮ್ಮ ಅದು ಶಬ್ದ, ಬಿದ್ಯಾ?" ಎಂದು ಆಚೆ ಕೋಣೆಯಿಂದ ಅಪ್ಪನ ಕಾಳಜಿಯ ಪ್ರಶ್ನೆ ಬಂತು. ಹಿಂದೆಯೇ ಅವರೂ ಓಡಿ ಬಂದರು. "ಏನಿಲ್ಲಪ್ಪ. ಮೇಲೆ ಧೂಳು ಕೊಡವುತ್ತಿದ್ದಾಗ ಈ ಪೆಟ್ಟಿಗೆ ಕಣ್ಣಿಗೆ ಬಿತ್ತು. ಏನಿದೆ ಅಂತ ನೋಡೋಕೆ ಇಳಿಸಿದೆ, ಅಷ್ಟೇ. ಹಳೆ ಕಬ್ಬಿಣದ ಪೆಟ್ಟಿಗೆ ಅಲ್ವಾ ತುಂಬಾ ಶಬ್ದ ಮಾಡ್ತು." "ಅದ್ಯಾಕೆ ಮುಟ್ಟಿ ಆ ಪೆಟ್ಟಿಗೆ ತೆಗಿಯೋಕೆ ಹೋದೆ. ನಿಮ್ಮಮ್ಮ ಮದುವೆಯಾದಾಗ ತಂದ ಪೆಟ್ಟಿಗೆ ಅದು. ಖಾಲಿ ಇದೆ ಅನ್ನಿಸುತ್ತೆ. ಅದನ್ನ ಹಾಗೇ ತೂಕದವನಿಗೆ ಹಾಕಿ ಬಿಡೋಣ ಅಂತಿದ್ದೆ" ಎಂದರು. "ಅಮ್ಮ ಇದನ್ನ ಮುಟ್ಟಕ್ಕೂ ಬಿಡ್ತಿರ್ಲಿಲ್ಲ. ಅಂಥದ್ದು ಏನಿದೆ ಇದ್ರಲ್ಲಿ ಅಂತ ತಿಳಿಯೋ ಆಸೆ" ಎಂದಳು. "ನಿನ್ನಿಷ್ಟ. ಆದರೆ ಹುಷಾರಾಗಿರು." ಎಂದು ಸುರೇಶ್ ಕೆಲಸಕ್ಕೆ ಹೊರಟುಹೋದರು.

ರಾತ್ರಿ ಅಂಗಡಿ ಮುಚ್ಚಿ ಮನೆಗೆ ಸುರೇಶ ಬಂದರು. ಮನೆಯಲ್ಲಿ ಬೆಳಕಿರಲಿಲ್ಲ. ಒಂದು ಕೋಣೆಯಲ್ಲಿ ಮಾತ್ರ ದೀಪ ಉರಿಯುತ್ತಿತ್ತು. ಒಳಗಡೆ ನಡೆದರು ಸುರೇಶ್. ಕೋಣೆಯಲ್ಲಿ ಸ್ವಾತಿ ಕುಳಿತಿದ್ದಳು. ಸುರೇಶ್ ಎರಡು ಮೂರು ಬಾರಿ ಕೂಗಿದ ಮೇಲೆ ತಲೆ ಎತ್ತಿದಳು. ಒಣಗಿದ್ದ ಕಣ್ಣೀರಿನ ಗುರುತು ಅವಳ ಕೆನ್ನೆಯ ಮೇಲಿತ್ತು. ಕಣ್ಣುಗಳು ಊದಿದ್ದವು. ಅವಳ ಕೈಯಲ್ಲಿ ಒಂದು ಮುಚ್ಚಿದ್ದ ಡೈರಿ ಇತ್ತು. ನೆಲದ ಮೇಲೆ ರೇಖಾರ ಭಾವಚಿತ್ರ ಬಿದ್ದಿತ್ತು. ಆ ಚಿತ್ರದಲ್ಲಿ ರೇಖಾ ಸ್ವಾತಿಯ ಹಾಗೆ ಕಾಣುತ್ತಿದ್ದರು. "ಅಮ್ಮನ ನೆನಪಾಯಿತಾ? ಅಳಬೇಡ. ನಿಮ್ಮಮ್ಮ ಅಪಘಾತದ ನಂತರ ಬಹಳ ನೋವಲ್ಲಿದ್ದಳು. ಅದನ್ನು ಅನುಭವಿಸುವ ಬದಲು, ಹೋಗಿದ್ದೇ ಮೇಲು ಅಂದುಕೋ'' ಎಂದು ಸಂತೈಸಿದರು.

ಒಂದು ವರ್ಷದ ಹಿಂದೆ, ಅಂಗಡಿಯಲ್ಲಿದ್ದ ಗಂಡನಿಗೆ ಊಟ ಕೊಟ್ಟು ಬರುತ್ತಿರುವಾಗ ವೇಗವಾಗಿ ಬರುತ್ತಿದ್ದ ಗಾಡಿಯೊಂದು ರೇಖಾರನ್ನು ಗುದ್ದಿಬಿಟ್ಟಿತ್ತು. ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ರೇಖಾರ ತಲೆ ತಗುಲಿ ಮೂರ್ಛೆ ತಪ್ಪಿದ್ದರು. ಎಚ್ಚರವಾದಾಗ ಮೆದುಳು ಕೆಲಸ ಮಾಡುತ್ತಿತ್ತು ಆದರೆ ಕೈಕಾಲುಗಳು ನಿಷ್ಕ್ರಿಯಗೊಂಡಿದ್ದವು. ಮೂರ್ನಾಲ್ಕು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಬಂದಿದ್ದರು. ಕೈಕಾಲುಗಳಲ್ಲಿ ಶಕ್ತಿ ಮತ್ತೆ ಬರಲೇ ಇಲ್ಲ. ಮಲಗಿದ್ದಲ್ಲಿಯೇ ಸಕಲವೂ ಆಗಬೇಕಿತ್ತು. ರೇಖಾರ

ಸೇವೆಗಾಗಿ ಒಬ್ಬ ಮಹಿಳೆಯನ್ನು ಇಟ್ಟುಕೊಂಡಿದ್ದರು. ಹದಿಮೂರು ತಿಂಗಳ ಕಾಲ ಹೀಗೆಯೇ ಕಳೆದು, ಕಡೆಗೆ ಕಣ್ಣು ಮುಚ್ಚಿಕೊಂಡರು. ಹೋಗುವ ಹೊತ್ತಿಗೆ ಮೂಳೆಗಳ ಮೇಲೊಂದು ಚರ್ಮದ ಪದರ ಹೊದ್ದಿಸಿದಂತೆ ಕಾಣುತ್ತಿತ್ತು ಅವರ ದೇಹ.

ಇತ್ತ ಸ್ವಾತಿ, ಅಮ್ಮನ ಕಾಲೇಜಿನ ಪ್ರಮಾಣ ಪತ್ರಗಳನ್ನು ನೋಡಿದಳು. ಅಮ್ಮ ಪದವೀಧರೆ ಆಗಿದ್ದರು. ಯಾವುದೋ ಸಂಸ್ಥೆಯಲ್ಲಿ ಅಮ್ಮನಿಗೆ ಕೆಲಸ ಸಿಕ್ಕಿದ್ದ ನೇಮಕಾತಿ ಪಾತ್ರವೂ ಸಹ ಅಲ್ಲಿತ್ತು. ಅಮ್ಮನ ವಿದ್ಯಾಭ್ಯಾಸದ ಬಗ್ಗೆ ತಿಳಿಯದ ಸ್ವಾತಿಗೆ ಇದೆಲ್ಲಾ ಗೋಜಲಾಗಿ ಕಂಡಿತು. ಕೈಯಲ್ಲಿದ್ದ ಅಮ್ಮನ ಡೈರಿಯ ಒಂದು ಪುಟವನ್ನು ಓದಿದಳು. "ನನಗೆ ಮಗಳಂತೆ. ಅವಳನ್ನು ನೋಡಿದ ಮೇಲೆ ಎರಡು ದಿನಗಳ ಹೆರಿಗೆ ನೋವು ಮರೆತುಹೋದಂತಾಗಿದೆ. ಕೆಂಪಗೆ, ಮುದ್ದಾಗಿದ್ದಾಳೆ 'ನನ್ನ ಮಗಳು'. ಮಗಳು ಪದ ಕೇಳಕ್ಕೆಷ್ಟು ಚೆನ್ನ ಅಲ್ವಾ?" ಎಂದು ಬರೆದಿತ್ತು. ಸ್ವಾತಿಗೆ ಭೂಮಿಯ ಮೇಲೆ ತನ್ನ ಮೊದಲ ದಿನದ ಬಗ್ಗೆ ಓದಿ ಖುಷಿಯಾಯಿತು. ಇನ್ನೂ ಕೆಲವು ಹಾಳೆಗಳನ್ನು ಬಿಟ್ಟು ಓದಿದಳು. "ಪುಟ್ಟಿಗೆ ಮೂರು ತಿಂಗಳು ತುಂಬಿದವು. ಅವರು ಇನ್ನೂ ಬಂದಿಲ್ಲ. ಮೂರು ಪತ್ರ ಕಳಿಸಿದ್ದೇನೆ. ಉತ್ತರವಿಲ್ಲ. ಅಪ್ಪನ ಮನೆಯಲ್ಲಿ ಹಣಕಾಸಿನ ಮುಗ್ಗಟ್ಟು. ಇಲ್ಲಿರಲಾರೆ. ದಿಕ್ಕೇ ತೋಚುತ್ತಿಲ್ಲ." ಎಂದು ಬರೆದಿತ್ತು. ಇದನ್ನು ಓದಿದ ಸ್ವಾತಿಗೆ ತಳಮಳ ಹೆಚ್ಚಾಯಿತು. ಯಾರು ಬಂದಿರದ ಬಗ್ಗೆ ಹೇಳಿದ್ದಾಳೆ ಅಮ್ಮ ಎಂದು ಗೊಂದಲವಾಯಿತು.

ಇನ್ನೊಂದೆರಡು ಪುಟಗಳ ನಂತರ ಹೀಗಿತ್ತು. "ಅವರಿಗೆ ಹೆಣ್ಣು ಮಗಳು ಬೇಡವಂತೆ. ಅವಳನ್ನು ಅನಾಥಾಶ್ರಮದಲ್ಲಿ ಬಿಟ್ಟು ಬರುವುದಾದರೆ ನನ್ನನ್ನು ಕರೆದುಕೊಂಡು ಹೋಗುತ್ತಾರಂತೆ. ಅತ್ತೆ ಮಾವನವರನ್ನು ಬೇಡಿಕೊಂಡೆ. ಅವರದ್ದೂ ಇದೇ ನಿಲುವು. ಮಗುವನ್ನು ಬಿಟ್ಟು ಬರದಿದ್ದರೆ, ಬೇರೆ ಮದುವೆಯಾಗುತ್ತಾರಂತೆ. ಅದ್ಯಾವ ನ್ಯಾಯ? ತಾನು ಹೆಣ್ಣಾಗ್ಬೇಕು ಅಂತ ಸ್ವಾತಿ ಆಸೆ ಪಟ್ಟಿದ್ದಳೇ? ಹೆಣ್ಣೋ, ಗಂಡೋ ಮಗು ನಮ್ಮದೇ ತಾನೇ".

ಸ್ವಾತಿಗೆ ತಾನು ಅಪ್ಪನಿಗೆ ಬೇಡವಾಗಿದ್ದ ಮಗು ಎಂದು ನಂಬಲಾಗಲಿಲ್ಲ. 'ಅಜ್ಜಿಯೂ ನನ್ನನ್ನು ಅಷ್ಟು ಪ್ರೀತಿಸುತ್ತಿದ್ದರಲ್ಲ. ತಾತನ ನೆನಪೇ ಇಲ್ಲ, ಬುದ್ಧಿ ತಿಳಿಯುವ ಮುನ್ನವೇ ತೀರಿಕೊಂಡಿದ್ದರು.' ಎಂದು ಒಳಗೇ ತರ್ಕಿಸಲು ಆರಂಭಿಸಿದಳು.

ಮುಂದೊಂದು ಪುಟ ಓದಿದಳು. "ಗೊಂದಲವಾಗುತ್ತಿದೆ. ಅವರಿಗೆ ಮಗು ಬೇಡವೆಂದು ಅವರಿಂದ ದೂರವಾದರೆ, ಸ್ವಾತಿ ತಂದೆಯ ಪ್ರೀತಿಯನ್ನೇ ಅನುಭವಿಸುವುದಿಲ್ಲ. ಹೇಗೋ ಮಾಡಿ ಅವರ ಮನೆಗೆ ಹೋದರೆ, ಒಂದು ವೇಳೆ ಅವರು ಮಗುವಿಗೆ ಹಾನಿ ಮಾಡಿದರೆ? ಅವಳನ್ನು ಕಾಪಾಡುವುದೇ ನನ್ನ ಧ್ಯೇಯ."

ಇನ್ನೂ ಕೆಲವು ಪುಟಗಳ ನಂತರ, "ಒಂದೇ ಮನೆಯಲ್ಲಿ ಎರಡು ಗುಂಪುಗಳಾಗಿ ಬಿಟ್ಟಿವೆ. ಅವರೆಲ್ಲರೂ ಮಾತಾಡುತ್ತಿರುತ್ತಾರೆ. ನಾನು ಹೋದರೆ ಮಾತು ನಿಲ್ಲಿಸಿ, ಜಾಗ ಖಾಲಿ ಮಾಡಿಬಿಡುತ್ತಾರೆ. ಮಗು ಅಳುತ್ತಿದ್ದರೂ ನೋಡುವುದಿಲ್ಲ. ಒಂಟಿಯಾಗಿ ಹೋಗಿದ್ದೇನೆ. ಅವರು ನಿರಾಕರಿಸಿದರೂ ನಾನು ಬಂಡತನದಲ್ಲಿ ಬಂದಿದ್ದು ಸರಿಯೋ, ತಪ್ಪೋ?" ಎಂದಿತ್ತು.

ಓದುತ್ತಾ ಓದುತ್ತಾ ಸ್ವಾತಿಯ ಕಣ್ಣಲ್ಲಿ ಹನಿಗಳು ನಿಲ್ಲಲೇ ಇಲ್ಲ. ನೋಟ ಮಂಜಾಗತೊಡಗಿತ್ತು. ಕಣ್ಣು ಒರೆಸಿಕೊಂಡು ಮುಂದೆ ಓದಿದಳು. "ಸ್ವಾತಿಗೀಗ ಎರಡುವರೆ ವರ್ಷ. ವಾತಾವರಣ ತಿಳಿಯಾಗುತ್ತಿದೆ. ಇವರಿಗೆ ಸ್ವಾತಿಯ ಗೀಳು ಹಿಡಿದುಬಿಟ್ಟಿದೆ. ಅಂಗಡಿಯಿಂದ ಬಂದ ತಕ್ಷಣ ಮಗಳನ್ನು ಮುದ್ದಿಸುತ್ತಾರೆ. ನನ್ನ ನಡೆ ಸರಿಯಾಗಿತ್ತು ಅಂತ ಖಚಿತವಾಗ್ತಿದೆ. ಅತ್ತೆ ಮಾವನವರಿಗೆ ಇನ್ನೂ ಅವಳ ಮೇಲೆ ಪ್ರೀತಿ ಹುಟ್ಟಿಲ್ಲ, ಆದರೆ ಅವಳು ಹತ್ತಿರ ಬಂದರೆ, ದೂರ ತಳ್ಳುವುದನ್ನು ನಿಲ್ಲಿಸಿದ್ದಾರೆ. ದಿನಕ್ರಮೇಣ ಅವರಿಗೂ ಮನಃ ಪರಿವರ್ತನೆಯಾಗಿತ್ತದೆ ಅನ್ನೋ ಭರವಸೆ ಇದೆ." ಸ್ವಾತಿಗೆ ಸ್ವಲ್ಪ ಸಮಾಧಾನವಾಯಿತು.

ಡೈರಿಯ ಕೊನೆಯ ಪುಟವನ್ನು ತೆರೆದಳು. "ನೆನ್ನೆ ಸ್ವಾತಿಯ ಅಕ್ಷರಾಭ್ಯಾಸದ ಶಾಸ್ತ್ರ ಮುಗಿಯಿತು. ಕಡೆಗೂ ಎಲ್ಲರ ಕಣ್ಣಿನ ಕಣ್ಮಣಿಯಾಗಿದ್ದಾಳೆ ನನ್ನ ಪುಟ್ಟಿ. ಅವಳನ್ನು ನಿರಾಕರಿಸಿದವರು ಇವರೇನಾ ಎಂದು ನಂಬಲಾರದಷ್ಟು ಬದಲಾವಣೆ ಬಂದಿದೆ. ಅವಳನ್ನು ಒಪ್ಪಿರುವ ಸಂತೋಷದಿಂದ ಮತ್ತೆ ನನ್ನ, ಅವರ ಮಧ್ಯೆ ಎಲ್ಲವೂ ಚೆನ್ನಾಗಿದೆ. ನಾನೀಗ ಎರಡು ತಿಂಗಳ ಬಸುರಿ, ಇನ್ನೂ ಯಾರಿಗೂ ತಿಳಿಸಿಲ್ಲ. ಏನಾದರು ಹುಟ್ಟೋ ಮಗು ಗಂಡಾದರೆ, ಸ್ವಾತಿಯನ್ನು ಮತ್ತೆ ನಿಕೃಷ್ಟವಾಗಿ ಕಾಣುತ್ತಾರೋ ಅನ್ನುವ ಆತಂಕ ಶುರುವಾಗಿದೆ. ಹಾಗೇನಾದರೂ ಆದರೆ ಇಷ್ಟು ವರ್ಷದ ಪರಿಶ್ರಮ ನೀರಲ್ಲಿ ಹೋಮ ಮಾಡಿದ ಹಾಗಾಗುತ್ತದೆ. ಏನು ಮಾಡುವುದೋ ತಿಳಿಯದು!"

ಪುಸ್ತಕ ಮುಚ್ಚಿಟ್ಟರೂ ಸ್ವಾತಿಯ ಕಣ್ಣುಗಳಲ್ಲಿ ನೀರು ನಿಲ್ಲುತ್ತಲೇ ಇರಲಿಲ್ಲ. ತನ್ನ ತಾಯಿಯನ್ನು ತಾನು ಅರಿಯಲೇ ಇಲ್ಲ. ಅಮ್ಮ ಯಾವಾಗಲೂ ಅವಳ ಪಾಲಿಗೆ ನಿಂತಿದ್ದಳು. ಆದರೆ ಅಮ್ಮ ಹಾಸಿಗೆ ಹಿಡಿದಿದ್ದಾಗಲೂ ನೋಡಿಕೊಂಡು ಹೋಗುತ್ತಿದ್ದಳೇ ಹೊರತು ವೈಯಕ್ತಿಕವಾಗಿ ಅಮ್ಮನ ಆರೈಕೆ ಮಾಡಲೇ ಇಲ್ಲ. ಅಮ್ಮನ ಪಕ್ಕದಲ್ಲಿ ಕುಳಿತು ಒಂದೆರಡು ಒಳ್ಳೆ ಮಾತನ್ನೂ ಆಡಲಿಲ್ಲ. ತನ್ನ ಅಮ್ಮನ ನಿಜವಾದ ಪರಿಚಯ ಅವಳಿಗೆ ಈಗ ಆಗಿತ್ತು.

ಎಷ್ಟು ಹೊತ್ತಾದರೂ ಸ್ವಾತಿ ಊಟಕ್ಕೆ ಬಾರದಿದ್ದಕ್ಕೆ ಸುರೇಶ್ ಅವಳನ್ನು ಕರೆಯಲು ಕೋಣೆಗೆ ಹೋದರು. ಸ್ವಾತಿಯ ಒಂದು ಕೈಯಲ್ಲಿ ಅಮ್ಮನ ಭಾವಚಿತ್ರ, ಇನ್ನೊಂದು ಕೈಯಲ್ಲಿ ಮಗಳನ್ನು ಅನಾಥಾಶ್ರಮದಲ್ಲಿ ಬಿಟ್ಟುಬಿಡುವುದಾಗಿ ಸುರೇಶ್ ಬರೆದಿದ್ದ ಪತ್ರವಿತ್ತು.

***

ಸಿರಿಯ ಹೂಮಾಲೆ

– ಬೆಂ.ಶ್ರೀ. ರವೀಂದ್ರ

ಆಸೇತು ಹಿಮಾಚಲ ಪರ್ಯಂತ
ನಿಂತಿಹನೆದ್ದು ರಾಷ್ಟ್ರಪುರುಷ
ಕೋಮು ನುಡಿ ವರ್ಗ ಜಾತಿಗಳ
ತೊಡೆದು ಬೆಳೆದಿದ್ದಾನೆ ದಿಗ್ದಿಗಂತ

ನಾನು ನೀನಲ್ಲ ಅವನು ಅವಳಲ್ಲ
ಸ್ತ್ರೀ ಪುರುಷರೆಲ್ಲರೊಂದಾಗಿ
ದೇಶದ ಏಕತೆಯೇ ಮುಂದಾಗಿ
ವಿರಾಟರೂಪ ತಳೆದು ಮಿಗಿಲಾಗಿ

ಮುಖಮರಸಿ ಕ್ರೌರ್ಯ ಮೆರೆವ
ಅಮಾಯಕರ ರಕ್ತ ಕುಡಿವ
ಶತ್ರುವಿಗೆ ಕಲಿಸಬೇಕಿದೆ
ಮರೆಯಲಾಗದ ಪಾಠ

ಬಲಿಹಾಕಲು ಹುತಾತ್ಮರಾಗಲು
ಸಿದ್ಧ ನಮ್ಮ ವೀರಯೋಧರು
ನಮ್ಮ ತುತ್ತಿನಲಿಹುದು ಋಣ
ಯೋಧ ನಿನ್ನಿದು ರೈತ ನಿನ್ನದು

ತೊಂದರೆ ಉಂಟು ನೂರೆಂಟು
ಕೂಡಿ ಬಿಡಿಸೋಣ ಕಗ್ಗಂಟು
ಕಿವಿಕೊಡೋಣ ದೇಶದ ಕರೆಗೆ
ಜನಮನ ನಾವೆಲ್ಲ ಒಂದೇ ಒಂದು

ನೋಡದಿರು ಹಿಂದೆಮುಂದೆ
ನಡೆ ನಡುಗದೆ ಗುರಿಯೊಂದೆ
ತೊಡಿಸೋಣ ಭಾರತ ಮಾತೆಗೆ
ಗೆಲುವಿನ ಸಿರಿಯ ಹೂಮಾಲೆ.

***

ಅಮರನ ಆಂಬೊಡೆ ಪುರಾಣ

– ಸ್ನೇಹ ಶಶಿಧರ

ಅಮರನಾಥ ನಮ್ಮ ಕತೆಯ ನಾಯಕ, ತಿಂಡಿಪೋತ. ಅದರಲ್ಲೂ ಎಣ್ಣೆಯಲ್ಲಿ ಕರಿದ ಕುರುಕಲು ತಿಂಡಿ ಎಂದರೆ ಪಂಚಪ್ರಾಣ. ಚಿಕ್ಕ ಹುಡುಗನಾಗಿದ್ದಾಗ ಗಣೇಶ ಹಬ್ಬಕ್ಕೆಂದು ತಾಯಿ ಅಂಬುಜಾಕ್ಷಿ ಮಾಡುತ್ತಿದ್ದ ಬಿಸಿ ಕರಿಗಡಬು, ತಾಯಿಯ ಕಣ್ತಪ್ಪಿಸಿ, ಲಬಕ್ಕನೆ ಬಾಯಿಗಿಟ್ಟ. ಕಡಬು ಬಿಸಿಯಿದ್ದ ಕಾರಣ ಬಾಯಿ ಸುಟ್ಟುಹೋಯಿತು. ಕಿಟಾರ್ರನೆ ಕಿರುಚಿದ. ತಾಯಿಯೂ ಬೆಚ್ಚಿದಳು. ಮಗುವಿಗೆ ಬಾಯಿ ಸುಟ್ಟಿದೆ ಅನ್ನುವ ಗಾಬರಿಗಿಂತ ದೇವರಿಗೆ ಮಾಡಿದ ತಿಂಡಿ ಎಂಜಲುಯಾಯಿತಲ್ಲ ಎಂಬ ದುಗುಡ ಹೆತ್ತವರಲ್ಲಿ. ದೇವರಿಗೆ ತಪ್ಪೊಪ್ಪಿಗೆ ಸೂಚಿಸಿ, ಹಬ್ಬ ಮಾಡಿ ಮುಗಿಸಿದರು. ಮೂರ್ನಾಲ್ಕು ದಿನವಾದರೂ ಅಮರನ ಸುಟ್ಟಬಾಯಿ ಸರಿ ಹೋಗಲೇ ಇಲ್ಲ. ಅಂಜನೇಯನ ಹಾಗೆ ತುಟಿಗಳು, ಕೆನ್ನೆ ಎಲ್ಲವೂ ಊದಿಬಿಟ್ಟಿತ್ತು. ತಾಯಿ ಅಂಬುಜಾಕ್ಷಿ, ಆಂಜನೇಯನಲ್ಲಿ ಹರಕೆ ಹೊತ್ತುಕೊಂಡರು "ವಡೆ ಹಾರ ಮಾಡಿಸುವೆ. ನನ್ನ ಮಗನನ್ನು ಸರಿ ಮಾಡಿಬಿಡು". ಆಗ ಮಾಡಿಸಿದ್ದ ವಡೆ ಉರುಫ್ ಆಂಬೊಡೆಗಳ ಹಾರ ದೇವರ ಕೊರಳು ಸೇರಿತು. ಅಮರನ ಕಣ್ಣು ಆ ಆಂಬೊಡೆ ಮೇಲೆ ಇತ್ತು. ದೇವರ ಪೂಜೆಯ ನಂತರ, ಸಂಜೆ ಹಾರ ವಾಪಸ್ ಮನೆ ತಲುಪಿತು. ಶಾಸ್ತ್ರಕ್ಕೆ ಅಪ್ಪ ಅಮ್ಮನಿಗೆ ಒಂದೊಂದು ಆಂಬೊಡೆ ಕೊಟ್ಟು, ಅಷ್ಟೂ ಆಂಬೊಡೆಗಳನ್ನು ಹೋಗುತ್ತಾ ಬರುತ್ತಾ ಅಮರನೇ ತಿಂದು ಖಾಲಿ ಮಾಡಿದ. ಆಂಜನೇಯನ ಮೂತಿ ಸರಿ ಹೊಯಿತಲ್ಲ ಎಂದು ಹೆತ್ತವರ ಆತಂಕವೂ ಕಡಿಮೆಯಾಯಿತು.

ತಿಂಡಿಪೋತನಾಗಿ ಬೆಳೆದು ನಿಂತ ಅಮರನಾಥನಿಗೆ ಮದುವೆಯಾಯಿತು. ಪತ್ನಿ ಅಂಜಲಿ ಡಯಟೀಶಿಯನ್. ಆ ದೇವರು ಹೀಗೆ ವಿಪರೀತ ಸ್ವಭಾವದವರನ್ನೇ ಗಂಟು ಮಾಡುವುದು. ಆದರೂ ಒಳ್ಳೆ ಹುಡುಗಿ, ನೋಡಲು ಸುಂದರವಾಗಿದ್ದಾಳೆ. ತಿನ್ನುವ ವಿಷಯ ಬಿಟ್ಟು ಇನ್ನೆಲ್ಲದರಲ್ಲೂ ಸಾಮರಸ್ಯದಿಂದ ಸಂಸಾರ ತೂಗಿಸಿಕೊಂಡು ಹೋಗುತ್ತಿದ್ದರು. ಒಂದೆರಡು ವರ್ಷದಲ್ಲಿ ಅಂಜಲಿ ಗರ್ಭವತಿಯಾದಳು.

ಅಷ್ಟರಹೊತ್ತಿಗೆ ನಮ್ಮ ಅಮರನಾಥನ ಹೊಟ್ಟೆಯು ಮಡದಿಗೆ ಪೈಪೋಟಿ ಕೊಡುವಂತಿತ್ತು. ಸೀಮಂತದ ಕಾರ್ಯಕ್ರಮದಲ್ಲಿ ಇಬ್ಬರದೂ ಒಂದೇ ರೀತಿ ಕಾಣುವ ಹೊಟ್ಟೆಯನ್ನು ನೋಡಿ ಬಂದವರೆಲ್ಲ ರೇಗಿಸಿದ್ದರು. "ಅಂಜಲಿಯ ಹೊಟ್ಟೆ ಪ್ರಸವದ ನಂತರ ಇಳಿದುಬಿಡುತ್ತದೆ, ನಿಂಗೆ ಇಳಿಯೋದಿಲ್ಲ" ಅಂತ ಹಾಸ್ಯ ಮಾಡಿದರು. ಮಗನಿಗೆ ದೃಷ್ಟಿ ಆಗುತ್ತೇಂತ ಅಂಬುಜಮ್ಮ ಸಂಜೆ ಸೊಸೆಯ ಜೊತೆ ಅವನಿಗೂ ಪೊರಕೆ ಹಿಡಿದು ಆರತಿ ಬೆಳಗಿ, ಥೂ ಥೂ ಥೂ ಎಂದಿದ್ದರು. ಅಂಜಲಿಗೆ ತಂದಿದ್ದ ತಿಂಡಿಗಳಲ್ಲಿ ಅಮರನಿಗೆ ಸಿಂಹಪಾಲು ಎಂದು ಹೇಳಬೇಕಿಲ್ಲ ತಾನೆ.

ಅಮರನಾಥ ಅಂಜಲಿ ದಂಪತಿಗೆ ಒಂದು ಗಂಡು ಮಗುವಾಯಿತು. ತಂದೆಯಂತೆಯೇ ಗುಂಡುಗುಂಡಗೆ ಮುದ್ದಾಗಿತ್ತು ಮಗು. ದಿನಗಳು ಉರುಳಿದವು. ಮಗುವಿಗೆ ಚೌಲ, ಅಕ್ಷರಾಭ್ಯಾಸ ಮಾಡಿಸಿದರು. ಶುಭ ಸಮಾರಂಭ, ಹಬ್ಬ ಹುಣ್ಣಿಮೆ, ಏನೇ ಆದರೂ ಮನೆಯಲ್ಲಿ ಸಿಹಿ ಜೊತೆಗೆ ಏನಾದರೂ ಕರಿದ ತಿಂಡಿ ಇರಲೇಬೇಕು.

ಸಂಪ್ರದಾಯಸ್ತರ ಮನೆ, ಉದ್ದಿನ ವಡೆ ಮಾಡೋಲ್ಲ ಅಂತ ಮನೆಯಲ್ಲಿ ತಿಂಡಿ ಇಡ್ಲಿ ಅಂದಾಗಲೆಲ್ಲ ಹೊಟೇಲಿಂದ ಉದ್ದಿನ ವಡೆ ಕಟ್ಟಿಸಿಕೊಂಡು ಬರುತ್ತಿದ್ದ. ಬರೀ ಇಡ್ಲಿ ಚಟ್ನಿ ಗಂಟಲಲ್ಲಿ ಇಳಿಯುತ್ತಿರಲೇ ಇಲ್ಲ.

ಮಗುವಿಗೆ ಇನ್ನೇನು ಶಾಲೆಗೆ ಸೇರಿಸಬೇಕು. ಮನೆಯಲ್ಲಿ ಮೊದಲು ಪಾಠ ಶುರು ಮಾಡೋಣ ಅಂತ ಇಬ್ಬರೂ ಒಂದೊಂದು ದಿನ ಏನಾದರೂ ಹೇಳಿಕೊಡುತ್ತಿದ್ದರು. ನಮ್ಮ ಅಮರನಾಥನ ಪಾಠ ಹೀಗಿತ್ತು' "A ಫಾರ್ ಆಂಬೊಡೆ, B ಫಾರ್ ಬೋಂಡ, C ಫಾರ್ ಚಕ್ಕುಲಿ...". ಮಗು ಅಪ್ಪನ ಪಾಠಕ್ಕೆ ನಗುನಗುತ್ತಾ ಅನುಕರಿಸುತ್ತಿತ್ತು. ಇದನ್ನು ಕೇಳಿದ ಅಂಜಲಿ ಮೂರ್ಛೆ

ಹೋಗುವುದೊಂದು ಬಾಕಿ. "ನಿಮ್ಮ ಹಾಗೆ ನನ್ನ ಮಗನನ್ನು ತಿಂಡಿಪೋತ ಮಾಡಿಬಿಡುತ್ತೀರಿ. ಇನ್ಮೇಲೆ ನೀವ ಪಾಠ ಮಾಡಿದ್ದು ಸಾಕು." ಅಂಜಲಿ ಮಾತಿಗೆ ಮಗು ಅಪ್ಪನ ಹಿಂದೆ ಅವಿತುಕೊಂಡಿತು.

ಜೀವನವೆಲ್ಲ ಅಚ್ಚುಕಟ್ಟಾಗಿ ತಿಂದುಕೊಂಡಿದ್ದ ಅಮರನಿಗೆ ಒಮ್ಮೆ ಹೊಟ್ಟೆ ನೋವು ಬಂದಿತು. ಪ್ರಾಣ ಹೋಗುವಷ್ಟು ನೋವು. ಸೋಡಾ, ಜೀರಿಗೆ ಕಷಾಯ ಏನು ಕುಡಿದರೂ ಸಮಾಧಾನವಾಗುತ್ತಿರಲಿಲ್ಲ. ಲಂಘನಮ್ ಪರಮೌಷಧಮ್ ಎಂದು ಜೀವನದಲ್ಲೇ ಮೊದಲಬಾರಿ ಒಂದು ಹೊತ್ತು ಉಪವಾಸ ಮಾಡಿದ. ಊಹೂ ಏನು ಪ್ರಯೋಜನವಾಗಲಿಲ್ಲ. ಒಲ್ಲದ ಮನಸ್ಸಿನಿಂದ ಡಾಕ್ಟರ ಬಳಿ ಹೋಗಿಯೇಬಿಟ್ಟರು. ಅದು ಇದು ಚೆಕ್ಕಪ್ ಮಾಡಿದ ವೈದ್ಯರು "ಸಣ್ಣ ಕರುಳಿನ ಇನ್ಫೆಕ್ಷನ್" ಎಂದು ಹೇಳಿದರು. ಮಾತ್ರೆ, ಔಷಧಿಗಳ ಜೊತೆ ಕಟ್ಟುನಿಟ್ಟಿನ ಪಥ್ಯ ಬರೆದುಕೊಟ್ಟರು. ಪಟ್ಟಿಯನ್ನು ನೋಡಿ ಅಮರನಾಥ ಮುಖ ಕಿವುಚಿಕೊಂಡ.

ಮನೆಗೆ ಬಂದಮೇಲೆ ಮೊದಲೇ ಡಯಟೀಶಿಯನ್ ಆಗಿದ್ದ ಅಂಜಲಿ ಹಾರಾಡಲು ಶುರುಮಾಡಿದಳು. "ಇನ್ನ್ಮೇಲೆ ನಾನ್ ಹೇಳಿದ್ಹಾಗೆ ಕೇಳ್ಬೇಕು. ಹಾಳು ಮೂಳು ಎಲ್ಲ ತಿನ್ನಕೂಡದು." ಚೇಷ್ಟೆ ಮಾಡುತ್ತಿದ್ದ ನಾಯಿಮರಿ ಸಿಕ್ಕುಬಿದ್ದಾಗ ಮಾಡುವ ಥರ ಮುಖ ಮುದುಡಿ ಮಲಗಿದ ಅಮರನಾಥ. ಔಷಧಿ ಕಾರಣವೋ, ಪಥ್ಯವೋ ಗೊತ್ತಿಲ್ಲ, ಎರಡೇ ದಿನದಲ್ಲಿ ಹೊಟ್ಟೆ ನೋವು ಕಡಿಮೆಯಾಯಿತು. ಅಮರನಾಥ ಹೆಂಡತಿಯನ್ನು ರಮಿಸುತ್ತಾ, "ಅಂಜು, ನಾನ್ ರೆಡೀ! ಹೊಟ್ಟೆ ನೋವು ಮಾಯ! ಇವತ್ತು ಏನ್ ಮಾಡ್ತ್ಯಾ?" "ಮಾಮೂಲಿ ಅನ್ನ ಬೇಳೆಕಟ್ಟು ತಿನ್ನಿ. ಇನ್ಫೆಕ್ಷನ್ ಸರಿಯಾಗೋಕೆ ಇನ್ನು ಒಂದು ವಾರನಾದರೂ ಬೇಕು. ಡಾಕ್ಟರ್ ಹೇಳಿಲ್ವಾ, ಹಗುರವಾದ ಪದಾರ್ಥ ತಿನ್ನಬೇಕು ಅಂತ" ಗದರಿದಳು. "ಹಗುರನೇ ಅಂಜು. ನೀನು ಡಯಟೀಶಿಯನ್. ನೀನು ನೀರು ಕುಡಿಯೋದು ಸರಿ ಅಂತ್ಯ ತಾನೆ?" "ಹೌದು" "ಹಾ, ಇಲ್ಲಿ ಕೇಳು. ನೀರಿಗಿಂತ ಹಗುರ?? ಎಣ್ಣೆ! ಎಣ್ಣೆ ನೀರಿನ ಮೇಲೆ ತೇಲುತ್ತೆ ಅಲ್ವಾ, ಇನ್ನು ಎಣ್ಣೆಗಿಂತ ಹಗುರ, ಅಂದರೆ ಎಣ್ಣೆಯಲ್ಲಿ ತೇಲುವ ಬಜ್ಜಿಗಳು, ಬೋಂಡಗಳು ಎಲ್ಲ ಅತ್ಯಂತ ಹಗುರವಾದ ಪದಾರ್ಥ", ಎಂದ. ವಿಚಾರ ಹಾಸ್ಯಭರಿತವಾಗಿದ್ದರು ಅಂಜಲಿಗೆ ಕೋಪ ಬಂದು ಗಂಡನನ್ನು ದುರುಗುಟ್ಟಿ ನೋಡಿದಳು.

ವರ್ಕ್‌ಔಟ್ ಆಗಲಿಲ್ಲ, ಇನ್ನು ಹೆಚ್ಚು ಮಾತಾಡಿದರೆ ಬಾಣ ತಿರುಗಿ ಬರುವುದೆಂದು ಗಮನಿಸಿ, ಸುಮ್ಮನಾದ.

ಹಾಗೂ ಹೀಗೂ ಒಂದು ವಾರ ಕಳೆಯಿತು. ಮಾತ್ರೆ ಡೋಸೇಜ್ ಮುಗೀತು. ಅಮರನಾಥ ಒಂದು ವಾರ ಪಥ್ಯ ಮಾಡಿ ಸಪ್ಪೆಯಾಗಿಬಿಟ್ಟಿದ್ದ. ಮಾರನೆಯ ದಿನ ಯುಗಾದಿ ಹಬ್ಬ. ಹಬ್ಬದೂಟ ಮಾಡಬಹುದೆಂದು ಊಹಿಸಿಯೇ ಬಾಯಲ್ಲಿ ನೀರು ಸುರಿಸುತ್ತಿದ್ದ. ಗಡಿಬಿಡಿಯಲ್ಲಿ ಹಬ್ಬದ ತಯಾರಿಯಲ್ಲಿ ತೊಡಗಿದ್ದ ಮಡದಿಯ ಸೆರಗು ಹಿಡಿದು ಹಿಂದೆ ಮುಂದೆ ಓಡಾಡುತ್ತಿದ್ದ. "ಅಂಜು, ನಾಳೆ ಏನೇನ್ ಮಾಡ್ತ್ಯ?" "ಈ ಸಲಿ ಹೆಚ್ಚಾಗಿ ಏನು ಮಾಡೋದೂ ಬೇಡ ಅಂದ್ಕೊಂಡಿದ್ದೀನಿ. ಶಾಸ್ತ್ರಕ್ಕೆ ಮಾವಿನಕಾಯಿ ಚಿತ್ರಾನ್ನ, ಹೋಳಿಗೆ ಸಾಕು. ನೀವು ಬರೀ ಹೂರಣದ ಸಾರು. ಅನ್ನ ತಿನ್ನಿ. ಮಾವಿನಕಾಯಿಯ ಹುಳಿ ನಿಮಗೆ ಹೊಂದುವುದಿಲ್ಲ. ಈಗ ಚೇತರಿಸಿಕೊಳ್ಳುತ್ತಿದ್ದೀರಾ" ಎಂದಳು. ಸಮಯ ನೋಡಿ ಪುನಃ, "ಅಂಜು, ನಾಳೆ ಏನೇನ್ ಮಾಡ್ತ್ಯ?" ಪತಿಯ ಆವೇದನೆಗೆ ಕರಗಿದಳು ಅಂಜು. ಪಾಪ ತಿಂಡಿಪೋತ ಗಂಡ ಒಂದು ವಾರ ಬಾಯಿಕಟ್ಟಿದನಲ್ಲ. ಯುಗಾದಿ ವರ್ಷಾವಧಿ ಹಬ್ಬ. "ಆಯಿತು. ಹಬ್ಬದೂಟನೇ ಮಾಡ್ತೀನಿ. ನಾಳೆ ನಿಮಗೆ ಖುಷಿಯಾಗಿ ತಿನ್ನಲು ನನ್ನ ಅನುಮತಿ ಇದೆ", ಎಂದಳು.

ಬೆಳಿಗ್ಗೆಯಿಂದ ಅತಿ ಉತ್ಸಾಹದಿಂದ ಎದ್ದು ಬಾಗಿಲಿಗೆ ತೋರಣ ಕಟ್ಟಿ, ದೇವರ ಪೂಜೆ ಮುಗಿಸಿದ. ಅಂಜಲಿ ಅಡುಗೆ ಮನೆಯಲ್ಲಿ ಬಿಜಿಯಾಗಿದ್ದಳು. ಇವನಿಗೆ ಕೈಲಾದಷ್ಟು ಸಹಾಯ ಮಾಡುತ್ತಿದ್ದ. ಒಂದೊಂದೇ ವ್ಯಂಜನಗಳು ಸಿದ್ಧವಾಗುತ್ತಿತ್ತು. ಒಂದು ಗಂಟೆಗೆ ಇನ್ನು ಹತ್ತು ನಿಮಿಷ ಇರುವಾಗ ಅಂಜಲಿ ಉಸ್ಸೆಂದು ಫ್ಯಾನ್ ಕೆಳಗೆ ಬಂದು ಕೂತಳು. "ಇದೇನು ಕೂತುಬಿಟ್ಟೆ? ಆಂಬೊಡೆ ಮಾಡಲ್ವಾ?" ಎಂದ ಅಮರನಾಥ. "ಕೆಲ್ಸ ಜಾಸ್ತಿ ಆಗಿ ನಂಗೆ ತುಂಬಾ ಸುಸ್ತಾಗಿದೆ. ಇವತ್ತಿಗೆ ಸಾಕು.

ನಿಮಗೂ ಆರೋಗ್ಯ ಸರಿ ಇಲ್ವಲ್ಲ, ಪಲ್ಯ, ಕೋಸಂಬರಿ, ಗೊಜ್ಜು, ಚಿತ್ರಾನ್ನ, ಪಾಯಸ, ಸಾರು, ಹುಳಿ, ಹೋಳಿಗೆ ಎಲ್ಲವೂ ಆಗಿದೆ. ಸಾಕು ಬಿಡೀಪ್ಪಾ''. ''ನೋ ನೋ ನೋ ನೋ ... ಅದ್ಹೇಗೆ ಸಾಧ್ಯ'' ಗುಡುಗಿದ ಅಮರನಾಥ. ''ನಿಂಗಾಗ್ಲಿಲ್ಲ ಅಂದ್ರೆ ನಾನೇ ಮಾಡ್ತೀನಿ'', ಎಂದ. ''ಸರಿ ಮಾಡ್ಕೊಳ್ಳಿ. ನನ್ನ ಕರಿಬೇಡಿ'', ಎಂದು ಹೇಳಿ ದೂರದರ್ಶನದ ರಿಮೋಟ್ ಒತ್ತಿದಳು.

''ಅಂಜು, ಈರುಳ್ಳಿ ಎಲ್ಲಿ?'' ''ರೀ ಹಬ್ಬದ ದಿನ ಯಾರು ಈರುಳ್ಳಿ ಮಾಡ್ತಾರೆ?'' ''ಓಹ್, ಹೌದಲ್ವಾ, ಸರಿ ಸಬ್ಬಸಿಗೆ ಸೊಪ್ಪು ಹಾಕಿ ಆಂಬೊಡೆ ಮಾಡ್ತೀನಿ'' ''ರೀ, ಬೇಳೆ ನೆನೆಯೋಕೆ ಸಮಯ ಕೊಡಬೇಕು. ಈಗ್ಲೆ ಗಡಿಬಿಡಿ ಮಾಡಬೇಡಿ'', ಕೂತಲ್ಲೇ ಗಂಡನಿಗೆ ಸೂಚನೆಗಳನ್ನು ಹೇಳುತ್ತಿದ್ದಳು. ಆ ಸಾಮಾನು ಎಲ್ಲಿ, ಇದೆಲ್ಲಿ, ಅದೆಲ್ಲಿ ಅಂತ ಅವನ ಪ್ರಶ್ನೆಗಳ ಸುರಿಮಳೆ ಸುರಿಯುತ್ತಲೇ ಇತ್ತು. ಹಾಗೆಯೇ ಪಾತ್ರೆಯ ಸದ್ದು ಜೋರಾಗಿ ದಡಬಡ ಅಂತ ಕೇಳುತ್ತಿತ್ತು. ಏನಾದರೂ ನಾ ಏಳಲಾರೆ ಅಂತ ಸುಮ್ಮನೆ ದೂರದರ್ಶನದಲ್ಲಿ ಹಾಡು ಕೇಳುತ್ತಾ ಕುಳಿತಿದ್ದಳು. ಅಷ್ಟರಲ್ಲಿ ಸುಟ್ಟು ವಾಸನೆ ಮೂಗು ಬಡಿಯಿತು. ಹಬ್ಬದ ದಿನ ಏನೋ ಅವಾಂತರ ಮಾಡುತ್ತಾರೆ ಅಂತ ಒಲ್ಲದ ಮನಸ್ಸಿನಿಂದ ಎದ್ದು ಅಡುಗೆಮನೆಯತ್ತ ಓಡಿದಳು.

''ಅಯ್ಯೋ'', ಅವಳ ಕಾಲಿಗೆ ಈಳಿಗೆಮಣೆ ಸೋಕಿ, ದೊಡ್ಡ ಅನಾಹುತ ತಪ್ಪಿ ಸಣ್ಣ ಗಾಯದೊಂದಿಗೆ ನಿಂತಿತು. ''ಈ ಕಡೆ ಬಿಜಿಯಾಗ್ಬಿಟ್ಟೆ. ಈಳಿಗೆ ತೆಗೆದಿಡುವುದು ಮರೆತ್ಬಿಟ್ಟೆ. ಹೋಗ್ಲಿ ಬಿಡು. ದೊಡ್ಡದಾಗಿ ಏನು ಆಗಿಲ್ಲ'', ಎಂದನು ಅರಿಶಿನ ಹಚ್ಚುತ್ತಾ. ''ಹೋಗ್ಲಿ, ಈಗ ಒಲೆ ಆರಿಸಿ. ನಿಮ್ಮ ಆಂಬೊಡೆ ಸೀದ್ಹೋಗ್ತಿದೆ''. ''ಇಲ್ಲ, ನನ್ನ ಹತ್ರ ಒಂದು ಉಪಾಯ ಇದೆ. ನೋಡು ಎಣ್ಣೆ ತುಂಬಾ ಕಾದಾಗ, ಸಲ್ಪ ನೀರು ಎರಚಿಬಿಡು, ತಣ್ಣಗಾಗತ್ತೆ''. ಚುಸ್ಸ್ ಸದ್ದಿನ ಜೊತೆಗೆ ಗೋಡೆಯ ಮೇಲೆಲ್ಲಾ ಎಣ್ಣೆ ಎರಚಿದ್ದು ಅಂಜಲಿಗೆ ಕಂಡಿತು. ಒಂದೊಂದಾಗಿ ಆಂಬೊಡೆ ಕರಿದಿದ್ದನ್ನು ನಿರುಮ್ಮಳಾಗಿ ನಿಂತು ನೋಡಿದಳು. ಎಣ್ಣೆಯೆಲ್ಲ ಕಟ್ಟೆಯ ಮೇಲೆ ಚೆಲ್ಲುತ್ತಿತ್ತು. ಬೇಳೆ ರುಬ್ಬಿದ್ದ ಮಿಕ್ಸಿ ಪಾತ್ರೆ ನೀರು ಕಾಣದೆ ಸಿಂಕಿನಲ್ಲಿ ಒಣಗುತ್ತಿತ್ತು. 'ಇವರಿಗೆ ಹೇಳೋದು ಬಿಟ್ಟು ನಾನೇ ಮಾಡಿದ್ದಿದ್ದರೆ ಚೆನ್ನಾಗಿರುತ್ತಿತ್ತು' ಎಂದುಕೊಂಡಳು.

ಎಲ್ಲ ಆಂಬೊಡೆ ಕರಿಯುವುದರೊಳಗೆ ಮನೆ ಮಂದಿಯೆಲ್ಲಾ ಬಂದು, ಎಲೆ ಹಾಕಲು ಪ್ರಾರಂಭಿಸಿದರು. ಎಲ್ಲರೂ ಒಟ್ಟಿಗೆ ಕೂತು ಊಟ ಮಾಡಿದರು. ಆಂಬೊಡೆ ರುಚಿಯಾಗಿತ್ತು. ಎಷ್ಟೋ ದಿನದ ಬಳಿಕ ತಿಂದಿದ್ದಕ್ಕೋ, ನಾನೇ ಮಾಡಿದ್ದು ಎಂಬ ಹೆಮ್ಮೆಯಿಂದಲೋ, ಅಮರನಾಥನ ಮೊಗದಲ್ಲಿ ಮಂದಹಾಸ ಮೂಡಿತು. ಕಾಲು ನೋವು, ಆಯಾಸ ಎಲ್ಲವು ಇದ್ದರೂ ಗಂಡನ ಮುಖದಲ್ಲಿ ನಗು ಕಂಡ ಅಂಜಲಿಗೆ ತೃಪ್ತಿಯಾಯಿತು.

***

ಕಾಂತಾಸಮ್ಮಿತ

–ಗಣಪತಿ ಹೆಗಡೆ

ವೇದವನ್ನು ಜ್ಞಾನಸಮುದ್ರ ಅಂತ ಕರೆಯುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. 'ವಿದ್' (ತಿಳುವಳಿಕೆ, ಜ್ಞಾನ)ಎನ್ನುವ ಧಾತುವಿನಿಂದ ವ್ಯುತ್ಪನ್ನ ಶಬ್ದ 'ವೇದ'. ವೇದ ಭಾಷೆಯ ಕಾರಣದಿಂದಲೂ, ಗಡುಚಾದ ಸೂಕ್ಷ್ಮಾರ್ಥದ ಕಾರಣಕ್ಕಾಗಿಯೂ ಪಾಮರರ 'ಕೈಗೆಟಕುವಂತಹದ್ದಲ್ಲ'. ಉಪನಿಷತ್ತು ವೇದದ ಮುಂದಿನ ಭಾಗ ಅಥವಾ ವೇದಾಂತ. ಇದೂ ಸಾಮಾನ್ಯ ಜನರಿಗೆ ಅರ್ಥವಾಗುವಂತಹದ್ದಲ್ಲ. ವೇದೋಪನಿಷತ್ತುಗಳ ವಿಷಯವು ಜನಸಾಮಾನ್ಯರಿಗೆ ತಿಳಿಯುವಂತಾಗಲು ಪುರಾಣ ಹುಟ್ಟಿಕೊಂಡಿತು ಎನ್ನುವುದುಂಟು. ಮಹಾಭಾರತವನ್ನು 'ಪಂಚಮವೇದ' ಅಂತಲೇ ಕರೆಯುತ್ತಾರೆ.

ಪ್ರಪಂಚದ ಜನರು ಶಾಂತಿ ನೆಮ್ಮದಿಯಿಂದ ಬದುಕನ್ನು ಸಾಗಿಸಲು ಈ ಪುರಾಣದಲ್ಲಿ ಬರುವ ಕತೆ–ಉಪಕತೆಗಳು ಸಹಾಯಕಾರಿ. ತಪ್ಪನ್ನು ಮಾಡಿದಲ್ಲಿ ಕೆಟ್ಟದ್ದಾಗುತ್ತದೆ ಹಾಗೂ ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವುದು ಪುರಾಣಗಳ ತಾತ್ಪರ್ಯ. ಇದೊಂದು ಉಪದೇಶಾತ್ಮಕವಾದ ನಿರೂಪಣೆ. ('ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ', ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ' ಇಂಥವುಗಳು ಒಳಿತು–ಕೆಡುಕುಗಳನ್ನು ಜನರಿಗೆ ತಿಳಿಸುವ ಅಂಶಗಳು).

ಆದರೆ ಜನರು ಸ್ವಾರ್ಥಿಗಳಾಗಿರುವುದು ಸಹಜ. ಅಂಥವರು ಪುರಾಣಗಳಲ್ಲಿರುವ ಹಿತವಾಕ್ಯಗಳನ್ನು ಗ್ರಹಿಸಿ ಸಮಾಜದ ಒಳಿತು ಕೆಡಕುಗಳ ಕಡೆ ಲಕ್ಷ್ಯ ವಹಿಸುವದಿಲ್ಲ. ಅಂತವರಿಗಾಗಿಯೇ ವಿಶೇಷವಾದ ನಿಯಮವನ್ನು, ಶಾಸ್ತ್ರ ಅಥವಾ ಕಾಯಿದೆಯ ರೂಪದಲ್ಲಿ ಮಾಡುವುದು ಸರಕಾರದ ಅಥವಾ ಆಳರಸರ ಕರ್ತವ್ಯ. ಆಡಳಿತಕ್ಕೆ ಒಳಪಟ್ಟ ಎಲ್ಲರೂ ಈ ನಿಯಮಗಳಿಗೆ ಒಳಪಡಬೇಕಾದುದು ಅತ್ಯವಶ್ಯ ಹಾಗೂ ಅನಿವಾರ್ಯ. ಒತ್ತಾಯದಿಂದಲಾದರೂ ಜನರು ಒಳಿತು ಕೆಡಕುಗಳ ಕಡೆಗೆ ಗಮನಹರಿಸಲೇಬೇಕು. ಇದು ಒಳ್ಳೆಯ ಜನರಿಗೆ ಉಪದೇಶವಾದರೆ ಕೆಟ್ಟವರಿಗೆ ನಿಯಂತ್ರಣವಾಗಿರುತ್ತದೆ. ಇಲ್ಲಿ ಆಯ್ಕೆಗೆ ಅವಕಾಶವೇ ಇಲ್ಲ.

ಉಪದೇಶಗಳು ಮುಖ್ಯವಾಗಿ ಮೂರು ರೀತಿಯವು. ಅವುಗಳನ್ನು ಪ್ರಭುಸಮ್ಮಿತ, ಮಿತ್ರಸಮ್ಮಿತ ಮತ್ತು ಕಾಂತಾಸಮ್ಮಿತ ಅಂತ ವಿಂಗಡಿಸಬಹುದು. ಈ ಮೂರೂ ಉಪದೇಶಗಳ ಮುಖ್ಯ ಗುರಿ ಮನುಷ್ಯನಿಗೆ ಕರ್ತವ್ಯ ಮತ್ತು ಅಕರ್ತವ್ಯಗಳ ಪರಿಜ್ಞಾನ ಮಾಡಿಕೊಡುವುದು ಮತ್ತು ಮಾಡಲೇಬೇಕಾದ ಕಾರ್ಯಗಳ ಬಗ್ಗೆ ಒತ್ತುಕೊಡುವುದು ಹಾಗೂ ಪರಿಣಾಮದಲ್ಲಿ ಸ್ವಸ್ಥ ಸಮಾಜದ ನಿರ್ಮಾಣ ಮಾಡುವುದು.

ರಾಜಾಜ್ಞೆಗಳು, ನಮ್ಮ ಸಂವಿಧಾನದಲ್ಲಿಯ ಲಿಖಿತ ವಿಧಿನಿಯಮಗಳು, ವೇದ ಶಾಸ್ತ್ರಗಳ ಉಪದೇಶಗಳು ಶಬ್ದಪ್ರಧಾನವಾಗಿದ್ದು ಪ್ರಭುಸಮ್ಮಿತ ಎನಿಸಿಕೊಳ್ಳುತ್ತವೆ. ಈ ಉಪದೇಶಗಳನ್ನು ಕೇಳಲೇಬೇಕಾದುದು ಪ್ರಜೆಗಳ ಕರ್ತವ್ಯ. ಇಲ್ಲಿ ಆಯ್ಕೆಗೆ ಅವಕಾಶ ಇಲ್ಲವೇ ಇಲ್ಲ. ತಪ್ಪಿದಲ್ಲಿ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಹೀಗೆ ಅಧಿಕಾರವಾಣಿಯಿಂದ ಹೇಳಲ್ಪಟ್ಟ ಇವುಗಳ ಪಾಲನೆ ಮಾಡಬೇಕಾದುದು ಅನಿವಾರ್ಯವೆನಿಸುತ್ತದೆ.

ಇತಿಹಾಸ, ಪುರಾಣ, ಶರಣರ–ಸಂತರ ವಚನಗಳಲ್ಲಿರುವ ಮಾತುಗಳು ಅರ್ಥಪ್ರಧಾನವಾಗಿದ್ದು, ಅವುಗಳನ್ನು ಅನುಸರಿಸುವುದು ಅಪೇಕ್ಷಣೀಯವೆನಿಸುತ್ತದೆ. ಇಂಥ ಉಪದೇಶಪರ ಮಾತುಗಳು ಮಿತ್ರಸಮ್ಮಿತವೆನಿಸುತ್ತವೆ. ಇವು ಒಬ್ಬ ಮಿತ್ರ ಇನ್ನೊಬ್ಬ ಮಿತ್ರನಿಗೆ ಯೋಗ್ಯ ಕಾರ್ಯಗಳನ್ನು ಮಾಡುವ ಮತ್ತು ಅಯೋಗ್ಯ ಕಾರ್ಯಗಳನ್ನು ತ್ಯಜಿಸುವ ಉಪದೇಶಪರ ಮಾತುಗಳು. ಹೀಗೆ ಉಪದೇಶ ನೀಡುವಲ್ಲಿ ಯಾವುದೇ ಆಜ್ಞೆ ಆದೇಶಗಳಿಲ್ಲ. ಕೇಳಿದವರು ತಿಳುವಳಿಕೆಯುಳ್ಳವರಾದಲ್ಲಿ ಒಪ್ಪಿಕೊಳ್ಳಬಹುದು. ಆದರೆ

ಕಿವಿಯಲ್ಲಿ ಹಾದು ಹೋಗುವ ಇಂತಹ ಉಪದೇಶಗಳು ಇನ್ನೊಂದು ಕಿವಿಯಿಂದ ಹಾರಿ ಹೋಗುವುದೇ ಹೆಚ್ಚು. ಇಂತಹ ಉಪದೇಶಗಳು ಓದುಗರ ಅಥವಾ ಕೇಳುಗರ ಮನಸ್ಸು ಹಾಗೂ ಹೃದಯವನ್ನು ಹೊಕ್ಕು ಪರಿಣಾಮ ಬೀರುವುದಿಲ್ಲ.

ಆದರೆ ಶಾಸ್ತ್ರ ಹಾಗೂ ಪುರಾಣಗಳಿಗಿಂತ ರಸಾತ್ಮಕವಾಗಿ ಅರ್ಥ ಸ್ಫುರಿಸುವ ಸಾಹಿತ್ಯ ನೇರವಾಗಿ ಓದುಗನ ಹೃದಯವನ್ನೇ ಬಡಿಯುತ್ತದೆ.

ಸಾಹಿತ್ಯದ ಕುರಿತಾಗಿನ ಕೆಳಗಿನ ಅಭಿಪ್ರಾಯಗಳನ್ನು ಅವಲೋಕಿಸೋಣ.

'ಯಶಸೇಽರ್ಥಕೃತೆ ವ್ಯವಹಾರವಿದೆ ಶಿವೇತರಕ್ಷತಯೆ।
ಸದ್ಯಃ ಪರನಿವೃತಯೆ ಕಾಂತಾಸಮ್ಮಿತತಯೋಪದೇಶಯುಜೆ'॥
(ಯಶಸ್ಸಿನ ಸಂಪಾದನೆ, ಅರ್ಥಸಂಪಾದನೆ, ವ್ಯವಹಾರಜ್ಞಾನ, ಅನಿಷ್ಟ ನಿವಾರಣೆ, ಆನಂದಾನುಭೂತಿ, ಕಾಂತಾಸಮ್ಮಿತದಂತೆ ಉಪದೇಶ ಈ ಪ್ರಯೋಜನಗಳು) – (ಮಮ್ಮಟನ ಕಾವ್ಯಪ್ರಕಾಶ)

ಹಾಗೂ

'ಕಾವ್ಯಂ ಆನಂದಾಯ ಯಶಸೇ ಕಾಂತಾತುಲ್ಯತಯಾ ಉಪದೇಶಾಯ'
(ಕಾವ್ಯವು ಆನಂದಕ್ಕಾಗಿ, ಯಶಸ್ಸಿಗಾಗಿ, ಹೆಂಡತಿಯ ಉಪದೇಶದ ಹಾಗೆ) – (ಹೇಮಚಂದ್ರ–ಕಾವ್ಯಾನುಶಾಸನ)

ಈ ಹೇಳಿಕೆಗಳು, ಕಾವ್ಯ ಹೇಗೆ ಓದುಗನ ಮನಸ್ಸು ಹಾಗೂ ಹೃದಯವನ್ನು ತಟ್ಟುತ್ತದೆ, ಅಂತ ತಿಳಿಸುತ್ತವೆ.

ಕಾವ್ಯಗಳಲ್ಲಿರುವ ಉಪದೇಶಾತ್ಮಕ ಮಾತುಗಳು ರಸಪ್ರಧಾನವಾಗಿದ್ದು ಕಾಂತಾಸಮ್ಮಿತ ಉಪದೇಶವೆಂದು ಕವಿಗಳಿಂದ ಪರಿಗಣಿಸಲ್ಪಟ್ಟಿವೆ. ಯಾವುದೇ ಕಾರ್ಯದಲ್ಲಿ ತನ್ನ ಪುರುಷನನ್ನು ಪ್ರವೃತ್ತಗೊಳಿಸುವ ಮತ್ತು ಯಾವುದೇ ಕಾರ್ಯದಿಂದ ನಿವೃತ್ತಗೊಳಿಸುವ ಸಂದರ್ಭದಲ್ಲಿ ಮೃದು–ಮಧುರ ಮಾತುಗಳಿಂದ ಇಡೀ ಸನ್ನಿವೇಶವನ್ನು ಸರಸವಾಗಿಸಿ, ಕಾಂತೆಯು (ಪತ್ನಿ) ಪ್ರೇರಣೆ ನೀಡಿ ಕಾರ್ಯವನ್ನು ಸಾಧಿಸುವ ರೀತಿಯಲ್ಲಿ ಕಾವ್ಯಗಳು ಒಳ್ಳೆಯ ಆಚರಣೆಗಳನ್ನು ರೂಢಿಸಿಕೊಳ್ಳುವುದಕ್ಕೆ, ಕೆಟ್ಟ ಯೋಚನೆ ಮತ್ತು ಆಚರಣೆಗಳನ್ನು ತ್ಯಜಿಸುವುದಕ್ಕೆ ಪ್ರೇರಣೆ ನೀಡುತ್ತವೆ.

ಇಲ್ಲಿ ವೇದಶಾಸ್ತ್ರಗಳ ಶಬ್ದಾಧಿಕ್ಯವೂ, ಇತಿಹಾಸ ಪುರಾಣಗಳ ಅರ್ಥಾಧಿಕ್ಯವೂ ಇಲ್ಲದೆ ಕೇವಲ ರಸಾಧಿಕ್ಯವಿರುವುದರಿಂದ ಇಲ್ಲಿಯ ಮಾತುಗಳು ಹೆಚ್ಚು ಆಕರ್ಷಕ ಮತ್ತು ಉತ್ಕೃಷ್ಟವೆನಿಸುತ್ತವೆ. ಅತ್ಯಂತ ಪ್ರಿಯ ಹಾಗೂ ಮನೋಹಾರಿಯಾಗಿರುವ ಇವು ಕಾಂತಾಸಮ್ಮಿತ ಉಪದೇಶದಂತೆ ವ್ಯಕ್ತಿಯಲ್ಲಿ ಕರ್ತವ್ಯಾಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಕಾವ್ಯದ ವಿಶಿಷ್ಟ ಪ್ರಯೋಜನವೆನಿಸಿದೆ. ಆದುದರಿಂದಲೇ ಕಾವ್ಯದ ಇತರ ಪ್ರಯೋಜನಗಳಾದ "ಯಶಸ್ಸಿನ ಸಂಪಾದನೆ, ಅರ್ಥಸಂಪಾದನೆ, ವ್ಯವಹಾರಜ್ಞಾನ, ಅನಿಷ್ಟ ನಿವಾರಣೆ, ಆನಂದಾನುಭೂತಿ," ಇವುಗಳಿಗಿಂತ ಉಪದೇಶಾತ್ಮಕವಾದ 'ಕಾಂತಾಸಮ್ಮಿತ' ಪ್ರಯೋಜನ, ಉತ್ತಮ ಸಮಾಜ ನಿರ್ಮಾಣದಲ್ಲಿ ಹೆಚ್ಚು ಮಹತ್ವದ ಪಾತ್ರ ವಹಿಸುತ್ತದೆ ಅಂತ ಕಾವ್ಯದ ವೈಶಿಷ್ಟ್ಯವನ್ನು ಹೊಗಳುತ್ತಾರೆ.

ಈ ಹೇಳಿಕೆ ಕಾವ್ಯದ ಪ್ರಯೋಜನದ ಹಾಗೆಯೇ ದಾಂಪತ್ಯದಲ್ಲಿ 'ಕಾಂತೆಯ' ಪಾತ್ರದ ಕುರಿತೂ ಬೆಳಕು ಚೆಲ್ಲುತ್ತದೆ.

***

ಕನ್ನಡ ಜಾನಪದ ಕಥೆಗಳು

(ಪುಸ್ತಕ ಸಂಪಾದನೆ: ಜೀ.ಶಂ. ಪರಮಶಿವಯ್ಯ,
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, 1970)

– ವಿಠ್ಠಲ. ಇಜೇರಿ

ಜಗತ್ತಿನ ಅನೇಕ ದೇಶಗಳಲ್ಲಿ ಜನಪದ ಕಥೆಗಳ ಸಂಗ್ರಹ ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಪ್ರಾರಂಭವಾಯಿತು. ಯುರೋಪಿನ ಎಲ್ಲ ದೇಶಗಳು ತಮ್ಮ ಮಾತೃಭಾಷೆಯಲ್ಲಿ ಜನಪದ ಕಥೆಗಳ ಸಂಗ್ರಹ ನಡೆಸಿ ಕಥಾ ಸಂಕಲನಗಳನ್ನು ಪ್ರಕಟಿಸಿದವು. ಯುರೋಪಿನಲ್ಲಿ ಕಳೆದ ಶತಮಾನದಲ್ಲಿ ಕಾಣಿಸಿಕೊಂಡ ರಾಷ್ಟ್ರೀಯ ಪ್ರಜ್ಞೆ ಹಾಗೂ ಶೃಂಗಾರ ಪ್ರಜ್ಞೆಗಳಿಂದಾಗಿ ಜಾನಪದದ ಬಗ್ಗೆ ವಿಶೇಷ ಆಸಕ್ತಿ ಮೂಡಿತು. ಜಾನಪದ ಶ್ರೀಸಾಮಾನ್ಯನ ಭಾಷೆಯಲ್ಲಿದ್ದು ಎಲ್ಲರಿಗೂ ಸುಲಭವಾಗಿ ತಲುಪಿತು. ವಿಶ್ವದ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯನ್ನು ಮೊದಲು ಮೂಡಿಸಿದ ಕೀರ್ತಿ ಜರ್ಮನಿಯ ಗ್ರಿಮ್ ಸಹೋದರರಿಗೆ ಸಲ್ಲುತ್ತದೆ. "ಗ್ರಿಮ್ ಹೌಸ್‌ಹೋಲ್ಡ್ ಟೇಲ್ಸ್ " ಅಥವಾ " ಗ್ರಿಮ್ಸ್ ಫೇರಿ ಟೇಲ್ಸ್ " ಎಂಬ ಕೃತಿ ಹೆಚ್ಚು ಜನಪ್ರಿಯವಾಯಿತು(1812). ಹೆಚ್ಚು ಕಡಿಮೆ ಇದೇ ಅವಧಿಯಲ್ಲಿ ಮಾರಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಜಾಕೊಬ್ ಮತ್ತು ವಿಲ್ ಹೆಲ್ಮ ಸೋದರರು ಜನಪದ ಕಥೆಗಳ ಸಂಗ್ರಹಕಾರ್ಯ ಪ್ರಾರಂಭಿಸಿದರು. ಅವರಿಗೆ ಡೊರೊಥಿಯಾ ವೈಲ್ಡ್ ಎಂಬ ಹದಿನಾರರ ಕನ್ಯೆ ಸಾಕಷ್ಟು ಕತೆಗಳನ್ನು ಹೇಳಿದಳು. ವಿಲ್ ಹೆಲ್ಮ ಕೊನೆಗೆ ಆಕೆಯನ್ನೇ ಮದುವೆಯಾದ. ಹೀಗೆ ಯುರೋಪಿನಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಜಾನಪದ ಕಥೆಗಳ ಸಂಗ್ರಹಕಾರ್ಯ ಮುಂದುವರೆಯಿತು.

ಕರ್ನಾಟಕದಲ್ಲಿ ಜನಪದ ಅಧ್ಯಯನ 1970ರ ದಶಕದಲ್ಲಿ ಹೆಚ್ಚು ಪ್ರಚಲಿತವಾಯಿತು. ಮೊದಮೊದಲು ಜನಪದಗೀತೆ, ಕಥನಗೀತೆಗಳಿಗೆ ಸೀಮಿತವಾಗಿದ್ದ ಜನಪದ ಸಂಗ್ರಾಹಕರ ದೃಷ್ಟಿ ಕಥೆಗಳ ಸಂಗ್ರಹದತ್ತ ಹರಿಯಿತು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರೇರಣೆ ಮತ್ತು ಪ್ರೋತ್ಸಾಹದ ಪರಿಣಾಮ ಅನೇಕ ಉತ್ತಮ ಕಥಾ ಸಂಕಲನಗಳು ಪ್ರಕಟವಾದವು. ಪ್ರಸಿದ್ಧ ಸಾಹಿತಿಗಳು, ಕನ್ನಡ ಅಧ್ಯಯನ ಸಂಸ್ಥೆಯ ಉಪಕುಲಪತಿಗಳಾದ ಹಾ. ಮಾ. ನಾಯಕ ಅವರು ಆಸಕ್ತಿವಹಿಸಿ ಸೆಪ್ಟೆಂಬರ್, 1970 ರಲ್ಲಿ ಮೊದಲ ಮುದ್ರಣ ಕಂಡ ಮತ್ತು ಜಾನಪದ ತಜ್ಞ ಜೀ.ಶಂ.ಪರಮಶಿವಯ್ಯ ಅವರು ಸಂಪಾದಿಸಿದ ಕೃತಿ "ಕನ್ನಡ ಜಾನಪದ ಕಥೆಗಳು" ಹೆಚ್ಚು ಜನಪ್ರಿಯವಾಗಿ 1994ರ ವೇಳೆಗೆ ಮೂರು ಮುದ್ರಣಗಳನ್ನು ಕಂಡಿತು.

ಜನಪದ ಕಥೆಗಳನ್ನು (1) ಅತಿಮಾನುಷ ಕಥೆಗಳು. (2) ರಮ್ಯ ಕಥೆಗಳು (3) ಅದ್ಭುತ ಕಥೆಗಳು (4) ಬುದ್ಧಿವಂತಿಕೆ ಕಥೆಗಳು (5) ಹಾಸ್ಯ ಕಥೆಗಳು (6) ಪ್ರಾಣಿ ಕಥೆಗಳು ಎಂದು ವರ್ಗೀಕರಿಸುತ್ತಾರೆ.

ಈ ಸಂಕಲನದ ಒಂದು 'ಬುದ್ಧಿವಂತಿಕೆ ಕಥೆ' ಹೆಂಡತಿಗೆ ಹೇಳಿದ ಗುಟ್ಟು ನೋಡೋಣ:

ಹೆಂಡತಿಗೆ ಹೇಳಿದ ಗುಟ್ಟು

" ಒಂದೂರಲ್ಲಿ ಒಬ್ಬ ಗೌಡ, ಸಂಜೆ ಅರಳೆ ಕಟ್ಟಾಗ ಕೂತಾಗ ಒಂದು ಮಾತು ಕೇಳ್ದ.

" ಸೂಳೇಸಂಗ ಮಾಡಿದ್ರೂ ಗೀಳೆಸಂಗ ಮಾಡಬೇಡ, ಸೆಟ್ಟಿಸಂಗ ಮಾಡಿದ್ರೂ ಗಿಟ್ಟಿ ಸಂಗ ಮಾಡಬೇಡ, ನಿನ್ನ ಗುಟ್ನ ಹೆಂಡ್ತಿಗೆ ಹೇಳ್ಬೇಡ".

ಗೌಡನಿಗೆ ಏನು ಈ ಮಾತಿನ ವೃತ್ತಾಂತ ತಿಳಕೋಳಾನ ಅಂತಾ ಮರುದಿನ ತನ್ನ ಭಾವ ಮೈದುನಗೆ ಕರ್ಕೊಂಡು ಹೊಲದ ಕಡೆಗೆ ಹೋದ. ಭಾವಮೈದುನಗೆ, "ತಮ್ಮಾ, ಮೂರು ತಿಂಗ್ಳು ದೇಶ ಸುತ್ತು, ಊರ ಕಡೆ ತಲೆ ಹಾಕ್ ಬ್ಯಾಡ" ಅಂತಾ ಕಾಸು

ಕೊಟ್ಟು ಕಳಿಸಿದ. ಸಂಜೆ ಹೊತ್ಗೆ ಒಂದು ದೊಡ್ಡ ಕಲ್ಲಂಗಡಿ ಹಣ್ಣಿಗೆ ಕಣ್ಣು, ಮೂಗು, ಬಾಯಿ ಬರೆದು, ಹಣ್ಣಿನ ರಸ ತೆಗೆದು ಆ ಮೂತಿಗೆ ಹಾಕಿ ಬಟ್ಟೆಯೊಳಗೆ ಸುತ್ತಿ ಕತ್ತಲದಾಗ ಮನೆಗೆ ಬಂದು ದೊಡ್ಡ ಪೆಟ್ಟಿಗೆ ಬಾಗಿಲು ತೆಗೆದು ಮೆಲ್ಲಗೆ ಇಡುವಾಗಲೇ ಹೆಂಡ್ತಿ ಅಲ್ಲಿಗೆ ಬಂದು, "ಇದೇನ್ರಿ, ನಿಮ್ಮ ಕೈಗೆ ರಕ್ತ, ಅದೇನೋ ಗುಟ್ಟಾಗಿ ಪೆಟ್ಟಿಗೆಗೆ ಸೇರಸ್ತಾ ಇದ್ದೀರಿ?" ಅಂತಾ ಕೇಳಿದ್ಲು. ಗೌಡ ಬೆಳಿಗ್ಗೆ ಭಾವಮೈದ ನಂಜೊತೆ ಬಂದಿದ್ದ, ಹೊಲದ ತಾವ ನಂಗೂ ಅವ್ಗೆ ಮಾತಾಯ್ತು, ನಂಗೆ ಬಂದ ಕೊಪ್ದಾಗೆ ಅವನ್ ಕತ್ತು ತೆಗದುಬಿಟ್ಟೆ, ನಿಂಗೆ ಹೇಳ್ದೆ ಇರಾಕೆ ಆಗೋಲ್ಲ, ನೀನು ಮಾತ್ರ ಯಾರಿಗೂ ಹೇಳ್ಬೇಡ" ಅಂದ.

ಮರುದಿನ ಬೆಳಿಗ್ಗೆ ಹೆಂಡ್ತಿ ಪಕ್ಕದ ಕಲ್ಲಮ್ಮನ ಮನೆಗೆ ಬೆಂಕಿ ತರಲಿಕ್ಕೆ ಹೋದ್ಲು, ರಾತ್ರಿ ಕೇಳಿದ ಗಂಡನ ಸಮಾಚಾರ ನಿದ್ರೆ ಕೆಡಿಸಿತ್ತು, ಯಾರಿಗೂ ಹೇಳ್ಬೇಡ ಅಂತಾ ಗಂಡ ಪೆಟ್ಟಿಗೇಲಿ ಭಾವಮೈದನನ ತಲೆ ಇರಿಸಿದ ಸಮಾಚಾರ ಕಲ್ಲಮ್ಮನಿಗೆ ಹೇಳಿದಾಗ ಮನಸ್ಸು ಹಗುರ ಅನಿಸಿತು, ಮನೆಗೆ ಬಂದ್ಲು. ಆ ದಿನ ತಲೆ ಸಮಾಚಾರ ಕೇಳಿದ ಕಲ್ಲಮ್ಮಗೆ ಸುಖ ಇಲ್ಲ, ಸಂಜೆ ವೇಳೆಗೆ ಮಲ್ಲಮ್ಮಗೆ, ತುಂಬಾ ಗುಟ್ಟು ಯಾರಿಗೂ ಹೇಳ್ಬೇಡ ಅಂತಾ ತನ್ನ ತಲೆ ತಿಂತಾ ಇದ್ದ ಭಾವಮೈದನ ತಲೆ ವಿಷಯ ತಿಳಿಸಿದಳು. ಮೂರು ದಿನದೊಳಗೆ ಆ ಊರಿಗೇ ಗುಟ್ಟು ತಿಳಿದೋಯ್ತು. ದೊರೆ ಗೌಡನಿಗೆ ಕರೆಸಿದ. ಹಾಗೇ ಆ ಪೆಟ್ಟಿಗೇನೂ ತರಿಸಿದ. ಗೌಡನಿಗೆ "ನಿನ್ನ ಯಾಕೆ ಹಿಡಿದು ತರಿಸಿದ್ದು ಗೊತ್ತಾ?, ನೀನೇ ಈ ಪೆಟ್ಟಿಗೆ ತೆಗೆದು ತೋರ್ಸು" ಅಂದ. ಗುಟ್ಟು ರಟ್ಟಾಯ್ತು. ಗೌಡ ದೊರೆಗೆ "ಮಹಾಸ್ವಾಮಿ, ಒಂದು ಗಾದೆ ಮಾತು, 'ಸೂಳೇಸಂಗ ಮಾಡಿದ್ರೂ ಗೀಳೆಸಂಗ ಮಾಡ್ಬೇಡ, ಸೆಟ್ಟಿಸಂಗ ಮಾಡಿದ್ರೂ ಗಿಟ್ಟಿಸಂಗ ಮಾಡಬೇಡ, ನಿನ್ನ ಗುಟ್ಟು ಹೆಂಡ್ತಿಗೆ ಹೇಳ್ಬೇಡ' ಅನ್ನೋ ಮಾತು. ಅದನ್ನೇ ಮಹಾಸ್ವಾಮಿ ಪರೀಕ್ಷೆ ಮಾಡ್ದೆ " ಅಂತಾ ಕೈ ಮುಗಿದು ಪಾರಾಗಿ ಬಂದ.

***

ಪ್ರಕಟವಾಗದಿರುವ ಸುದ್ದಿಗಳು

– ರೇಣುಕಾ ದೇಸಾಯಿ

ಸುದ್ದಿ–1

ಸರ್ಕಾರಿ ಕಛೇರಿಯಲ್ಲಿ ಅಧಿಕಾರಿಯಾಗಿದ್ದರೂ ಅಪ್ಪನಿಗಾಗಿ ಮಲ್ಲೇಶ್ವರದ ಹೋಲ್‌ಸೇಲ್ ಮಾರ್ಕೆಟಿನಲ್ಲಿ ಸೊಪ್ಪು ಮಾರುತ್ತಿರುವ ಲೋಕೇಶಪ್ಪನವರು.

ಬಡತನದ ಕುಟುಂಬದಿಂದ ಮೇಲೆ ಬಂದ ಈ ಅಧಿಕಾರಿಯ ತಂದೆ, ಹೋಲ್‌ಸೇಲ್ ದರದಲ್ಲಿ ಸೊಪ್ಪು, ಕರಿಬೇವು, ಕೊತ್ತುಂಬರಿ ಮಾರುವ ಸಜ್ಜನರು. ತಮ್ಮ ಈ ವೃತ್ತಿಯಿಂದಲೇ ತನ್ನ ಸಂಸಾರವನ್ನು ನ್ಯಾಯಯುತವಾಗಿ ಸಲುಹಿ, ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡಿ, ವಿದ್ಯಾವಂತರನ್ನಾಗಿ ಮಾಡಿ, ಸಮಾಜಕ್ಕೆ ನೀಡಿದವರು. ಅವರ ತಂದೆಯವರಿಗೆ ಮೈಲ್ಡ್ ಹಾರ್ಟ್ ಅಟ್ಯಾಕ್ ಆಗಿ, ವೈದ್ಯರ ಸಲಹೆಯಂತೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. ಒಂದಾರು ತಿಂಗಳು ಹೆಚ್ಚಿನ ಓಡಾಟ, ಶ್ರಮದ ಕೆಲಸ ಮಾಡಬಾರದೆಂದು ಸೂಚಿಸಿದ್ದಾರೆ. ಆದರೆ ಅವರ ತಂದೆಯವರು ಎಷ್ಟೋ ವರ್ಷಗಳಿಂದ ಈ ಸೊಪ್ಪಿನ ವ್ಯಾಪಾರ ಮಾಡಿ ಅದರಿಂದಲೇ ಮಕ್ಕಳನ್ನೆಲ್ಲಾ ಸಲುಹಿ ಮುಂದೆ ತಂದಿದ್ದಾರೆ. ಅವರಿಗೆ ಈ ವೃತ್ತಿಯಲ್ಲಿ ತುಂಬಾ ನೆಮ್ಮದಿ, ಅಭಿಮಾನವಿದೆ, ಈ ವೃತ್ತಿಗೆ ಅದರದೇ ಜಾಗ ಕೂಡ ಮುಖ್ಯವಾಗುತ್ತದೆ. ಆರು ತಿಂಗಳ ನಂತರ ಅವರು ತಮ್ಮ ವೃತ್ತಿಗೆ ಮತ್ತೆ ಮರಳಿ ಬರಬೇಕು ಎಂದುಕೊಂಡರೆ, ಅಷ್ಟರಲ್ಲಿ ಈ ಜಾಗ ಮತ್ಯಾರೋ ಆಕ್ರಮಿಸಿಕೊಂಡರೆ ಅವರಿಗೆ ನೋವಾಗುತ್ತದೆ. ಕಾರಣ ಸರಿಯಾದ ಜಾಗ ಕೂಡಾ ವ್ಯಾಪಾರದ ಮೇಲೆ ಪ್ರಭಾವ ಬೀರುತ್ತದೆ. ಹಾಗಾಗಬಾರದೆಂದು ಬೆಳಿಗ್ಗೆ ಒಂದೆರಡು ಘಂಟೆ ಈ ವೃತ್ತಿಯನ್ನು ಅವರ ಮಗ, ಅಧಿಕಾರಿಯಾಗಿದ್ದರೂ ತಾನೇ ಮುಂದುವರಿಸುತ್ತಿದ್ದಾನೆ. ಇವರ ಈ ವ್ಯಾಪಾರದ ಅವಶ್ಯಕತೆ ಈಗ ಆ ಸಂಸಾರಕ್ಕೆ ಇಲ್ಲ ಆದರೆ ತಂದೆಯವರು ಸದಾ ಚಟುವಟಿಕೆಯಿಂದ ಇರುವ ವ್ಯಕ್ತಿ. ಈ ಜಾಗ ಕಳೆದುಕೊಂಡು ಅವರು ನೊಂದುಕೊಂಡರೆ ಮುಂದಿನ ಅವರ ದಿನಗಳು ಕಷ್ಟದಾಯಕವಾಗುತ್ತದೆ, ಕೊರಗುತ್ತಾರೆ ಹಾಗೆಂದೇ ಆಫೀಸಿಗೆ ಹೋಗುವ ಮೊದಲು ಒಂದೆರಡು ತಾಸು ವ್ಯಾಪಾರ ಮಾಡಿ, ನಂತರ ಕಚೇರಿಗೆ ಹೋಗುತ್ತಿರುವರು. ಇಂತಹ ಒಳ್ಳೆಯ ಮಗನನ್ನು ಪಡೆದ ಆ ತಂದೆಯ ಬಗೆಗೆ ಹೆಮ್ಮೆಯಿಂದ ಯೋಚಿಸುತ್ತದೆ ಸಮಾಜ.

ಸುದ್ದಿ–2

ಹಳ್ಳಿಯಲ್ಲಿ ತಮ್ಮ ಕುಶಲತೆಗೆ ತಕ್ಕುದಾದ ಕೆಲಸ ಸಿಗುವದಿಲ್ಲವೆಂದು ಬೆಂಗಳೂರು ಸೇರಿದವರು, ಎರಡು ಮಕ್ಕಳನ್ನು ಓದಿಸಲು ಬವಣೆಪಡುತ್ತಾ ಗಂಡ ಹೆಂಡಿರಿಬ್ಬರು ದಿನನಿತ್ಯ ಪರದಾಡುವ ಗೋಪಾಲಕೃಷ್ಣ ಮತ್ತು ರೇವತಿಯರಿಗೆ ಐದನೇ ತರಗತಿಗೆ ಒಬ್ಬಳನ್ನು, ಏಂಟನೇ ತರಗತಿಗೆ ಇನ್ನೊಬ್ಬ ಮಗಳನ್ನು ಶಾಲೆಗೆ ಸೇರಿಸಲು ಹರಸಹಾಸ ಮಾಡುತ್ತಿರುವರು. ಗೋಪಾಲಕೃಷ್ಣ, ವಿದ್ಯುತ್ ಉಪಕರಣದ ಸಣ್ಣದೊಂದು ಅಂಗಡಿ ಇಟ್ಟುಕೊಂಡು ಮತ್ತು ಯಾರದಾದರೂ ಮನೆಯಿಂದ ಕರೆ ಬಂದಾಗ ಅಲ್ಲಿ ರಿಪೇರಿ ಕೆಲಸಮಾಡುತ್ತಾರೆ. ಹೆಂಡತಿ ರೇವತಿಗೆ ವಕೀಲರ ಆಫೀಸಿನಲ್ಲಿ ಸಹಾಯಕಳಾಗಿ ಕೆಲಸ, ಸಣ್ಣ ಸಂಬಳ. ಗೋಪಾಲಕೃಷ್ಣನಿಗೆ ಅವನ ಹುಟ್ಟೂರಿನಲ್ಲಿ ಅವನ ಪಾಲಿಗೆ ಬಂದ ಜಮೀನು ಇದೆ. ಅದನ್ನು ಅವನು ಇಂದು ಮಾರಿದರೂ ಸರಿಸುಮಾರು 25 ಲಕ್ಷ ಹಣ ಬರುತ್ತದೆ. ಆದರೆ ಅಪ್ಪ, ನಾಲ್ಕು ಜನ ಅಣ್ಣ-ತಮ್ಮಂದಿರನ್ನು ಸಾಕಿ ಸಲುಹಿ ಜಮೀನನ್ನು ಉಳಿಸಿಕೊಂಡು ಬಂದಿದ್ದಾರೆ. ಅದನ್ನು ಮಾರಿದರೆ ಅಪ್ಪನ ಹೆಸರಿಗೆ ಕುಂದು ಬರುತ್ತದೆ, ಹಳ್ಳಿಯ ಜನದೆದುರು ತನ್ನ ವ್ಯಕ್ತಿತ್ವ ಸಣ್ಣದಾಗುತ್ತದೆ, ಹೀಗಾಗಿ ಅದನ್ನು ಮಾರದೆ ಅಪ್ಪನ ಹೆಸರನ್ನು ಉಳಿಸುವ ಹೆಮ್ಮೆಯ ಮನಸ್ಸು ಇವನದು. ಬೆಂಗಳೂರು ಮಹಾನಗರದಲ್ಲಿ ಮನೆಯ ಬಾಡಿಗೆ ಕಟ್ಟಲು ಪರದಾಡಿದರೂ ಅಪ್ಪನ ಗೌರವ ಕಾಪಾಡುವ ಹೊಣೆ ಹೊತ್ತಿದ್ದಾನೆ.

ಸುದ್ದಿ–3

ವೀಣಾ ಮತ್ತು ಗಾಯತ್ರಿ ಇಬ್ಬರು ಶಿಕ್ಷಕಿಯರು, ಶಾಲೆಯಲ್ಲಿ 10 ವರ್ಷದಿಂದ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಒಬ್ಬಳು ಶೈಕ್ಷಣಿಕ ಸಂಯೋಜಕಿ, ಇನ್ನೊಬ್ಬಳು ಆಡಳಿತ ಸಂಯೋಜಕಿ, ಒಂದೇ ಸ್ಥರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಆ ಶಾಲೆಯ

ಪ್ರಾಂಶುಪಾಲರ ಹುದ್ದೆ ತೆರವಾಗಿದೆ ಈ ಇಬ್ಬರಲ್ಲಿ ಒಬ್ಬರನ್ನು ಪ್ರಾಂಶುಪಾಲರನ್ನಾಗಿ ಮಾಡುವ ಹೊಣೆ ಶಾಲಾ ಸಮಿತಿಯದಾಗಿದೆ. ಹೀಗಾಗಿ ಒಂದು ದಿನ ಸಮಿತಿಯು ವೀಣಾ ಒಬ್ಬಳನ್ನೇ ಕರೆದು, ಪ್ರಾಂಶುಪಾಲರನ್ನಾಗಿ ನಿಮ್ಮಲ್ಲಿ ಒಬ್ಬರನ್ನು ಆಯ್ಕೆಮಾಡಬೇಕು, ನೀವಾ? ಅವರಾ? ಎಂದು ಅವಳ ಅಭಿಪ್ರಾಯ ಕೇಳಲಾಗಿ, ಗಾಯತ್ರಿ ನನಗಿಂತ ಈ ಶಾಲೆಯಲ್ಲಿ 10 ವರ್ಷ ಮೊದಲಿಂದಲೇ ದುಡಿದಿದ್ದಾರೆ. ಜೊತೆಗೆ ಅವರು ಪದವೀಧರೆ, ಬಿ.ಎಡ್ ಕೂಡ ಮಾಡಿದ್ದಾರೆ. ಹೀಗಾಗಿ ಅವರನ್ನೇ ಪ್ರಾಂಶುಪಾಲರಾಗಿ ಆಯ್ಕೆಮಾಡಿ ಎಂದು ತಮ್ಮ ಪ್ರಾಮಾಣಿಕ ಅಭಿಪ್ರಾಯ ಹೇಳಿದರು. ಶಾಲಾ ಸಮಿತಿಗೆ ನಿಟ್ಟುಸಿರು. ಯಾರನ್ನು ಮಾಡುವುದು ಎನ್ನುವ ಸಮಸ್ಯೆ ಸರಳವಾಗಿ ಬಗೆಹರಿದಿದೆ. ಈಗ ಆ ಶಾಲೆಯ ಪ್ರಾಂಶುಪಾಲೆ ಗಾಯತ್ರಿ. ಮರುದಿನ ಗಾಯತ್ರಿ ಇದೇ ಶಾಲಾ ಸಮಿತಿಯ ಎದುರಿಗೆ ಬಂದು, ಮೇಡಂ, ನಾನು ವೀಣಾ ನಿನ್ನೆಯವರೆಗೆ ಒಂದೇ ಸ್ಥಳದಲ್ಲಿ ಒಟ್ಟಿಗೇ ಕೆಲಸ ಮಾಡುತ್ತಿದ್ದೆವು. ವೀಣಾ ನನಗಿಂತ ಹೆಚ್ಚಿನ ಶ್ರಮವಹಿಸಿ ಕೆಲಸ ಮಾಡುತ್ತಿದ್ದಳು. ಈಗ ನೀವು ನನ್ನನ್ನು ಪ್ರಾಂಶುಪಾಲರಾಗಿ ಮಾಡಿ 4,000 ರೂಪಾಯಿ ಸಂಬಳ ಹೆಚ್ಚಿಸಿದ್ದೀರಿ. ಹಾಗೇನೇ ವೀಣಾಗೂ ಸಂಬಳ ಹೆಚ್ಚಿಸಿ. ಅವಳಿಗೆ ನೋವಾಗದಿರಲಿ, ಇಲ್ಲ ನನಗೆ ಸ್ವಲ್ಪ ಸಂಬಳ ಕಡಿಮೆ ಕೊಡಿ.

ಸುದ್ದಿ-4

ತಮ್ಮನ ಒಳಿತಿಗಾಗಿ ಅಣ್ಣನು ದೇವಸ್ಥಾನದಲ್ಲಿ 108 ನಮಸ್ಕಾರಗಳನ್ನು ಹಾಕಿದನು. ಶ್ರೀನಿವಾಸ ಒಂದು ಸಾಫ್ಟ್‌ವೇರ್ ಕಂಪನಿಯಲ್ಲಿ ದೊಡ್ಡ ಹುದ್ದೆಯಲ್ಲಿರುವ ವ್ಯಕ್ತಿ, ಹಾಗಿದ್ದರೂ ದೇವನಲ್ಲಿ ಭಕ್ತಿ ಬಹಳ. ಅವರು ಮೊನ್ನೆ ಆಶ್ರಮದಲ್ಲಿ 108 ದೀರ್ಘ ದಂಡ ನಮಸ್ಕಾರಗಳನ್ನು ಅರ್ಪಿಸಿದರು. ಯಾವುದಕ್ಕೆ ಈ ಈಶ ಸೇವೆ ಎಂದರೆ ನನ್ನ ತಮ್ಮ ನಮ್ಮ ಹಳ್ಳಿಯ ಶಾಲೆಯಲ್ಲಿ ಶಿಕ್ಷಕ, ತುಂಬಾ ಪ್ರಾಮಾಣಿಕ ವ್ಯಕ್ತಿ, ಶ್ರಮಜೀವಿ, ಶಾಲೆಯನ್ನು ತನ್ನದೇ ಸಂಸಾರವೆಂದು, ಬರುವ ಮಕ್ಕಳೆಲ್ಲ ತನ್ನ ಮಕ್ಕಳೇ ಎಂದು ಭಾವಿಸಿ, ದಿನದ 24 ಘಂಟೆ ಶಾಲೆಯ ಶ್ರೇಯೋಭಿವೃದ್ಧಿಗೆ ಸದಾ ಚಿಂತಿಸುವ, ಕೆಲಸ ಮಾಡುವ ಒಬ್ಬ ದಕ್ಷ ಶಿಕ್ಷಕ. ತನ್ನ ಜೀವಿತಾವಧಿಯಲ್ಲಿ ಕೂಡಿಟ್ಟ ಹಣದಲ್ಲಿ ತನ್ನದೊಂದು ಪುಟ್ಟ ಮನೆಯನ್ನು ಕಟ್ಟಿಕೊಳ್ಳುವ ಕನಸನ್ನು ಹೊತ್ತವನು. ಆದರೆ ಅವನ ಪೂರ್ತಿ ಗಳಿಕೆ ಯಾವುದೋ ದುಷ್ಟ ಕಾಂಟ್ರಾಕ್ಟರ್ ಕೈಯಲ್ಲಿ ಸಿಕ್ಕಿಹಾಕಿಕೊಂಡು ನಾಲ್ಕೈದು ವರ್ಷದಿಂದ ಕಿರುಕಳ ಅನುಭವಿಸುತ್ತಿದ್ದ. ಅವನ ಸಮಸ್ಯೆ ಪರಿಹಾರವಾದರೆ 108 ನಮಸ್ಕಾರ ಸೇವೆ ಮಾಡುತ್ತೇನೆ ಎಂದು ದೇವರಲ್ಲಿ ಹರಕೆ ಹೊತ್ತಿದ್ದೆ, ಅವನ ಕನಸಿನ ಸುಂದರ ಮನೆ ಸಿದ್ಧವಾಗಿ ಮೊನ್ನೆ ಗೃಹಪ್ರವೇಶವಾಯಿತು. ಇಂದು ನಾನು ನನ್ನ ಹರಕೆಯನ್ನು ತೀರಿಸುತ್ತಿದ್ದೇನೆ.

ರಾಮ ಲಕ್ಷ್ಮಣರ ನಾಡು ನಮ್ಮದು.

ದಿನಬೆಳಗಾದರೂ ಅಪ್ಪ ತನಗೆ ಆಸ್ತಿ ಕೊಡಲಿಲ್ಲವೆಂದು ಮಗನೇ ತಂದೆಯನ್ನು ಕೊಲೆ ಮಾಡಿದ. ಪತ್ನಿ ವರದಕ್ಷಿಣೆ ತರಲಿಲ್ಲ ಎಂದು ಮದುವೆಯಾಗಿ ಎರಡು ವರ್ಷದಲ್ಲೇ ಪತಿಯೇ ಕತ್ತು ಹಿಸುಕಿ ಕೊಲೆ ಮಾಡಿದ. ನಿವೃತ್ತ ಡಿ. ಐ. ಜಿ.ಯನ್ನು ಅವನ ಪತ್ನಿಯೇ ಚಾಕುವಿನಿಂದ ಹಲವಾರು ಬಾರಿ ಇರಿದು ಕೊಂದಳು. ಶಿಸ್ತಿನಿಂದ ಬಾಳಿ ಜೀವನಕ್ಕೆ ಆಧಾರ ಮಾಡಿದ ತಾಯಿಗೆ, ಕೇಳಿದಾಗ ಹಣ ಕೊಡಲಿಲ್ಲವೆಂದು ಮಗನೇ ಗೃಹಬಂಧನ ಮಾಡಿ ಬೆತ್ತದಿಂದ ಏಟು ಕೊಟ್ಟು ಕ್ರೂರವಾಗಿ ಶಿಕ್ಷಿಸುತ್ತಿದ್ದ ಎನ್ನುವ ಸುದ್ದಿಗಳನ್ನು ದಿನಪತ್ರಿಕೆಯಲ್ಲಿ ಪ್ರತಿದಿನ ಓದಿದ ಮನಸ್ಸಿಗೆ ಸದಾ ಋಣಾತ್ಮಕ ಚಿಂತನೆ, ಭಯಾನಕ ಸುದ್ದಿಗಳು, ಅವುಗಳ ವಿರಾಟ್ ಸ್ವರೂಪ ದೂರದರ್ಶನ ಮಾಧ್ಯಮದಲ್ಲಿ. ಒಬ್ಬರ ಮೇಲೊಬ್ಬರು ಅರಚುತ್ತಾ ಹೇಳುವ ಬಿಸಿಬಿಸಿ ಸುದ್ದಿಗಳಿಂದ ಮನಸ್ಸು ಕಲುಷಿತವಾಗಿ ಸಮಾಜ ಹಾಳಾಗುತ್ತಿದೆ ಎನ್ನುವ ಋಣಾತ್ಮಕ ಚಿಂತನೆಗಳಿಗಿಂತ ಮೇಲಿನ ಧನಾತ್ಮಕ ಚಿಂತನೆಗಳು ಸುದ್ದಿಗಳಾದರೆ ಒಳ್ಳೆಯದಲ್ಲವೇ????

ಜೈ ಹಿಂದ್ ..., ಜೈ ಭಾರತ್ ಮಾತೆ. ಜೈ ಕರ್ನಾಟಕ ತನುಜಾತೆ

***

ಗಟ್ಟಿ ಮೇಳ

– ನಾಗರತ್ನ ಚಂದ್ರಶೇಖರ್

ಗಟ್ಟಿಮೇಳ ಕಲ್ಯಾಣ ಕೇಂದ್ರದಲ್ಲಿ ಸಡಗರವೋ ಸಡಗರ. ಅದರ ಮಾಲಕಿ ಕಲ್ಯಾಣಿ ಹಾಗೂ ಸಹಾಯಕಿ ಸೌಂದರ್ಯ ಇಬ್ಬರೂ ನಾಳೆಯ ಉದ್ಘಾಟನೆಗಾಗಿ ಎಲ್ಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಲು ಬಿಡುವಿಲ್ಲದ ಕೆಲಸದಲ್ಲಿ ತೊಡಗಿದ್ದರು.

"ಆಮೇಲೆ ಆಫೀಸ್ ಬಾಯ್ಗೆ ಹೇಳಿ ಮುಂದುಗಡೆ ಬೋರ್ಡ್ ಫಿಕ್ಸ್ ಮಾಡಿಸು. ನೀನು ಸ್ವಲ್ಪ ಫೈಲುಗಳನ್ನೆಲ್ಲ ಸರಿಯಾಗಿ ಚೆಕ್ ಮಾಡಿ ಹುಡುಗರದು ಮತ್ತೆ ಹುಡುಗೀರ್ದು ಬೇರೆ ಬೇರೆ ಫೈಲ್ನಲ್ಲಿ ಹಾಕಿದ್ಯಾ ಅಂತ ಇನ್ನೊಂದ್ ಸರಿ ಚೆಕ್ ಮಾಡು,"

ಕಲ್ಯಾಣಿಯ ಸಲಹೆಯಂತೆ ಬೋರ್ಡ್ ನೋಡಲಿಕ್ಕೆ ಹೋದಳು. ಅಲ್ಲಿ ಕಲ್ಯಾಣಿ ಕೇಂದ್ರ ಅಂತ ಇರೋದು ನೋಡಿ ಅವಳಿಗೆ ಒಂದು ಗಳಿಗೆ ಶಾಕ್ ಆಯಿತು. ಹೇಳಿಕೇಳಿ ಇದು ವಿವಾಹ ಸಲಹಾ ಕೇಂದ್ರ ಅರ್ಥಾತ್ ಮ್ಯಾರೇಜ್ ಬ್ಯೂರೋ, ಮೇಡಂ ಕಲ್ಯಾಣಿ ಇದರ ಓನರ್. ಅದಕ್ಕೇ ಇರಬೇಕು ಕಲ್ಯಾಣಿ ಕೇಂದ್ರ ಅಂತ ಬರೆಸಿಕೊಂಡಿದ್ದಾರೆ ಅಂದುಕೊಂಡು ಎಲ್ಲಾ ಸರಿಯಾಗಿದೆ. ಇನ್ನು ನಾನ್ಯಾಕೆ ತಲೆ ಕೆಡಿಸ್ಕೊಳ್ಳಬೇಕು. ನಾಳೆ ಉದ್ಘಾಟನೆ ಅಂತ ಪೇಪರಿನಲ್ಲಿ ಹಾಕ್ಸಿದ್ಯಲ್ಲ. ಆ ಪೇಪರ್ ಕಟ್ಟಿಂಗ್ ಎಲ್ಲ ತೆಗೆದಿಟ್ಟುಕೊಳ್ಳಬೇಕು ಎನ್ನುತ್ತಾ ಒಳಗೆ ಹೋದಳು. ಹೊರಗಿನಿಂದ ರಾಜಣ್ಣ, ಆಫೀಸ್ ಬಾಯ್, "ಅಕ್ಕಾವ್ರೇ, ಹೂವು, ಮಾವಿನ ತೋರಣ, ಬಾಳೆಕಂಬ ಇದೆಲ್ಲ ತರಬೇಕಲ್ಲಾ, ಆಮೇಲೆ ಪೂಜೆ ಮಾಡೋಕೆ ಪುರೋಹಿತರು ಬೇಕಾದ್ರೆ ನಮ್ಮನೆ ಪಕ್ಕದಲ್ಲಿ ಇದ್ದಾರೆ. ಚೀಪಾಗಿ ಬರ್ತಾರೆ ಬಿಡಿ" ಅಂದ. ಅವನ ಮಾತು ಕೇಳಿಸಿಕೊಂಡ ಕಲ್ಯಾಣಿ ಹೊರಗೆ ಬಂದು, "ರಾಜಣ್ಣ, ಮಾವಿನ ಸೊಪ್ಪು, ಬಾಳೆಕಂಬ, ಎಲ್ಲಾ ಯಾಕೆ? ಇದೇನು ಮದುವೆ ಮನೆಯೆ? ಇಲ್ಲಿ ಮದುವೆ ಫಿಕ್ಸ್ ಮಾಡಿ ಕೊಡ್ತೀವಿ ಅಷ್ಟೇ, ಪುರೋಹಿತರು, ಒಳ್ಳೆಯ ಮುಹೂರ್ತ, ಇದರಲ್ಲೆಲ್ಲ ನನಗೆ ನಂಬಿಕೆ ಇಲ್ಲ. ಬಂದೋರಿಗೆ ಪ್ರಾರಂಭೋತ್ಸವಕ್ಕೆ ಅಂತ ಒಂದಿಷ್ಟು ಸಿಹಿ, ಖಾರಾ ಕಾಫಿ ಕೊಡೋಣ."

"ಅಂದ್ಹಾಗೆ ನಾಳೆ ಟೇಪ್ ಕತ್ತರಿಸೋಕೆ ಈ ಆಫೀಸ್ ಬಿಲ್ಡಿಂಗ್ ಓನರ್ ಕೃಷ್ಣಪ್ಪ ಬರ್ತಾ ಇದ್ದಾರೆ ಅಲ್ವಾ, ಮೇಡಂ. ಅವರೇ ಸರಿಯಾದವರು ಬಿಡಿ, ಯಾಕಂದ್ರೆ ಅವರು ಕೂಡ ಕನ್ಯಾರ್ಥಿ ಅಂತ ಕೇಳಿದ್ದೇನೆ. ಪಾಪ 45 ಅದರೂ ಇನ್ನು ಹುಡುಗಿನೇ ಸಿಕ್ಕಿಲ್ಲ ಅಂತ ಪೇಚಾಡ್ತಾ ಇರ್ತಾರೆ". ರಾಜಣ್ಣನಿಂದ ಸ್ಪೆಷಲ್ ನ್ಯೂಸು ಸಿಕ್ಕಿದಂಗಾಯಿತು ಕಲ್ಯಾಣಿಗೆ.

"ಮೇಡಂ, ಅದಕ್ಕೆ ಇರಬೇಕು ನೀವು ಆಫೀಸ್ ಓಪನ್ ಮಾಡ್ತೀವಿ ಅಂತ ಕೇಳಿದ ತಕ್ಷಣ ಒಪ್ಕೊಂಡ್ಬಿಟ್ಟಿದ್ದಾರೆ. ಖುದ್ದಾಗಿ ನಿಂತು ಹೊಸದಾಗಿ ಪೇಯಿಂಟ್ ಮಾಡಿಸಿ ಬೀರು, ಟೇಬಲ್ಲು, ಕುರ್ಚಿ ಅಂತ ಆಫೀಸಿಗೆ ಎಲ್ಲಾ ತರಿಸಿ ಜೋಡಿಸಿಕೊಟ್ಟಿದ್ದಾರಲ್ಲ ನೋಡಿ. ಅವರಿಗೆ ನಮ್ಮ ಆಫೀಸಲ್ಲಿ ಒಳ್ಳೆ ಹುಡುಗಿನೇ ಜೋಡಿಸಿ ಕೊಟ್ರೆ ಆಯ್ತಲ್ವಾ?'' ಐಶ್ವರ್ಯಳ ಮಾತಿಗೆ ಕಲ್ಯಾಣಿ ನಗುತ್ತಾ, "ಎಲ್ಲಾ ಫೈಲುಗಳನ್ನು ಜೋಡಿಸ್ಯಾದ ಮೇಲೆ ಅದಕ್ಕೆ ಒಂದೊಂದು ಹೆಸರು ಕೊಡಬೇಕೆ ಹುಡುಗಿ" ಅಂದ್ರು. ‘‘ಹೌದು ಮೇಡಂ, ಈ ಹುಡುಗೀರ್ ಫೈಲಿಗೆ ಒಳ್ಳೆ ಹೆಸರೇ ಕೊಡಬೇಕು. ಐಶ್ವರ್ಯ ಅಂತ ಇಡಕ್ಕಾಗಲ್ಲ, ಜನ ನಾನೇ ಅಂತ ಕನ್ಫ್ಯೂಸ್ ಮಾಡ್ಬಿಡ್ತಾರೆ. ಮಾಧುರಿ ಅಂತ ಇಟ್ರೆ? ಬೇಡ ಬೇಡ ತುಂಬಾ ಓಲ್ಡ್ ಆಯಿತು. ಪ್ರಿಯಾಂಕಾ ಅಂತ ಇಟ್ರೆ ಚೆನ್ನಾಗಿಲ್ವಾ? ಈ ಹುಡುಗೀರ ಫೈಲ್ನಲ್ಲಿ ಎರಡನೇ ಮದುವೆಗೆ ಸಾಕಷ್ಟು ಜನರ ಲಿಷ್ಟಿದೆ. ಅವರನ್ನೆಲ್ಲ ಬೇರೆ ಫೈಲಿಗೆ ಹಾಕಿ ಹೇಮಮಾಲಿನಿ ಅಥವಾ ಕರೀನಾ ಅಂತ ಹೆಸರಿಡಬಹುದು. ಹಾಗೆ ಈ ಹುಡುಗರ ಎರಡನೇ ಮದುವೆ ಫೈಲ್ ಇದ್ಯಲ್ಲ ಅದಕ್ಕೆ ಧರ್ಮೇಂದ್ರನೋ, ಸೈಫ್ ಆಲಿಖಾನ್ ಅಂತನೋ ಇಡಬಹುದು. ಹೃತಿಕ್ ರೋಷನ್ ಹೆಸರು ಕೂಡ ಚೆನ್ನಾಗಿದೆ'' ಎನ್ನುತ್ತಾ ಎಲ್ಲಾ ಫೈಲ್‌ಗಳನ್ನು ಜೋಡಿಸುತ್ತಾ, "ಅರೆ ಮೇಡಂ ಹೇಳಿದ ಒಂದು ಸೀಕ್ರೆಟ್ ಫೈಲ್ ಕೂಡ ಇಲ್ಲೇ ಇದೆಯಲ್ಲ! ಅದನ್ನ ಎಲ್ರಿಗೂ ತೋರಿಸಬಾರದಂತೆ. ಅದರಲ್ಲಿ ತುಂಬಾ ಶ್ರೀಮಂತ ಮನೆಯವರದು ಹಾಗೂ ತುಂಬಾ ಸುಂದರವಾಗಿರುವ ಹುಡುಗಿಯರು ಮತ್ತು ದೊಡ್ಡ ದೊಡ್ಡ ಕೆಲಸದಲ್ಲಿರುವ ಹುಡುಗರ ಪಟ್ಟಿ ಮಾತ್ರ ಸೇರಿಸಬೇಕಂತೆ. ಇದನ್ನ ಆನ್ ಡಿಮ್ಯಾಂಡ್ ಮಾತ್ರ ಕೊಡಬೇಕಂತೆ. ಇದಕ್ಕೆ ಯಾರದಾದರೂ ಹಾಲಿವುಡ್ ತಾರೆಯರ ಹೆಸರೇ ಇಟ್ರೆ ಹೇಗೆ, ಅಂಜಲಿನ ಜೋಲಿ, ಬ್ರಾಡ್ಪಟ್

ಇತ್ಯಾದಿ...'' ಅಬ್ಬ ಇನ್ನು ಸಿನಿಮಾ ತಾರೆಯರ ಫೋಟೋಗಳನ್ನೆಲ್ಲ ತಂದು ಫೈಲ್ ಮೇಲೆ ಅಂಟಿಸಿಬಿಟ್ಟರೆ ಅರ್ಧ ಕೆಲಸ ಮುಗ್ದಂಗೆ ಅನ್ಕೊಂತ ಸುಸ್ತಾಗಿ ಕೂತುಕೊಂಡಳು.

ಸ್ವಲ್ಪ ಹೊತ್ತಿನಲ್ಲೇ ಫೋನುಗಳು ಬರಲು ಪ್ರಾರಂಭಿಸಿದವು "ಹಲೋ ಗಟ್ಟಿಮೇಳ, ನಮಸ್ತೆ ಮೇಡಂ ನಿಮ್ಮ ಪಾಂಪ್ಲೆಟ್ ಸಿಕ್ತು, ಅಡ್ರೆಸ್ಸಲ್ಲಿ ಕಲ್ಯಾಣಿ ಕೇಂದ್ರ ಅಂತ ಇದಿಯಲ್ಲ ಯಾವ ಕಲ್ಯಾಣಿ? ಪೇಟೆ ಬೀದಿಯಲ್ಲಿರುವ ಚಿಕ್ಕದೋ ಅಥವಾ ಕೋಟೆ ಹತ್ತಿರ ಇರೋ ದೊಡ್ಡ ಕಲ್ಯಾಣಿನೋ? ಕಲ್ಯಾಣಿ ಬಲಕ್ಕೋ ಅಥವಾ ಎಡಕ್ಕೋ? ನಿಮ್ಮ ಗಟ್ಟಿಮೇಳ ಇರೋದು?''

"ಅಯ್ಯೋ, ಅಯ್ಯೋ ಸಾರಿ, ಸಾರಿ, ಅದು ಕಲ್ಯಾಣಿ ಕೇಂದ್ರ ಅಲ್ಲ, ಕಲ್ಯಾಣ ಕೇಂದ್ರ. ನಮ್ಮ ಸಂಸ್ಥೆ ಡೈರೆಕ್ಟರ್, ಓನರ್ ಹೆಸರು ಕಲ್ಯಾಣಿ ಅಂತ, ಅದು ಸ್ವಲ್ಪ ತಪ್ಪಾಗಿದೆ ಅಷ್ಟೇ''.

"ಮೊದಲು ಬದಲಾಯಿಸ್ರಿ, ನಿಮಗೆ ಕನ್ನಡ ಬರಲ್ವಾ? ಕಲ್ಯಾಣ ಅಂದ್ರೆ ಮದುವೆ. ಕಲ್ಯಾಣಿ ಅಂದ್ರೆ ನೀರ್ ತುಂಬಿರೋ ಕೊಳ."

"ಈಗ್ಲೇ ಅದನ್ನ ಕರೆಕ್ಷನ್ ಮಾಡಿಸ್ತೀನಿ ಬಿಡಿ"

"ಏನ್ ಮಾಡಿಸ್ತಿರೋ, ಈ ಕಲ್ಯಾಣ, ಕಲ್ಯಾಣಿ ಎರಡು ಒಂಥರಾ ಒಂದೇನೆ ಅಂತ ಮದುವೆಯಾದ ಮೇಲೆನೇ ಗೊತ್ತಾಗೋದು" ಅವನು ಗೊಣಗುತ್ತಾ ಫೋನ್ ಕಟ್ ಮಾಡಿ ಇಡ್ತಿದ್ದಂಗೆ ಇನ್ನೊಂದು ಕಾಲು.

"ಮೇಡಂ ನಿಮ್ ಪಾಂಪ್ಲೆಟ್ಟು ನೋಡಿದ್ವಿ. ನಾವು ಆಲ್ ಇನ್ ಒನ್ ಕಂಪನಿಯಿಂದ. ನಿಮ್ಮ ಸಂಸ್ಥೆಯಲ್ಲಿ ಮದುವೆ ಫಿಕ್ಸ್ ಆದವರಿಗೆ ನಾವು ಮದುವೆಗೆ ಬೇಕಾದ ಅರೇಂಜ್ಮೆಂಟ್‌ಗಳನ್ನ ಮಾಡಿಕೊಡ್ತೀವಿ. ಚಪ್ರ, ವಾಲ್ಗ, ಕ್ಯಾಟರಿಂಗು, ಹೂವು, ಹಣ್ಣು, ಕಾಯಿ, ಪುರೋಹಿತರು. ಹನಿಮೂನ್ ಟ್ರಿಪ್ಪು ಎಲ್ಲಾನು... ನಮ್ಮ ಜೊತೆ ಕೈಜೋಡಿಸಿದರೆ ನಿಮಗೆ 20 ಪರ್ಸೆಂಟ್ ಕಮಿಷನ್ ಕೂಡ ಕೊಡ್ತೀವಿ.''

"ಹೋಲ್ಡನ್ ಹೋಲ್ಡನ್. ರೀ ಆಲ್‌ಇನ್ ಒನ್ ಕಂಪನಿ ಅವರೇ, ನಿಮ್ ಆಫರ್ ಚೆನ್ನಾಗಿದೆ. ನಮ್ ಡೈರೆಕ್ಟರ್ ಜೊತೆ ಮಾತಾಡಿ ತಿಳಿಸ್ತೀನಿ ಥ್ಯಾಂಕ್ಯು"

"ನೋಡ್ರಿ ರಾಜು, ನಮ್ ಗಟ್ಟಿ ಮೇಳ ಆಫೀಸ್ ಪ್ರಾರಂಭ ಆಗೋ ಮುಂಚೇನೆ ಆಫರ್ಸ್ ಕೊಡಕ್ಕೆ ಜನ ಶುರು ಮಾಡಿದ್ದಾರೆ." ಐಶ್ವರ್ಯ ಮಾತಿಗೆ ರಾಜು, ''ನಾವು ಒಂದು ಆಫರ್ ಕೊಟ್ರೆ ಹೇಗಿರುತ್ತೆ ಅಕ್ಕ?''

"ಯಾವ ತರ ಆಫರ್? ಅದೇ ಅಕ್ಕನ ಮದುವೆ ಆದರೆ ತಂಗಿ ಫ್ರೀ ಅಂತ ಮಾತ್ರ ಜೋಕ್ ಹೇಳ್ಬೇಡಿ" .

"ಅದಲ್ಲಾ ಅಕ್ಕವರೇ, ನಮ್ ಸಂಸ್ಥೆಯಲ್ಲಿ ಹೆಸರು ಹಚ್ಚಿ ಮದುವೆ ಮಾಡ್ಕೊಂಡ್ ಹುಡುಗ ಹುಡುಗಿಗೆ ನಾವೇ ಹನಿಮೂನ್ ಟ್ರಿಪ್ ಫ್ರೀ ಕೊಡ್ತೀವಿ ಅಂತ."

''ಅಲ್ರಿ ರಾಜು, ಅವರೇನು ಹನಿಮೂನಿಗೆ ಲಾಲ್ಬಾಗ್, ಕಬ್ಬನ್ ಪಾರ್ಕಿಗೆ ಹೋಗ್ತಾರೆನ್ರೀ? ಊಟಿ, ಮೈಸೂರು, ಕೊಡೆಕೆನಲ್, ಎಲ್ಲ ಈಗ ಹಳೆಯದಾಯಿತು. ಈಗೇನಿದ್ರೂ ಫಾರಿನ್ ಟ್ರಿಪ್ಪು. ಅವರು ಕೊಡೋ ರೂ. 10,000 ಮದುವೆ ಕಮಿಷನ್‌ಗೆ ಹನಿಮೂನ್ಗೆ ಬಟ್ಟೆ ಪ್ಯಾಕ್ ಮಾಡೋ ಕಿಟಗಬ್ಯಾಗಷ್ಟೇ ಕೊಡಬಹುದು. ತಾಳಿ, ಇನ್ನೊಂದು ಫೋನ್ ಬರ್ತಾ ಇದೆ ಈ ಸಾರಿ ನಾನೇ ತಗೊಳ್ತೀನಿ'' ಎಂದು ರಾಜಣ್ಣ ಫೋನ್ ಕೈಗೆತ್ತಿಕೊಂಡ ಅವನ ಸಂಭಾಷಣೆಯ ಈ ಭಾಗ ಕೇಳಿ. "ಹಲೋ ಹೌದು,

ಏನು ಎಲ್ಲಾ ವಿವರ ಫೋನಲ್ಲಿ ಹೇಳಕ್ಕಾಗಲ್ಲ. ಬೇಕಾದರೆ ಬರ್ಕೊಳ್ಳಿ, ಹೇಳ್ತೀನಿ. ಕೆಲಸದಲ್ಲಿರೋ ಹುಡುಗಿ ಬೇಕಾದರೆ ಒಂದನ್ನು ಒತ್ತಿ. ಉದ್ದಕ್ಕಿರೋ ಹುಡುಗಿ ಬೇಕಾದರೆ ಎರಡನ್ನು ಒತ್ತಿ. ಬೆಳ್ಳಗಿರೋ ಹುಡುಗಿ ಬೇಕಾದರೆ ಮೂರು ಒತ್ತಿ... ಏನು ಎರಡೇನೇ ಮದುವೆನಾ, ಹಾಗಾದ್ರೆ ಮೊದಲನೇ ಹೆಂಡ್ತಿ ಕತ್ತನ್ನ ಒತ್ತಿದ್ದೀರಾ ಹೇಗೆ?'' ರಾಜಣ್ಣನ ಕುಚೇಷ್ಟೆ ನೋಡಿ ನಗು ಬಂದರೂ ಗಂಭೀರವಾಗಿ ಐಶ್ವರ್ಯ ಅವನನ್ನು ಗದರಿಸಿದಳು. "ರೀ ರಾಜಣ್ಣ ಹಂಗೆಲ್ಲ ಮಾತಾಡಬೇಡಿ. ಫೋನ್ ಬಂದ್ರೆ ನನ್ನ ಕಡೆ ಕೊಡಿ. ನೋಡಿ ರಿಂಗ್ ಆಗ್ತಾಯಿದೆ, ಕೊಡಿ ಈ ಕಡೆ''

"ಹಲೋ ಗಟ್ಟಿಮೇಳ''. ''ಹೌದು, ನಮ್ ಹತ್ರ ದೀಪಿಕಾ, ಪ್ರಿಯಾಂಕ, ಹೇಮಮಾಲಿನಿ, ಹೃತಿಕ್ ರೋಷನ್ ಎಲ್ಲಾ ತರ ಫೈಲ್ ಗಳೂ ಇವೆ. ರಿಜಿಸ್ಟ್ರೇಷನ್ 1000 ರುಪಾಯಿ. ಮದುವೆ ಫಿಕ್ಸ್ ಆದರೆ 10,000 ಸರ್ವಿಸ್ ಚಾರ್ಜು. ಎಲ್ಲಾ ಕಂಪ್ಯೂಟರಲ್ಲಿ ಲೋಡ್ ಮಾಡಿದ್ದೇವೆ. ಏನು ಐಶ್ವರ್ಯ ಇಲ್ಲ ಅಂತ ಕೇಳ್ತಿದ್ದೀರಾ ಇದೀನಲ್ಲ ಇಲ್ಲೇ. ಈ ಬ್ಯುರೋ ನೋಡಿಕೊಳ್ಳುವ ಸೀಕ್ರೆಟರಿ ನನ್ನ ಹೆಸರೇನೆ ಐಶ್ವರ್ಯ. ವಯಸ್ಸು 22. ಸಾಕಾ ಇನ್ನೂ ಬೇಕಾ ? ನನ್ನ ಬಿಟ್ರೆ ನಮ್ ಮೇಡಂ ಇದಾರೆ. ಅವರಿಗೆ 35 ವರ್ಷ. ಇನ್ನು ಮದುವೆ ಆಗಿಲ್ಲ. ಅವರ್ ಹೆಸರು ಕಲ್ಯಾಣಿ." ಎನ್ನುತ ಫೋನ್ ಕಟ್ ಮಾಡದ್ಲು.

"ಅಯ್ಯೋ ರಾಜಣ್ಣ ಅದು ಯಾರೋ ಕೃಷ್ಣಪ್ಪ ಅಂತೆ, ಅವರಿಗೆ ಐಶ್ವರ್ಯ ಬೇಕಂತೆ. ಇಲ್ದೆ ಇದ್ರೆ ಕಲ್ಯಾಣಿ ಬೇಕಂತೆ."

"ಆ ಕೃಷ್ಣಪ್ಪ ಒಂದು ಪಕ್ಷ ಬೇರೆ ಯಾರೂ ಅಲ್ದೆ ಈ ಬಿಲ್ಡಿಂಗ್ ಓನರ್ ಆಗಿರಬಹುದು. ನಾಳೆ ಅವರೇ ಅಲ್ವಾ ಓಪನಿಂಗ್ ಸೆರ್ಮನಿಗೆ ಬರೋ ಚೀಫ್ ಗೆಸ್ಟ್. ನೀವು ಸ್ವಲ್ಪ ಯೋಚನೆ ಮಾಡಿ ಫೋನಲ್ಲಿ ಮಾತಾಡ್ಬೇಕಿತ್ತು ಅಕ್ಕ" .

"ಅಯ್ಯೋ ಸತ್ಯನಾಶ. ನನಗೆ ಗೊತ್ತಾಗ್ಲಿಲ್ಲ ರಾಜಣ್ಣ. ಏನೇನೋ ಒದರಿಬಿಟ್ಟಿದ್ದೀನಿ".

"ಹೋಗ್ಲಿ ಬಿಡಿ ಅಕ್ಕ, ನಮ್ ಕಲ್ಯಾಣ ಕೇಂದ್ರದಲ್ಲಿ ಕಲ್ಯಾಣಿ ಮೇಡಂದೇ ಮೊದಲ ಮದುವೆ ಆದರೆ ಹೆಂಗೆ ಅಕ್ಕ? ಅಂದ್ರೆ ಈ ಬಿಲ್ಡಿಂಗ್ ಓನರ್ ಕೃಷ್ಣಪ್ಪ ಅವರಿಗೂ ಇನ್ನೂ ಮದುವೆ ಆಗಿಲ್ಲ. ಇವರಿಬ್ಬರದೇ ಇವರಿಬ್ಬರದೇ ಒಂದು ಗಟ್ಟಿಮೇಳ ಆಗ್ಬಿಟ್ರೆ ಚೆನ್ನಾಗಿರುತ್ತೆ ಅಲ್ವಾ, ಅಕ್ಕ"

ಐಶ್ವರ್ಯ ಬಿಟ್ಟ ಬಾಯಿ ಬಿಟ್ಟಹಾಗೆ ರಾಜಣ್ಣನನ್ನೇ ನೋಡುತ್ತಾ ಸುಸ್ತಾಗಿ ಕೂತಳು.

***

ಸಿಂಹಾನ ಕೆಣಕಿದ ಕೋತಿ

– ಎಂ.ಎಸ್. ನರಸಿಂಹ ಮೂರ್ತಿ

ಕೆಲಸದ ಕೆಂಚಿ ಕಾಡುಪಾಪನ ಹಾಗೆ ಎಗರ್ತಾ ಕೆಲ್ಸಕ್ಕೆ ಬಂದಿದ್ಲು, ವಿಶಾಲುಗೆ ಆಶ್ಚರ್ಯವಾಯ್ತು…

"ಏನೇ ಕೆಂಚಿ ಇಷ್ಟು ಸಂತೋಷ ಪಡ್ತಾ ಇದ್ದೀಯಾ, ಏನು ಬೆಳಂ ಬೆಳಿಗ್ಗೇನೇ ರೊಮ್ಯಾನ್ಸಾ?"

"ಥೂ ಹೋಗಿ ಅಮ್ಮೋರೇ, ನನ್ ಗಂಡನಿಗೆಲ್ಲಿದೆ ಪುರಸೊತ್ತು, ನಿಮಗೆ ಕೋತಿ ಕಥೆ ಹೇಳೋದೈತೆ!"

"ಕೋತಿ ಕಥೆನಾ ಕೆಂಚಿ?" ವಿಶ್ವ ಕುತೂಹಲದಿಂದ ಕೇಳಿದ.

"ನಿಮ್ಮದೇ ಕತೆ ಇರಬೇಕು ಬಿಡಿ" ಎಂದು ಗಂಡನನ್ನು ರೇಗಿಸಿದಳು ವಿಶಾಲು.

"ಒಂದ್ ಕಾಡಲ್ಲಿ ಭಾರೀ ಸಿಂಹ ಕೂತಿತ್ತಂತೆ, ಯಾರ ತಂಟೆಗೂ ಹೋಗದ ಒಳ್ಳೆ ಜೆಂಟಲ್‌ಮ್ಯಾನ್ ಸಿಂಹ!"

"ಸಿಂಹದ ಹತ್ತಿರಕ್ಕೆ ಹೋದ್ಮೇಲೇ ಗೊತ್ತಾಗೋದು ಅದು ಗಂಟಲ್ ಮ್ಯಾನ್ ಆಗಿ ಗಂಟಲಿಗೆ ಬಾಯಿ ಹಾಕುತ್ತೆ ಅಂತ. ನಮ್ಮ ಲೀಡರ್‌ಗಳು ಹಸು ಥರ ಬಂದು ಓಟು ತಗೋತಾರೆ, ಗೆದ್ಮೇಲೆ ಕೆಲವರು ಸಿಂಹಗಳಾಗ್ತಾರೆ" ಎಂದ ವಿಶ್ವ.

"ಇಲ್ಲ ಸ್ವಾಮಿ, ಒಳ್ಳೇ ನಡತೆ ಸಿಂಹ".

"ನಮ್ಮ ಭಾರತಾಂಬೆಯ ವಾಹನವಾದ ಸಿಂಹ ಇರಬೇಕು, ಎಲ್ಲಾ ಫೋಟೋಗಳಲ್ಲಿ ಸೈಲೆಂಟಾಗಿ ನಿಂತಿರುತ್ತೆ" ಎಂದಳು ವಿಶಾಲು.

"ಕೇಳಕ್ಕ ಇಲ್ಲಿ, ಸಿಂಹ ಅದರ ಪಾಡಿಗೆ ಅದು ಸುಮ್ನೆ ಕೂತೈತೆ, ಪಕ್ಕದ ಕಾಡಿನಿಂದ ಒಂದು ಕೋತಿ ಬಂತಂತೆ. ಕೂತಿರೋ ಸಿಂಹನಾ ನೋಡಿ ಕೋತಿ ಕೆಣಕ್ತು! ಸಿಂಹದ ಹಿಂದೆ ಇದ್ದ ಕೆಲವು ಗುಳ್ಳೆ ನರಿಗಳಿಗೆ ಖುಷಿ ಆಯ್ತಂತೆ. ನಾವು ಮಾಡಬೇಕಾದ ಕೆಲಸ ಪಕ್ಕದ ಕಾಡಿನ ಕೋತಿ ಮಾಡ್ತಿದೆ ಅಂತ"

"ಕೋತಿಗೇನ್ ಬಂತು ದೊಡ್ಡ ರೋಗ? ತನ್ನ ಕಾಡಲ್ಲಿ ತಾನು ಇರೋದ್ ಬಿಟ್ಟು, ಸುಮ್ನೆ ಕೂತಿರೋ ಸಿಂಹಾನ ಕೆಣ್ಕೋಕ್ ಇಲ್ಲಿಗೆ ಯಾಕ್ ಬರಬೇಕು?" ಎಂದಳು ವಿಶಾಲು.

"ಕೆಣಕುತ್ತೆ ವಿಶಾಲು, 1947ರಲ್ಲಿ ದೇಶ ವಿಭಜನೆ ಆದಾಗ ನಮ್ಮ ಪಕ್ಕದ ಶತ್ರು ರಾಷ್ಟ್ರದವರು ನಮ್ಮನ್ನ ಕೆಣಕಿ ಪಿ.ಓ.ಕೆ.ಯ ಮೂರನೇ ಒಂದು ಭಾಗ ಕಿತ್‌ಕೊಳ್ಳಲಿಲ್ವಾ ಹಾಗೇ!" ಎಂದ ವಿಶ್ವ.

"ಇಲ್ಲಿ ಕೇಳ್ರಕ್ಕ, ಆಮೇಲ್ ಏನ್ ಆಯ್ತು ಗೊತ್ತಾ? ಆ ಕೋತಿ ಇನ್ನೊಂದ್ ಸಲ ಆ ಸಿಂಹದ ತಲೆ ಮೇಲೆ ಎಗರಿ ಮುಖ ಕೆರೆದು ಪಕ್ಕಕ್ಕೆ ಓಡಿ ಹೋಯ್ತು, ನರಿಗಳ ಕುಮ್ಮಕ್ಕು ಜಾಸ್ತಿ ಇತ್ತು" ಎಂದಾಗ ವಿಶಾಲುಗೆ ಸಿಟ್ಟಾಯ್ತು,

"ಲೇ ಕೆಂಚಿ, ಏನ್ ಬಂದಿದ್ಯೇ ಗ್ರಹಚಾರ ಕೋತಿಗೆ?"

“ಅಕ್ಕಾ, ಆ ಕೋತಿ ಸುಮ್ನಿದ್ರೂ ಸಿಂಹದ ಜೊತೆಗಿದ್ದ ಗುಳ್ಳೆ ನರಿಗಳು ಬಿಡ್ಲಿಲ್ಲ, ಕೆಣಕ್ತಾ ಇರು ಅಂತ ಸನ್ನೆ ಮಾಡ್ತಿತ್ತು, ಕೋತಿ ಸಿಂಹದ ಹಿಂದಿನಿಂದ ಬಂದು ಅದರ ಬೆನ್ನು ಪರಚ್ತು. ‘ಆ’ ಅಂತ ಸಿಂಹ ಬಾಯಿ ತೆರೆದು, ಒಂದೇ ಸಲಕ್ಕೆ ಗುಳಕ್ ಅಂತ ನುಂಗ್‌ಬಿಡ್ತಾ ಇತ್ತು, ಆದರೆ ನುಂಗ್ಲಿಲ್ಲ, ನೊಣ ತಿಂದು ಜಾತಿ ಕೆಡಬಾರದು ಅಂತ ಕೋತೀನ ಬಿಟ್ ಬಿಡ್ತು” ಎಂದಳು ಕೆಂಚಿ.

“ಸಿಂಹ ಒಳ್ಳೆ ಪ್ರಾಣಿಗಳ್ನ ಮಾತ್ರ ತಿನ್ನುತ್ತೆ, ಕೋತಿಗಳ್ನ ತಿನ್ನೋದಿಲ್ಲ, ಗಾದೆ ಕೇಳಿಲ್ವೇ, ‘ಹಸಿದ್ರೂ ಹುಲಿ ಹಲ್ಲ ತಿನ್ನೋಲ್ಲಾ ಅಂತ”.

“ಪಕ್ಕದ ಕಾಡಿನ ಕೋತಿಗೆ ಇಲ್ಲಿನ ಲೋಕಲ್ ನರಿಗಳು ಮತ್ತೆ ಕುಮ್ಮಕ್ಕು ಕೊಟ್ಟವು, ಖುಷಿಯಾದ ಕೋತಿ ಎಗರಿ ಸಿಂಹದ ಬೆನ್ನಿನ ಮೇಲೆ ಕೂತು ಸವಾರಿ ಮಾಡೋಕೆ ಶುರು ಮಾಡಿತ್ತು.

“ಗೊತ್ತಾಯ್ತು ಬಿಡು, 1999ರಲ್ಲಿ ಕಾಲು ಕೆರೆದು ಕಾರ್ಗಿಲ್ ಗಲಾಟೆ ಮಾಡಿದ್ರಲ್ಲ ಹಂಗೆ” ಎಂದ ವಿಶ್ವ.

“ಸಿಂಹ ಅಂತ ಗೊತ್ತಿದ್ದೂ ಅದರ ಸುದ್ದಿಗೆ ಕೋತಿ ಹೋಗಬಾರ್ದಿತ್ತು” ಎಂದಳು ವಿಶಾಲು.

“ಎಷ್ಟೇ ಆಗಲಿ ಕೋತಿ ಬುದ್ಧಿ ಕಣೇ ವಿಶಾಲು! ಅದೆಲ್ಲಿ ಬಿಡುತ್ತೆ, ಅದು ಮತ್ತೆ ಮತ್ತೆ ರೇಗ್ಸೋಕೆ, ಕಚ್ಚೋಕೆ ಬರ್ತ್ತಾನೇ ಇರುತ್ತೆ” ಎಂದ ವಿಶ್ವ.

“ಕೋತಿಗೆ ಸಿಟ್ಟು ಬಂದು ಪಕ್ಕದಲ್ಲಿ ಕಾಣ್ತಿದ್ದ ಸ್ಮಶಾನಕ್ಕೆ ಹೋಗಿ ಉರಿಯುತ್ತಿದ್ದ ಕೊಳ್ಳಿ ತಂದು ಸಿಂಹದ ಮೀಸೆ ಸುಡ್ತು, ಆಗ ಸಿಂಹ ಕೋತೀನ ಒದ್ದು ಓಡ್ಸಿ ಇನ್ನೊಂದಪ ಈ ಕಡೆ ಬಂದ್ರೆ ನಿನ್ ತಿಥಿ ಅಂತು”

“ವಿಶಾಲು, ನನಗೆ ತಾಜ್ ಹೋಟೆಲ್‌ಗೆ ಬೆಂಕಿ ಬಿತ್ತಲ್ಲ, ಆ ಘಟನೆ ನೆನಪಾಗ್ತಿದೆ!” ಎಂದ ವಿಶ್ವ.

“ತುಂಬಾ ಒಳ್ಳೆದಾಯ್ತು ಹೆದರಿದ ಕೋತಿ ಬಾಯ್ ಮುಚ್ಕೊಂಡ್ ವಾಪಸ್ ಹೋಯ್ತಾ?”

“ಇಲ್ಲ ಅಕ್ಕ, ಮತ್ ತಿರುಗಾ ತೊಂದ್ರೆ ಕೊಡೋಕೆ ಅಂತ್ಹೇಳಿ ಹಿಂದಗಡೆಯಿಂದ ಬಂದು ಸಿಂಹದ ಬಾಲ ಎಳೆಯಿತು”

“ಏನ್ ಹೇಳ್ತಾ ಇದ್ದೀಯಾ ಕೆಂಚಿ, ಸಿಂಹದ ಬಾಲನಾ ಕೋತಿ ಎಳೆಯೋದಾ?”

“ವಿಶಾಲು, 2019ರಲ್ಲಿ ಬಾಲ್ಕೋಟ್‌ನಲ್ಲಿ ಹೀಗೇ ಆಗಿದ್ದು. ಆಗ ನಾವು ಜಾಡ್ಸಿ ಒದೀಲಿಲ್ವಾ?”

“ಮುಂದೆ ಕೇಳಿ ಅಕ್ಕ, ಒಂದಿನ ಹೆಂಗಸರು, ಮಕ್ಕಳು ಪ್ರವಾಸಕ್ಕೆ ಹೋಗಿದ್ರಂತೆ, ಅವರೆಲ್ಲ ಬಾಳೆಹಣ್ಣು, ಕಡ್ಲೆಕಾಯಿ ಇಟ್ಕೊಂಡಿದ್ರೆ ಕೋತಿ ಅದನ್ನೆಲ್ಲ ಕಿತ್ತುಕೊಂಡು ಎಲ್ಲರ ಮೇಲೂ ದಾಳಿ ಮಾಡ್ತಂತೆ”

“ಕಡ್ಲೆಕಾಯಿ, ಬಾಳೆಹಣ್ಣು ಕಿತ್ಕೊಂಡಿದ್ ಓಕೆ, ದಾಳಿ ಮಾಡಿದ್ ಯಾಕೆ?” ವಿಶಾಲು ಕೇಳಿದಳು.

“ಜನಕ್ಕೆ ವಿಪರೀತ ಗಾಯ ಆಗಿ 26 ಮಂದಿ ಸತ್ತೇ ಹೋದ್ರಂತೆ” ಎಂದಳು ಕೆಂಚಿ.

“ಕೋತಿ ಹುಣ್ಣು ಬ್ರಹ್ಮ ರಾಕ್ಷಸ ಅಂತಾರೆ. ಒಂದು ಹಾಳ್ ಕೋತಿ ಇಷ್ಟೊಂದೆಲ್ಲ ತೊಂದ್ರೆ ಮಾಡುತ್ತಾ?” ಕೇಳಿದಳು ವಿಶಾಲು.

“ಕಳೆದ ತಿಂಗಳು ಪಹಾಲ್ಗಾಮ್‌ನಲ್ಲಿ ಏನ್ ಆಯ್ತು ವಿಶಾಲು? ಅದನ್ನ ನೆನಪ್ ಮಾಡ್ಕೋ, ಕೋತಿಗೆ ಲೋಕಲ್ ನರಿಗಳ ಸಪೋರ್ಟ್ ಸಿಗುತ್ತೆ, ಕೋತಿಗೆ ನಮ್ಮಲ್ಲಿ ಕೆಲವರು ಹೆಂಡ ಕುಡಿಸ್ತಾರೆ, ಮೈ ಮೇಲೆ ದೆವ್ವ ಬಿಡ್ತಾರೆ”

“ಈ ಥರ ಆದ್ರೆ ಏನ್ರೀ ಮಾಡೋದು? ಕೋತೀನ ಓಡ್ಸೋಕೆ ಯಾರಿಂದ್ಲೂ ಆಗ್ತಿಲ್ವಾ?”

“ಅಕ್ಕ ಆಮೇಲ್ ಏನ್ ಆಯ್ತು ಗೊತ್ತಾ? ಸಿಂಹಕ್ಕೆ ಭಯಂಕರ ಸಿಟ್ಟು ಬಂತು, ಕೋತಿ ಬಾಲನ ಹಿಡಿದು ಎತ್ತಿ ಕೋತೀನ ಗಿರ್ ಗಿರ್ ಅಂತ ತಿರುಗಿಸ್ತು”

“ಹಾಗಿದ್ರೆ ಕೋತಿ ಸತ್ತುಹೋಗಿರುತ್ತೆ!”

“ಇಲ್ಲಾ ಅಕ್ಕ ಸಾಯಿಲಿಲ್ಲ ಅದು, ಬಾಲ ಕಿತ್ಕೊಂಡ್ ಬಂದಾಗ ಕೋತಿ ಹಾರಿ ಎಲ್ಲೋ ದೂರದ ಕುಂಟೇಲಿ ಬಿತ್ತಂತೆ, ಕೋತಿ ಬಾಲ ಸಿಂಹದ ಕೈಲಿತ್ತು!” ಎಂದಾಗ ವಿಶ್ವನಿಗೆ ಖುಷಿ ಆಯ್ತು.

“ಒಂದು ಕೋತಿ ಸತ್ರೆ ಬೇರೆ ಫ್ರೆಂಡ್ ಕೋತಿ ಬರುತ್ತೆ, ಬಾಲ ಕತ್ತರಿಸಿ ಹಾಗೇ ಕಳಿಸಿದ್ರೆ ಉಳಿದ ಕೋತಿಗಳಿಗೆ ಭಯ ಇರುತ್ತೆ”. ಎಂದಳು ವಿಶಾಲು.

“ಕೆಂಚಿ, ನೀನು ಭವಿಷ್ಯ ಹೇಳ್ತಿದ್ದೀಯ, ನೀನು ಹೇಳಿದ್ದು ನಿಜ ಆದ್ರೆ ನಿಂಗೆ ಇಂಕ್ರಿಮೆಂಟ್ ಕೊಡ್ತೀನಿ” ಎಂದು ವಿಶ್ವ ನಕ್ಕಾಗ ವಿಶಾಲು ಅರ್ಥ ಮಾಡಿಕೊಂಡಳು.

“ಹೌದು ಕೆಂಚಿ, ನೀ ಹೇಳಿದ್ದು ನಿಜ ಆಗಿ ಕೋತಿ ಬಾಲ ಕಟ್ಟಾದ್ರೆ ನಿಂಗೊಂದು ಸಿಲ್ಕ್ ಸೀರೆ ಕೊಡಿಸ್ತೀನಿ" ಎಂದಳು ವಿಶಾಲು,

ಕೆಂಚಿ ‘ಹ್ಞಾಂ’ ಎಂದು ಆಶ್ಚರ್ಯದಿಂದ ಬಾಯಿ ತೆರೆದು “ಸಿಂಹಕ್ಕೆ ಜೈ” ಎಂದಳು.

– – ಕಟ್ – –

***

ಮನೆಯೇ ಶಾಲೆ

- ಜೆ.ಎನ್. ಜಗನ್ನಾಥ್

ಹುಚ್ಚರಿಗೆ ಕೊಂಬಿರುವುದಿಲ್ಲ.

ನಾವು ತಪ್ಪು ಮಾಡಿದಾಗ ನಮ್ಮನ್ನು ಹಿರಿಯರು ಸರಿದಾರಿಗೆ ತರುವುದು ವಾಡಿಕೆ. ಕೆಲವರು ಬೈಯುವುದು, ಕೆಲವರು ಹೊಡೆಯುವುದು, ಕೆಲವರು ತಿಳಿಹೇಳುವುದು. ಕೆಲವರು ಉದಾಹರಣೆ ಕೊಟ್ಟು ತಿಳಿಸಿದರೆ, ಮತ್ತೆ ಕೆಲವರು ಲಗ್ನಪತ್ರಿಕೆ ಚಿತ್ರದ ನರಸಿಂಹರಾಜುವಿನಂತೆ ಗಾದೆ ಉದಾಹರಿಸುವುದು.

ಕೆಲವರು ಒಂದು ಕಥೆ ಹೇಳಿ ಅದರಿಂದಲೇ ನಮ್ಮ ತಪ್ಪು ತೋರಿಸುವುದು. ನಮ್ಮಮ್ಮ ಅನೇಕ ವೇಳೆ ವಿಕ್ರಂ ಬೇತಾಳ, ವಿಷ್ಣು ಶರ್ಮನ ಪಂಚತಂತ್ರ, ಮಯೂರದ ಕಥೆ ಹೇಳಿ ತಿಳಿಹೇಳುವುದಿತ್ತು.

ನಾವು ನಾಲ್ವರು ಅಣ್ಣ ತಮ್ಮಂದಿರು. ನಮಗೆ ಹೊಡೆದರೆ ಅಮ್ಮನಿಗೇ ನೋವಾಗುತ್ತಿತ್ತು. ಜಗಳ, ಹೊಡೆದಾಟ ನಮ್ಮ ಬಾಲ್ಯದ ಆಟ. ಅನೇಕ ವೇಳೆ ಬಿದ್ದು ಪೆಟ್ಟು ಮಾಡಿಕೊಳ್ಳುತ್ತಿದೆವು. ಅಮ್ಮ ಅಳುತಿದ್ದಳು. ಗಾಯ ಮಾಗಿದಾಗ ಕಲೆ ಅಥವಾ ಗುರುತು ಬಹಳ ದಿನ ಉಳಿದುಬಿಡುತ್ತಿತ್ತು. ನಮ್ಮಪ್ಪ ಒಮ್ಮೆ, ಏನೋ ಇಷ್ಟೊಂದು ಆಭರಣ ನಿನ್ನ ಮೈಮೇಲೆ ಎನ್ನುತ್ತಿದ್ದರು. ಗಾಯದ ಗುರುತು ಆಭರಣ.

ನಾವು ಹುಡುಗಾಟದಲ್ಲಿ ಒಮ್ಮೊಮ್ಮೆ ಹುಚ್ಚು ಹುಚ್ಚಾಗಿ ಬೈಸಿಕಲ್ ಓಡಿಸುತ್ತಿದ್ದೆವು. ಒಮ್ಮೆ ನನ್ನಮ್ಮ, ಹುಚ್ಚರಿಗೆ ಕೊಂಬು ಇರುವುದಿಲ್ಲ. ಹೀಗೆಲ್ಲ ಆಡಿದರೆ ಹುಚ್ಚ ಎನ್ನುತ್ತಾರೆ. ನೋಡಿದರೆ ಇವನು ಹುಚ್ಚ ಎಂದು ಗುರುತಿಸಲಾಗಲ್ಲ. ನಾವಿರುವ ರೀತಿ, ನಮ್ಮ ನಡೆ ನುಡಿ ನೋಡಿ ಜನ ಹುಚ್ಚ ಎನ್ನುತ್ತಾರೆ ಎಂದು ತಿಳಿಸಿದಳು.

ನಾನು ಯೋಚಿಸಿದೆ. ಹೌದು. ಮೆಳ್ಳಗಣ್ಣ, ಕುಂಟ, ಇವೆಲ್ಲ ನೋಡಿದರೆ ಗೊತ್ತಾಗುತ್ತೆ. ರಾಶಿಯವರು ತಿಳಿಸಿದ ಅನೇಕ ರೀತಿಯ ಹುಚ್ಚರು, ತ್ರಿವೇಣಿ ಚಿತ್ರಿಸಿರುವ ಮನೋರೋಗಿಗಳು, ಯಾರೂ ನೋಡಿದರೆ ಹುಚ್ಚರೆಂದು ಗೊತ್ತಾಗುವುದಿಲ್ಲ.

'ಹುಚ್ಚರಿಗೆ ಕೊಂಬಿರುವುದಿಲ್ಲ. ನೋಡಿದ ತಕ್ಷಣ ಗುರುತಿಸಲು ಆಗುವುದಿಲ್ಲ' –ಈಗಲೂ ನಾನು ಅನೇಕ ಬಾರಿ ನನ್ನಮ್ಮನ ಮಾತು ನೆನಪಿಸಿಕೊಳ್ಳುತ್ತೇನೆ. ತಪ್ಪು ಮಾಡಿದಾಗ ಮನದಟ್ಟು ಮಾಡುವುದು, ತಿದ್ದುವುದು ಒಂದು ಕಲೆ. ಅದು ಮನ ಮುಟ್ಟಬೇಕು, ಮನ ಕದಡಬೇಕು, ಮನ ಪರಿವರ್ತಿಸಬೇಕು. ಅದಕ್ಕೆ ಪ್ರಾಮಾಣಿಕ ಸಲಹೆ, ಸಮಯೋಚಿತ ನುಡಿ, ಅರ್ಥಪೂರ್ಣ ಉದಾಹರಣೆ ಮುಖ್ಯ.

ನಾನು ಐ ಐ ಎಂ ನಲ್ಲಿ ಕಲಿಯದಿದ್ದದ್ದು ಮನೆಯಲ್ಲಿ ಕಲಿತೆ.

ಮನೆಯೇ ಮೊದಲ ಪಾಠ ಶಾಲೆ. ಅಮ್ಮನೇ ಮೊದಲ ಗುರು.

***

ಒಂದೇ ಬೀಸಿಗೆ ಎರಡು ಹಣ್ಣು

– ಶೀಲಾ ಅರಕಲಗೂಡು

ನಮ್ಮ ಭಾರತ ದೇಶ ಇಡೀ ವಿಶ್ವದಲ್ಲಿಯೇ ಒಂದು ವಿಶಿಷ್ಟ ಹಾಗೂ ವಿಭಿನ್ನ ದೇಶವಾಗಿ ಗುರುತಿಸಿಕೊಂಡಿದೆ. ಭಾರತದಲ್ಲಿರುವಷ್ಟು ವೈವಿಧ್ಯತೆ ಮತ್ತಾವ ದೇಶದಲ್ಲಿಯೂ ಇರಲಾರದು. ಈ ವೈವಿಧ್ಯತೆ ಕೇವಲ ಒಂದು ವಿಷಯದಲ್ಲಲ್ಲ, ಹಲವಾರು ವಿಷಯಗಳಲ್ಲಿದೆ. ಭಾಷೆ, ವೇಷ-ಭೂಷಣ, ಜಾತಿ-ಮತ, ಸಂಸ್ಕೃತಿ, ಹಬ್ಬ-ಹರಿದಿನ, ಭೂವೈವಿಧ್ಯ ಇತ್ಯಾದಿ ವೈವಿಧ್ಯತೆಗಳು ದೇಶಕ್ಕೆ ವಿಶಿಷ್ಟ ಸೊಬಗನ್ನಿತ್ತಿವೆ. ಬಗೆಬಗೆಯ ಭಕ್ಷ್ಯಗಳಿಂದೊಡಗೂಡಿ ಹೇಗೆ ಮೃಷ್ಟಾನ್ನ ಭೋಜನ ವಾಗುವುದೋ, ಅದೇ ರೀತಿಯಲ್ಲಿ ನಮ್ಮ ದೇಶ ಈ ವೈವಿಧ್ಯತೆಯಿಂದ ಸಮೃದ್ಧ ಭಾರತವೆನಿಸಿದೆ. ಇದು ನಮ್ಮ ದೇಶದ ಒಂದು ದೊಡ್ಡ ಶಕ್ತಿಯೂ ಹೌದು. ಆದರೆ, ಈ ವೈವಿಧ್ಯತೆಯು ಕೆಲವು ಸಮಸ್ಯೆಗಳನ್ನೂ ಹುಟ್ಟುಹಾಕುತ್ತದೆ. ಈ ಸಮಸ್ಯೆಗಳ ಕಾರಣದಿಂದಾಗಿ ಒಳಜಗಳಗಳು, ವಾದ-ವಿವಾದಗಳು, ರಾಜ್ಯ-ರಾಜ್ಯಗಳ ನಡುವೆ ಸಂಘರ್ಷ ಇತ್ಯಾದಿಗಳು ಹುಟ್ಟಿಕೊಂಡಿವೆ. ಇವುಗಳನ್ನು ಪರಿಹರಿಸುವ ಪ್ರಯತ್ನಗಳಲ್ಲಿಯೇ ಸಾಕಷ್ಟು ಶಕ್ತಿ, ಸಮಯ ವ್ಯರ್ಥವಾದರೂ ಸಮಸ್ಯೆಗಳ ಪರಿಹಾರ ಇಂದಿಗೂ ಕಂಡುಬಂದಿಲ್ಲ.

ಭಾರತದ ಸಮಸ್ಯೆಗಳ ಮೂಲಭೂತ ಕಾರಣವೇನೆಂದರೆ ಜನರಲ್ಲಿ ಐಕ್ಯತಾ ಭಾವ ಕಡಿಮೆ ಇರುವುದು ಹಾಗೂ ರಾಷ್ಟ್ರಪ್ರಜ್ಞೆ ಜನರ ಅಂತರಾಳದಲ್ಲಿ ಮೂಡದಿರುವುದು ಎಂದು ನನ್ನ ಭಾವನೆ. ಹಾಗಾಗಿ ಸಮಸ್ಯೆಗಳ ಮೂಲಕ್ಕೆ ಹೋಗಿ, ಪರಿಹಾರ ಹೆಚ್ಚು ಸಮಯವನ್ನು ಬೇಡಿದರೂ, ಆ ನಿಟ್ಟಿನಲ್ಲಿ ಇಂದಾದರೂ ಹೆಜ್ಜೆ ಇಟ್ಟಲ್ಲಿ ಮುಂದೊಂದು ಕಾಲಕ್ಕೆ ದೇಶ ಕೆಲ ಸಮಸ್ಯೆ ಗಳಿಂದಾದರೂ ಹೊರಬರಬಹುದೇನೋ ಎಂಬ ಆಶಾ ಭಾವನೆ ನನಗೆ.

ಬಹು ಕಾಲದಿಂದ ನಮ್ಮ ದೇಶವನ್ನು ಕಾಡುತ್ತಿರುವ ಎರಡು ಸಮಸ್ಯೆಗಳ ಕುರಿತು ನಾನಿಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಆ ಎರಡೂ ಸಮಸ್ಯೆಗಳನ್ನು ಒಂದೇ ಪ್ರಯೋಗದಿಂದ ಪರಿಹಾರ ಮಾಡಬಹುದು ಎಂಬ ಆಲೋಚನೆ ನನ್ನಲ್ಲಿ ಮೂಡಿದ್ದು ಅದನ್ನೀಗ ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತಿದ್ದೇನೆ.

ಎರಡು ಮುಖ್ಯ ಸಮಸ್ಯೆಗಳು ಯಾವುವು ಎಂದರೆ –

೧. ಜನರಲ್ಲಿ ರಾಷ್ಟ್ರ ಪ್ರಜ್ಞೆ, ದೇಶ ಪ್ರೇಮ ಬಾಲ್ಯದಿಂದಲೇ ಸಾಕಷ್ಟು ಮೂಡಿಸದಿರುವುದು.

ನಮ್ಮ ದೇಶದ ಸಾಂಸ್ಕೃತಿಕ, ಪೌರಾಣಿಕ, ಐತಿಹಾಸಿಕ, ಆಧ್ಯಾತ್ಮಿಕ, ಶೈಕ್ಷಣಿಕ ಇತ್ಯಾದಿಗಳ ಹಿರಿಮೆ ಗರಿಮೆಗಳನ್ನು ನಾವು ಅರಿಯದೇ ಹೋಗಿದ್ದೇವೆ. ಅಥವಾ ನಮಗೆ ನಿಜ ಸ್ಥಿತಿ ತಿಳಿದೇ ಇಲ್ಲ ಎಂದರೂ ತಪ್ಪಾಗದು. ಅದಕ್ಕೆ ಬಹು ಮುಖ್ಯ ಕಾರಣವೆಂದರೆ, ನಮ್ಮ ಈಗಿನ ಶಿಕ್ಷಣ ಪದ್ಧತಿ. ದೇಶದ ಹಿರಿಮೆಯ ಬಗ್ಗೆ, ಅಸ್ಮಿತೆಯ ಗರಿಮೆಯನ್ನು ತಿಳಿಸುವಂತಹ ಶಿಕ್ಷಣ ಕೊಡುತ್ತಲೇ ಇಲ್ಲ.

೨. ಭಾಷಾ ಗೊಂದಲ – ಇಡೀ ರಾಷ್ಟ್ರವನ್ನು ಬೆಸೆಯುವಂತಹ ಒಂದು ಭಾಷೆ ಇರದಿರುವುದು.

ರಾಷ್ಟ್ರ ಭಾಷೆ ಯಾವುದಿರಬೇಕು ಎನ್ನುವ ಚರ್ಚೆ, ವಿವಾದಗಳು ನಾನು ಚಿಕ್ಕವಳಾಗಿದ್ದಾಗಿನಿಂದಲೂ ನೋಡುತ್ತಲೇ ಬರುತ್ತಿದ್ದೇನೆ. ಈ ವಿಷಯದಲ್ಲಿ ಯಾವುದೇ ಒಂದು ತೀರ್ಮಾನಕ್ಕೆ ಬರಲು ದೇಶಕ್ಕೆ ಸಾಧ್ಯವಾಗುತ್ತಿಲ್ಲ.

ಮೇಲೆ ಹೇಳಿದ ಎರಡೂ ಸಮಸ್ಯೆಗಳಿಗೆ ಸ್ಥೂಲವಾಗಿ ಕಾರಣಗಳನ್ನು ಅವಲೋಕಿಸಿ, ನಂತರ ನನಗೆ ಅನ್ನಿಸುತ್ತಿರುವ ಪರಿಹಾರದ ಬಗ್ಗೆ ತಿಳಿಸುವೆ.

ಮೊದಲ ಸಮಸ್ಯೆಯಾದ ರಾಷ್ಟ್ರಪ್ರಜ್ಞೆ ಹಾಗೂ ದೇಶಪ್ರೇಮದ ಕೊರತೆ ಬಗ್ಗೆ ಅವಲೋಕಿಸೋಣ.

ನಮ್ಮಲ್ಲಿ ಮೊದಲು ಗುರುಕುಲ ಪದ್ಧತಿಯ ಶಿಕ್ಷಣವಿತ್ತು. ಜ್ಞಾನಿಗಳಾದ ಗುರುಗಳ ಮುಖೇನ ವಿದ್ಯಾರ್ಥಿಗಳಿಗೆ ನೀಡಬೇಕಾದ ಒಳ್ಳೆಯ ಶಿಕ್ಷಣ ನೀಡಲಾಗುತ್ತಿತ್ತು. ಆಗಿನ ವಿದ್ಯಾರ್ಥಿಗಳಿಗೆ ದೇಶದ ಬಗೆಗಿನ ಜ್ಞಾನ ಹಾಗೂ ಜೀವನದ ಬಗ್ಗೆ ಪರಿಜ್ಞಾನ ಸಮರ್ಪಕವಾಗಿತ್ತು. ಆದರೆ ಬ್ರಿಟಿಷರ ಆಳ್ವಿಕೆಯಲ್ಲಿ, ನಮಗೆಲ್ಲ ತಿಳಿದಿರುವ ಹಾಗೆ, ಲಾರ್ಡ್ ಮೆಕಾಲೆ ಚಿಂತನೆಯಂತೆ, ನಮ್ಮ ಶಿಕ್ಷಣದ ಬೇರನ್ನೇ ಅಲುಗಾಡಿಸುವಂತಹ, ತನ್ಮೂಲಕ ದೇಶದ ಅಸ್ಮಿತೆಯನ್ನೇ ಜನರ ಮನಸ್ಸಿನಿಂದ ಅಳಿಸಿ ಹಾಕುವಂತಹ ಬದಲಾವಣೆ ಮಾಡಲಾಯಿತು. ಇಂಗ್ಲೀಷ್ ಭಾಷೆಯನ್ನು ರತ್ನಗಂಬಳಿ ಹಾಸಿ ಸ್ವಾಗತಿಸಲಾಯಿತು. ಸ್ವಾತಂತ್ರ್ಯಾನಂತರವಂತೂ ಕಲಿಸುತ್ತಿದ್ದ ವಿಷಯಗಳಲ್ಲಿ ನಮ್ಮ ವೈಫಲ್ಯವನ್ನೇ ಎತ್ತಿ ತೋರಿಸುವಂತಹ ಪಾಠಗಳನ್ನು ತುಂಬಲಾಯಿತು. ನಾವು ಕೂಡಾ ಅದನ್ನೇ ಕಲಿತು ನಮ್ಮತನವನ್ನೇ ಮರೆತು, ಪಾಶ್ಚಿಮಾತ್ಯ ದೇಶಗಳನ್ನೇ ಅನುಸರಿಸುತ್ತ, ಅದರಲ್ಲಿಯೇ ಸಾರ್ಥಕತೆ ಇದೆ ಎಂದು ಭಾವಿಸತೊಡಗಿದೆವು. ಹೀಗಿರುವಾಗ ದೇಶಪ್ರೇಮ ಬರುವುದಾದರೂ ಹೇಗೆ? ಹಲವು ಸಾವಿರ ವರ್ಷಗಳ ಹಿಂದಿನ ವೇದ ಕಾಲದಿಂದ ನಮ್ಮ ದೇಶದಲ್ಲಿ ಬೆಳೆದು ಬಂದಿರುವ ವಿಸ್ತೃತ ಜ್ಞಾನ ಭಂಡಾರವನ್ನು ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಹೆಕ್ಕಿ ಹೆಕ್ಕಿ ಇಂದಿಗೂ ಹೊರ ತೆಗೆಯುತ್ತಿದ್ದಾರೆ. ನಮಗೋ ಸಂಸ್ಕೃತವೇ ಬರದು. ವಿದೇಶಗಳ ವಿಜ್ಞಾನಿಗಳು, ಶಾಸ್ತ್ರಜ್ಞರು ನಮ್ಮ ದೇಶದ ಗ್ರಂಥಗಳನ್ನು ಅಭ್ಯಾಸ ಮಾಡಿ ಅದರ ಶ್ರೇಷ್ಠ ವಿಷಯಗಳ ಬಗ್ಗೆ ಬರೆದಾಗ ಮಾತ್ರ ಒಪ್ಪುವಂಥ ಗುಲಾಮಿ ಮನೋಸ್ಥಿತಿ ನಮ್ಮದು. ನಮ್ಮವರೇ ಹೇಳಿದರೆ ಅದನ್ನು ಒಪ್ಪುವುದಿರಲಿ, ಹೀಯಾಳಿಸಿ ಮಾತನಾಡುವವರು ನಾವು. ವಿದೇಶೀ ಠಸ್ಸೆ ಬಿದ್ದರೆ ಮಾತ್ರ ಅದಕ್ಕೊಂದು ಗೌರವ. ಇಂತಹ ಮನೋಭಾವ ಹೋಗಲಾಡಿಸಿ ನಮ್ಮ ಸ್ವತ್ವವನ್ನು ಕಂಡುಕೊಳ್ಳುವ ಬಗ್ಗೆ, ಆತ್ಮಗೌರವ ಹೆಚ್ಚಿಸಿಕೊಳ್ಳುವುದರ ಬಗ್ಗೆ ಆಲೋಚಿಸಲೇಬೇಕಲ್ಲವೇ?

ಇನ್ನು ಎರಡನೆಯ ಸಮಸ್ಯೆಗೆ ಬರುವುದಾದರೆ, ಅದು ರಾಷ್ಟ್ರ ಭಾಷೆಯ ಪ್ರಶ್ನೆ. ಬಹುಭಾಷಾ ದೇಶವಾದ ಭಾರತದಲ್ಲಿ ರಾಷ್ಟ್ರ ಭಾಷೆಯ ಆಯ್ಕೆ ಬಹಳ ಕಷ್ಟ. ಸಹಜವಾಗಿಯೇ ಎಲ್ಲ ರಾಜ್ಯಗಳಿಗೂ ತಮ್ಮ ತಮ್ಮ ರಾಜ್ಯ ಭಾಷೆ ಮಾತೃಭಾಷೆಯಾಗಿದ್ದು, ಅದರ ಮೇಲೆ ಪ್ರೀತಿ ಹೆಚ್ಚು. ಇಂಗ್ಲೀಷ್ ಕಲಿಯದಿದ್ದರೆ ಬದುಕಿನಲ್ಲಿ ಮುಂದುವರೆಯಲು ಸಾಧ್ಯವೇ ಇಲ್ಲ ಎಂಬ ನಂಬಿಕೆ ಇರುವುದರಿಂದ ಇಂಗ್ಲೀಷನ್ನು ಬಿಡುವುದು ಸಾಧ್ಯವಿಲ್ಲದ ಮಾತು. ಈ ಎರಡು ಭಾಷೆಗಳ ಜೊತೆಗೆ ಮೂರನೆಯ ಭಾಷೆ ಇಡೀ ರಾಷ್ಟ್ರಕ್ಕೆ ಒಂದೇ ಆಗಿರಬೇಕೆಂಬ ಚಿಂತನೆ ಸರಿಯೇ ಹೌದು. ಅದರ ಮೂಲಕವೇ ರಾಷ್ಟ್ರದ ಒಗ್ಗಟ್ಟು ಸಾಧ್ಯ. ಆದರೆ ಯಾವ ಭಾಷೆಯನ್ನು ಭಾರತದ ಅಷ್ಟೂ ಮಂದಿ ತಮ್ಮದು ಎಂದು ಹೇಳಿಕೊಳ್ಳಲು ಸಾಧ್ಯ? ಹಿಂದಿ ಸಾಕಷ್ಟು ರಾಜ್ಯಗಳಲ್ಲಿ ಮಾತೃಭಾಷೆಯಾಗಿದ್ದರೂ ದಕ್ಷಿಣದಲ್ಲಿ ಇದಕ್ಕೆ ವಿರೋಧವಿದೆ. ಹಾಗಿದ್ದಲ್ಲಿ ಏನು ಮಾಡಬೇಕು? ರಾಷ್ಟ್ರದ ಐಕ್ಯತೆಗೆ ಸಹಕಾರಿಯಾಗಬಲ್ಲ ಹಾಗೂ ರಾಷ್ಟ್ರ ಪ್ರೇಮವನ್ನು ಉಂಟುಮಾಡಬಲ್ಲ ಭಾಷೆಯನ್ನು ಆಯ್ಕೆ ಮಾಡುವುದು ಹೇಗೆ?

ಮೇಲಿನ ಎರಡೂ ಸಮಸ್ಯೆಗಳಿಗೆ ನನಗೆ ಕಂಡು ಬರುತ್ತಿರುವುದು ಒಂದೇ ಪರಿಹಾರ. ಅದು ಏನೆಂದರೆ, ಮಾತೃಭಾಷೆ (ಅಥವಾ ಆಯಾ ರಾಜ್ಯದ ಭಾಷೆ) ಹಾಗೂ ಇಂಗ್ಲೀಷಿನ ಜೊತೆಗೆ ಮೂರನೆಯ ಭಾಷೆಯಾಗಿ ಸಂಸ್ಕೃತವನ್ನು ಎಲ್ಲ ರಾಜ್ಯಗಳಲ್ಲೂ ಮೊದಲನೆಯ ತರಗತಿಯಿಂದಲೇ ಕಲಿಸುವಂತಾಗಬೇಕು. ರಾಷ್ಟ್ರದೆಲ್ಲೆಡೆ ಎಲ್ಲ ಮಕ್ಕಳೂ ಸಂಸ್ಕೃತ ಭಾಷೆಯನ್ನು ಕಲಿಯುತ್ತಾ, ಅದರಲ್ಲಿನ ಪಠ್ಯವಸ್ತು ಒಂದೇ ಆಗಿದ್ದಲ್ಲಿ ಅದು ಒಂದು ರೀತಿಯ ಐಕ್ಯತಾ ಭಾವವನ್ನು ಮಕ್ಕಳಲ್ಲಿ ಹುಟ್ಟಿಸ ಬಹುದು. ಪರಸ್ಪರ ಭೇಟಿಯಾದಾಗ, ತಾವು ಕಲಿಯುತ್ತಿರುವ ಒಂದು ಭಾಷೆ ಹಾಗೂ ಪಠ್ಯವಸ್ತುವಿನ ಚರ್ಚೆ ಮಾಡುವಂತಾದರೆ ಅವರ ನಡುವೆ ಆತ್ಮೀಯ ಭಾವ ಮೂಡಬಹುದು. ಅದು ರಾಷ್ಟ್ರಭಾಷೆಯಾಗಿ, ಎಲ್ಲರೂ ಮಾತನಾಡುವ ಭಾಷೆಯಾಗಿ ಬದಲಾಗಲು ಸಾಧ್ಯವಾಗದಿರಬಹುದು. ಸಂಪರ್ಕ ಭಾಷೆ ಖಂಡಿತ ಆಗಲಾರದು. ತೊಂದರೆ ಇಲ್ಲ. ಆದರೆ ದೇಶದ ಅಸ್ಮಿತೆಯ ಬಗ್ಗೆ ಖಂಡಿತ ಅಭಿಮಾನ ಮೂಡಿಸದೆ ಇರದು.

ಸಂಸ್ಕೃತ ಭಾಷೆ ಮೃತ ಭಾಷೆ, ಚಾಲನೆಯಲ್ಲಿಲ್ಲದ ಭಾಷೆ ಎಂದೆಲ್ಲ ಹೇಳುತ್ತಾ ಅದರ ಸಾರ ಸರ್ವಸ್ವವನ್ನೇ ಸಾರಾ ಸಗಟಾಗಿ ಆಚೆ ದೂಡಿರುವುದು ನಮ್ಮ ಮೂರ್ಖತನದ ಪರಮಾವಧಿ ಎನಿಸುತ್ತಿದೆ. ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲೂ ಪೋಷಕರು

ತಮ್ಮ ತಮ್ಮ ಮಕ್ಕಳಿಗೆ ಸಂಸ್ಕೃತದ ಕೆಲ ಶ್ಲೋಕಗಳನ್ನು ಹೇಳಿಕೊಡುವುದಿದೆ. ಆದರೆ ಎಷ್ಟೋ ಶ್ಲೋಕಗಳ ಅರ್ಥ ಪೋಷಕರಿಗೇ ತಿಳಿದಿಲ್ಲದಿರುವಾಗ ಅವು ಮಕ್ಕಳಿಗೆ ಬಾಯಿಪಾಠ ಆಗುತ್ತದೆಯೇ ಹೊರತು ಮುಂದೆಂದೂ ರಕ್ತಗತವಾಗುವುದೇ ಇಲ್ಲ. ಅಷ್ಟಕ್ಕೆ ಮಾತ್ರ ಅವರ ಸಂಸ್ಕೃತ ಜ್ಞಾನ ಸೀಮಿತವಾಗಿಬಿಡುತ್ತದೆ. ಅದರ ಬದಲಾಗಿ ಒಂದನೇ ತರಗತಿಯಿಂದಲೇ ರಾಷ್ಟ್ರ ಮಟ್ಟದಲ್ಲಿ ಒಂದೇ ಪಠ್ಯವಸ್ತು ಕಲಿಸತೊಡಗಿದರೆ, ಅದರ ಮೂಲಕ ರಾಷ್ಟ್ರ ಪ್ರಜ್ಞೆ, ಐಕ್ಯತೆ ಬೆಳೆಯುವುದರ ಜೊತೆಗೆ ಭಾಷಾ ಗೊಂದಲವೂ ಕಡಿಮೆಯಾಗಬಹುದು. ಪರಸ್ಪರ ಎಷ್ಟೇ ವೈರುಧ್ಯಗಳಿದ್ದರೂ ಈ ಭಾಷೆಯ ಮೂಲಕ ಒಂದು ಐಕ್ಯತಾಭಾವ ಬೆಳೆಯಬಹುದು ಹಾಗೂ ಪಠ್ಯವಸ್ತುವಿನ ಮೂಲಕ ರಾಷ್ಟ್ರಪ್ರಜ್ಞೆ ಹಾಗೂ ರಾಷ್ಟ್ರಾಭಿಮಾನ ಬೆಳೆಯಬಲ್ಲದು.

ಹೀಗೆ ಸಂಸ್ಕೃತವನ್ನು ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಬಿಡದಂತೆ ಕಲಿಸಬೇಕು. ಈಗ ನಮ್ಮ ರಾಜ್ಯದಲ್ಲಿ ಕಲಿಸುತ್ತಿರುವ ಹಿಂದಿಯನ್ನು ಕೈಬಿಟ್ಟರೆ ಖಂಡಿತ ನಷ್ಟವಿಲ್ಲ. ಜೊತೆಗೆ ಎಲ್ಲ ರಾಜ್ಯಗಳಲ್ಲೂ ಒಂದೇ ಬಗೆಯಾದ ತ್ರಿಭಾಷಾ ಸೂತ್ರ ಅಳವಡಿಸುವುದರಿಂದ ಗೊಂದಲವೂ ಇಲ್ಲವಾಗುತ್ತದೆ. ಇದರೊಂದಿಗೆ ಉಳಿದ ವಿಷಯಗಳಲ್ಲಿ ಪಠ್ಯವಸ್ತುವಿನಲ್ಲಿ ಬದಲಾವಣೆಯನ್ನು ಮಾಡಲೇಬೇಕಾದಂತಹ ತುರ್ತು ಖಂಡಿತವಾಗಿಯೂ ಈಗ ನಮ್ಮ ಮುಂದಿದೆ. ನಮ್ಮ ದೇಶದಲ್ಲಿ ಆಗಿ ಹೋದ, ಹೆಮ್ಮೆ ಪಡಬಹುದಾದಂತಹ ಸಹಸ್ರ ಸಹಸ್ರ ವಿಷಯಗಳಿವೆ. ಅವುಗಳನ್ನು ಮಕ್ಕಳಿಗೆ ಕಲಿಸಿ ಅವರು ದೇಶದ ಬಗ್ಗೆ ಹೆಮ್ಮೆ ಪಡುವಂತಹ ವ್ಯಕ್ತಿತ್ವವನ್ನು ಮೂಡಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಸಂಸ್ಕೃತ ಭಾಷೆಯ ಮೂಲಕ ಎರಡು ಸಮಸ್ಯೆಗಳಿಗೆ ಪರಿಹಾರ ದೊರಕಬಹುದು ಎಂಬುದು ನನ್ನ ಸ್ಥೂಲ ಆಲೋಚನೆ. ಇದನ್ನು ಆಳವಾಗಿ ಅವಲೋಕಿಸಿ, ಒಟ್ಟಾಗಿ ಕುಳಿತು ಚರ್ಚಿಸಿ ಮುಂದಿನ ಹೆಜ್ಜೆಗಳನ್ನಿಡಬೇಕು. ಈ ನನ್ನ ಆಲೋಚನೆಗಳನ್ನು ನಿಮ್ಮ ಮುಂದಿಟ್ಟಿದ್ದೇನೆ. ನೀವೇನಂತೀರಿ?

***

ರಂಗಭೂಮಿಯ ರೋಚಕ ಪ್ರಸಂಗಗಳು

– ಧೀರೇಂದ್ರ ಎಸ್.

ಆಗ ನನಗೆ ಸುಮಾರು ಹನ್ನೊಂದು ವರ್ಷ. ನ್ಯಾಷನಲ್ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ಬಸವನಗುಡಿಯಲ್ಲಿ ಓದುತ್ತಿದ್ದೆ. ಪ್ರಭಾತ್ ಕಲಾವಿದರ ಕುಟುಂಬದ ಕರಿಗಿರಿಯಾಚಾರ್ಯರು ನಮ್ಮ ಉಪಾಧ್ಯಾಯರು. ನ್ಯಾಷನಲ್ ಹೈಸ್ಕೂಲಿನಲ್ಲಿ "ಲವ ಕುಶ" ನಾಟಕದ ಪ್ರದರ್ಶನವನ್ನು ಪ್ರಭಾತ್ ಕಲಾವಿದರು ಆಯೋಜಿಸಿದ್ದರು. ಲವ ಕುಶ ಮತ್ತು ಅವರ ಗೆಳೆಯರ ಪಾತ್ರಗಳಿಗೆ ನಮ್ಮ ತರಗತಿಯಿಂದಲೇ ಒಂದಿಷ್ಟು ಹುಡುಗರನ್ನು ಆಯ್ಕೆ ಮಾಡಿ, ಅವರಿಗೆ ಕರಿಗಿರಿಯಾಚಾರ್ಯರೇ ತಾಲೀಮು ಮಾಡಿಸುತ್ತಿದ್ದರು. ನನಗೆ ನಾಟಕದಲ್ಲಿ ಆಸಕ್ತಿ ಇದ್ದರೂ ಆಯ್ಕೆ ಆಗಿರಲಿಲ್ಲ. ಆದರೂ ಬಿಡುವಿನ ವೇಳೆಯಲ್ಲಿ ತಾಲೀಮು ನಡೆಯುತ್ತಿದ್ದಾಗ ಅಲ್ಲಿ ಹೋಗಿ ಕುಳಿತು ನೋಡುತ್ತಿದ್ದೆ.

ಲವ ಕುಶರ ಸಂಗಾತಿಗಳಾಗಿದ್ದ ಆಶ್ರಮವಾಸಿಗಳ ಮಕ್ಕಳಿಗೆ ಒಂದು ಹಾಡಿತ್ತು.

"ಸೋಮವಾರ ಸಂಡಿಗೆ
ಮಂಗಳವಾರ ಮಂಡಿಗೆ
ಬುಧವಾರ ಬೂಂದಿ
ಗುರುವಾರ ಗೊಜ್ಜು
ಶುಕ್ರವಾರ ಶನಿವಾರ ಘಮಘಮಿಸುವ ಶ್ಯಾವಿಗೆ ಪಾಯಸ

ಇದನ್ನೆಲ್ಲಾ ತಿಂದ್ರೇ

ಸೋಮವಾರ ಸೊಂಟನೋವು
ಮಂಗಳವಾರ ಮಂಡಿಗೆ ನೋವು
ಬುಧವಾರ ಬೆನ್ನು ನೋವು
ಗುರುವಾರ ಗಂಟಲು ನೋವು
ಶುಕ್ರವಾರ ಶನಿವಾರ ಶಿ ಶಿ ಶಿ ಶೀತ ನೆ ನೆ ನೆ ನೆ ನೆಗಡಿ

ಇದನ್ನು ರಾಗವಾಗಿ ಹಾಡಿಕೊಂಡು ಕುಣಿಯುತ್ತಿದ್ದಾಗ ನನಗೂ ಎಲ್ಲಿಲ್ಲದ ಉತ್ಸಾಹ, ಹುರುಪು. ಮನೆಗೆ ಬಂದು ನಾನೂ ಹಾಡಿಕೊಂಡು ಕುಣಿಯುತ್ತಿದ್ದೆ. ಎಲ್ಲೂ ಬರೆದಿಟ್ಟುಕೊಳ್ಳದಿದ್ದರೂ ನನ್ನ ನೆನಪಿನ ಬುತ್ತಿಯಲ್ಲಿ ಭದ್ರವಾಗಿ ಇಂದಿಗೂ ಕುಳಿತಿದೆ ಈ ಹಾಡು.

1967ರಲ್ಲಿ ನ್ಯಾಷನಲ್ ಹೈಸ್ಕೂಲಿನ ಸುವರ್ಣ ಮಹೋತ್ಸವ. ಆಗ ನಮ್ಮ ನಾಟಕದ ಮೇಷ್ಟ್ರು ಬಿ.ಎಸ್.ನಾರಾಯಣ ರಾಯರು ಕುವೆಂಪು ಅವರ "ರಕ್ತಾಕ್ಷಿ" ನಾಟಕದ ಪ್ರದರ್ಶನವನ್ನು ಏರ್ಪಡಿಸಿದ್ದರು. ಅವರದೇ ನಿರ್ದೇಶನ ಹಾಗೂ ಮುಖ್ಯ ಪಾತ್ರ. ಆಗಿನ್ನೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಸಿ.ಆರ್.ಸಿಂಹ ಖಳನಾಯಕ ನಿಂಬಯ್ಯನ ಪಾತ್ರ ಮಾಡಿದ್ದರು. ಖ್ಯಾತ ನಟ ಕಾನಕಾನಹಳ್ಳಿ ಗೋಪಿ ಜೈಲಿನ ಕಾವಲುಗಾರನಾಗಿಯೂ, ಹೊಲಿಗೆ ಮೇಷ್ಟ್ರು ಎಸ್.ಜಿ.ದ್ವಾರಕಿ ಅವರು ಸನ್ಯಾಸಿಯ ಪಾತ್ರದಲ್ಲಿಯೂ ನಟಿಸಿದ್ದರು. ನಾಟಕದಲ್ಲಿ ಅವರಿಬ್ಬರ ಚಿಕ್ಕ ಸಂಭಾಷಣೆ ಇರುತ್ತದೆ. ಆದರೆ ಗೋಪಿ ಹಾಸ್ಯನಟ ಹಾಗೂ ಚತುರ ಮಾತುಗಾರ. ಇದಕ್ಕೆ ತದ್ವಿರುದ್ಧ ದ್ವಾರಕಿ. ತಮ್ಮ ಸಂಭಾಷಣೆಗಷ್ಟೇ ಸೀಮಿತವಾಗುವವರು. ಗೋಪಿ ಬೇಕೆಂದೇ ವಿಷಯವನ್ನು ಬೆಳೆಸಿ ಮಾತನಾಡುತ್ತಾ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ಜನರನ್ನು ರಂಜಿಸುತ್ತಾ ಇರುವಾಗ ಪಾಪ ನಮ್ಮ ದ್ವಾರಕಿ ಮೇಷ್ಟ್ರು ಕಕ್ಕಾಬಿಕ್ಕಿಯಾಗಿ ಬಿಡುತ್ತಿದ್ದರು. ಇದು ನಮಗೆಲ್ಲಾ ಬಹಳ ಖುಷಿ ಕೊಡುತ್ತಿತ್ತು.

ಇದೇ ರೀತಿಯ ಇನ್ನೊಂದು ಪ್ರಸಂಗ ನಾನು ನ್ಯಾಷನಲ್ ಕಾಲೇಜಿನಲ್ಲಿ ಪದವಿ ಪೂರ್ವ ತರಗತಿಯಲ್ಲಿದ್ದಾಗ. ನ್ಯಾಷನಲ್ ಕಾಲೇಜು ಹಿಸ್ಟ್ರಿಯಾನಿಕ್ ಕ್ಲಬ್ಬಿನವರು "ಸಮಯಕ್ಕೊಂದ್ಸುಳ್ಳು" ನಾಟಕ ಆಡುತ್ತಿದ್ದರು. ಮಾಲೇರ ಪುಟ್ಟ ಖ್ಯಾತಿಯ ಬಿ.ಆರ್.

ಜಯರಾಂ ಮತ್ತು ನಾರಾಯಣಸ್ವಾಮಿ ಅವರು ಇದರಲ್ಲಿ ಅಭಿನಯಿಸಿದ್ದರು. ನಾರಾಯಣಸ್ವಾಮಿ ಮುಂದೆ ಚಲನಚಿತ್ರ ರಂಗದಲ್ಲಿ ಪ್ರಣಯರಾಜ ಶ್ರೀನಾಥ್ ಎಂಬ ಹೆಸರಿನಿಂದ ಪ್ರಸಿದ್ಧಿಯಾದವರು. ಇವರಿಬ್ಬರ ನಡುವೆ ಒಂದು ಚಿಕ್ಕ ಸಂಭಾಷಣೆ. ಜಯರಾಂ ಒಬ್ಬರ ಮನೆಗೆ ಬಂದು ಅಲ್ಲಿದ್ದ ನಾರಾಯಣಸ್ವಾಮಿಯನ್ನು, "ನೀನು ಯಾರಪ್ಪ?" ಎಂದು ಕೇಳುತ್ತಾರೆ. ಅದಕ್ಕವನು, "ನಾನು ಅಡುಗೆಯವನು" ಎಂದು ಉತ್ತರಿಸಿದರೆ ಮುಗಿಯುತ್ತಿತ್ತು. ಇಲ್ಲಿ ಏನಾಯಿತೆಂದರೆ,

ಜಯರಾಂ "ನೀನು ಯಾರಪ್ಪ?" ಎಂದಾಗ ನಾರಾಯಣಸ್ವಾಮಿ "ಯಾಕ್ ಸ್ವಾಮಿ?" ಎಂದು ಕೇಳುತ್ತಾನೆ. ಆಗ ಜಯರಾಂ "ಓಹೋ ನಿನ್ನ ಹೆಸರು ಯಾಕ್ ಸ್ವಾಮಿ ಅಂತಾನಾ?'' ಎನ್ನುತ್ತಾರೆ. ಅದಕ್ಕೆ ನಾರಾಯಣಸ್ವಾಮಿ "ಅಲ್ಲಾ ಸ್ವಾಮಿ" ಎನ್ನುತ್ತಾನೆ. ಜಯರಾಂ "ಓಹೋ ಅಲ್ಲಾ ಸ್ವಾಮಿ ಅಂತಾನಾ? ಬಹಳ ಚೆನ್ನಾಗಿದೆ ಕಣಯ್ಯ. ನಾನು ಈ ಹೆಸರು ಕೇಳೇ ಇರಲಿಲ್ಲ" ಅಂತಾರೆ. ಇಬ್ಬರೂ ಒಬ್ಬರನ್ನೊಬ್ಬರ ಕಾಲೆಳೆಯುವುದರಲ್ಲಿ ಮಗ್ನರಾದಾಗ ನಲವತ್ತು ನಿಮಿಷದ ನಾಟಕ ಒಂದು ಗಂಟೆಗೂ ಹೆಚ್ಚಾಗಿ ಬೆಳೆಯುತ್ತಾ ಹೋದಾಗ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್ಚೆನ್ ಸಭಾಗೃಹದಿಂದ ನೇಪಥ್ಯಕ್ಕೆ ಬಂದು ಇಬ್ಬರನ್ನೂ ಸನ್ನೆ ಮಾಡಿ ನಾಟಕ ಮುಗಿಸುವಂತೆ ಹೇಳುತ್ತಾರೆ. ಪ್ರೇಕ್ಷಕರಿಗೆ ಮಾತ್ರ ಇವರಿಬ್ಬರ ಚಾಟೂಕ್ತಿಗಳ ಹಬ್ಬದೂಟ!

ಇನ್ನೊಂದು ಪ್ರಸಂಗ. ನಂಕಂಪ್ನಿ ನಾಟಕದ್ದು. ಇದನ್ನೂ ಹಿಸ್ಟ್ರಿಯಾನಿಕ್ ಕ್ಲಬ್ಬಿನವರೇ ಆಡಿದ್ದು. ಬಿ.ಎನ್.ನಾರಾಯಣ್ ಅಂದ್ರೆ ನಾಣಿ, ಮೇಕಪ್ ನಾಣಿ ನಿರ್ದೇಶಿಸಿ, ಅದರಲ್ಲಿ ರಾಜನ ಪಾತ್ರ ಮಾಡಿದ್ದರು. ಆಗ ನಾಟಕದಲ್ಲಿ ರಾಜ ಋಷಿಯ ಶಾಪದಿಂದ ರಾಜ್ಯ ಕೋಶಗಳನ್ನು ಬಿಟ್ಟು ಕಾಡಿನಲ್ಲಿ ಅಲೆಯುವಾಗ ಹಸಿವಿನಿಂದ ಬಳಲಿ ಹಾಡುತ್ತಾನೆ. "ಅನ್ನಾಹಾರಗಳಿಲ್ಲದೇ...." ಇದರಲ್ಲಿ ಕೈಲಾಸಂ ಕಂಪನಿ ನಾಟಕಗಳಲ್ಲಿ ನಡೆಯುವ ಹಲವು ಆಭಾಸಗಳತ್ತ ಬೆಳಕು ಬೀರಿದ್ದಾರೆ.

ನಾಣಿ ರಾಜನ ಪಾತ್ರದಲ್ಲಿ "ಅನ್ನಾಹಾರಗಳಿಲ್ಲದೇ..." ಎಂದು ಸೊಗಸಾಗಿ ಹಾಡುತ್ತಿರುತ್ತಾರೆ. ಇದ್ದಕ್ಕಿದ್ದಂತೆ ಹಾಡಿನಲ್ಲಿ ಬದಲಾವಣೆ ಮಾಡಿ, "ಅಣ್ಣಾ ಹಾರಗಳಿಲ್ಲದೇ...." ಎಂದು ರಾಗವಾಗಿ ಹಪಹಪಿಸುತ್ತಾರೆ. ಆಗ ಸಭಾಗೃಹದಿಂದ ಒಂದಿಬ್ಬರು ರಂಗದ ಮೇಲೆ ಬಂದು ರಾಜನ್ ಕೊರಳಿಗೆ ಹಾರ ಹಾಕುತ್ತಾರೆ. ಆಮೇಲೆ ರಾಜನ ಹಾಡು ಮತ್ತೆ "ಅನ್ನಾಹಾರಗಳಿಲ್ಲದೇ..." ಎಂದು ಮುಂದುವರೆಯುತ್ತದೆ!

ಮತ್ತೊಂದು ಪ್ರಸಂಗ. ಶ್ರೀರಂಗರ "ಕತ್ತಲೆ ಬೆಳಕು" ನಾಟಕದ್ದು. ಅಂತರ ಕಾಲೇಜು ನಾಟಕ ಸ್ಪರ್ಧೆ- ಉಲ್ಲಾಳ ಪಾರಿತೋಷಕಕ್ಕಾಗಿ ಸಿ.ಆರ್.ಸಿಂಹ ನಿರ್ದೇಶಿಸಿದ ನಾಟಕ. ಇದರಲ್ಲಿ ಸಂಪತ್ ಕುಮಾರ್ ಅವರದು ಪ್ರೇಮಿ ಯುವತಿಯ ಪಾತ್ರ. ಈ ಸಂಪತ್ ಕುಮಾರ್ ಬೇರಾರೂ ಅಲ್ಲ! ಮುಂದೆ ನಾಗರ ಹಾವು ಚಿತ್ರದ ಮೂಲಕ ವಿಷ್ಣುವರ್ಧನ್ ಎಂದು ಹೆಸರಾದ ಪ್ರಸಿದ್ಧ ನಾಯಕ ನಟ.

ನಾಟಕದಲ್ಲಿ ಒಂದು ಯುವ ಜೋಡಿ ಮನೆಯಿಂದ ಓಡಿಬಂದು ರಾತ್ರಿ ಒಂದು ಒಂಟಿ ಮನೆಯ ಬಾಗಿಲಿನ ಮುಂದಿನ ಮೆಟ್ಟಿಲ ಮೇಲೆ ಕುಳಿತುಕೊಂಡು ಸಂಭಾಷಿಸುವ ದೃಶ್ಯ. ಯುವಕ ನಾಟಕೀಯವಾಗಿ, "ಶಯ್ಯಾ ಭೂಮಿತಲಂ ದಿಶೋಽಪಿ ವಸನಂ..." ಎಂದು ಹೇಳುತ್ತಾ ಮೆಟ್ಟಿಲು ಮೇಲೆ ಕೂಡುತ್ತಾನೆ. ಯುವತಿ ಕುತೂಹಲದಿಂದ "ಅಂದ್ರೆ?" ಎನ್ನುತ್ತಾ ಪಕ್ಕದಲ್ಲಿ ಬಂದು ಕುಳಿತುಕೊಳ್ಳುತ್ತಾಳೆ. ದಿನದ ಹಾಗೆಯೇ ನಾಟಕದಲ್ಲಿಯೂ, ಮೈಮರೆತು ಸಂಪತ್ ಕುಮಾರ್ ಉಟ್ಟ ಸೀರೆಯನ್ನು ಪ್ಯಾಂಟಿನಂತೆ ಸ್ವಲ್ಪ ಮೇಲೆಳೆದುಕೊಂಡು ಕುಳಿತಾಗ ಪ್ರೇಕ್ಷಕರೆಲ್ಲಾ ಘೊಳ್ಳೆಂದು ನಕ್ಕರು! ಪಾಪ ಸಂಪತ್ ಕುಮಾರ್ ಕಕ್ಕಾಬಿಕ್ಕಿ!

ರಂಗಭೂಮಿಯಲ್ಲಿ ಈ ರೀತಿಯ ಮೋಜಿನ ಪ್ರಸಂಗಗಳು ಹೇರಳವಾಗಿವೆ. ಅವುಗಳನ್ನು ನೆನಪಿನ ಬುತ್ತಿಯಿಂದ ಹೊರ ತೆಗೆಯಬೇಕಷ್ಟೇ!

***

ಜೀವ ಗೌರವ – 'ರೆವರೆನ್ಸ್ ಆಫ್ ಲೈಫ್'

– ಮಾಧುರಿ ಕೃಷ್ಣ

ವಿಶ್ವದ ಅಸಂಖ್ಯಾತ ಜೀವಜಂತುಗಳಲ್ಲಿ ಮನುಷ್ಯನದ್ದು ಅತ್ಯಂತ ಶ್ರೇಷ್ಠ ಜನ್ಮ ಎನ್ನುತ್ತಾರೆ. ಯುಗಗಳೆಷ್ಟೇ ಕಳೆದುಹೋದರೂ ಸತತ ಜನನಗಳು ಒಂದೇ ರೀತಿ ನಡೆಯುತ್ತಲೇ ಇವೆ. ಮಾನವನ ಬದುಕು ಅರಳಿ ಪ್ರಬುದ್ಧವಾಗಿ ಕಳಿತು ಕಳಚಿ ಬಿದ್ದರೂ ಮತ್ತದೇ ವೈಶಿಷ್ಟ್ಯದಲ್ಲಿ ಮರುಜನ್ಮ ಪಡೆಯುವುದು ಶತ ಸಿದ್ಧ!

' ಹೇ! ಇವಳದ್ದೇನು ಅದೇ ಗೊಡ್ಡು ವಿಚಾರಧಾರೆ'! ಎಂದು ಓದುಗರಾದ ನೀವು ಅಸಡ್ಡೆ ತೋರಿದರೂ ಸರಿಯೇ ಈ ಫೀಲ್ಡ್ ಥಿಯರಿಯನ್ನು ನಿಮ್ಮ ಮುಂದೆ ಪ್ರಸ್ತಾಪಿಸದೇ ಇರಲಾರೆ ನಾನು!

ಸುಮಾರು ನೂರು ವರ್ಷ ಕಳೆದಿರಬೇಕು, ನಡೆದು ಪ್ರಸ್ತುತವಾಗುತ್ತಲೇ ಇರುವ ಮಾನವನ ಒಳ ಆಯಾಮದ ಸಂಗತಿಯೊಂದು ಸಕಾರಣತೆಯಿಂದ ಮೌಲ್ಯ ವಿವೇಚನೆಗೆ, ವಿಮರ್ಶಾ ಪ್ರಜ್ಞೆಗೆ, ನೈತಿಕ ಶೋಧನೆಗೆ ಗುಣಾಂಶಗಳ ಪರಿಜ್ಞಾನವಾಗಿ ಸದಾಕಾಲವೂ ಪುಷ್ಕಳವಾಗಿ ಪ್ರಜ್ಞಾಪ್ರವಾಹ ರೂಪದಲ್ಲಿ ಹರಿಯುತ್ತಿರುವುದಕ್ಕೆ ಸಾಕ್ಷಿಯೋ ಎಂಬಂತೆ ಸುರುಳಿ ಬಿಚ್ಚಿಕೊಂಡಿತು.

ಅದು ಕಳೆದ ಶತಮಾನದ ಇಪ್ಪತ್ತರ ದಶಕ. ಸಮಗ್ರ ಭಾರತ–ಅದರಲ್ಲೂ ಕರ್ನಾಟಕದ ಪಶ್ಚಿಮ ಕರಾವಳಿಯ ಆದಾಯಕ್ಕೇನೂ ಅನುಕೂಲವಿರದ ದೇಹಬಲ ಲೆಕ್ಕಕ್ಕಿರದ ಬುದ್ಧಿಮತ್ತೆ ಮಾತ್ರ ಅತ್ಯುನ್ನತವಿದ್ದ ನಾಜೂಕು ವರ್ಗದವರ ಸಾಂಸಾರಿಕ ಜೀವನ ಅತಿ ಕ್ಲಿಷ್ಟಕರವಾಗಿ ಸಾಗುತಿತ್ತು. ಅಂಥಹದ್ದರಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿ, ಆಲೋಪತಿಕ್ ವೈದ್ಯಕೀಯವನ್ನು ಕಲಿಯುವ ಅಪೇಕ್ಷೆಯಲ್ಲಿ 15ರ ಎಳೇ ತರುಣ ಅಚಲನಾಗಿ ನಿಂತಿದ್ದ! ಅರ್ಚಕ ವೃತ್ತಿಯಲ್ಲಿ, ತುಂಬಿದ ಸಂಸಾರಕ್ಕೆ ಕೇವಲ ಎರಡು ಹೊತ್ತಿನ ಊಟ ಒದಗಿಸಲು ಚಡಪಡಿಸುತ್ತಿರುವ ಬಡಪಾಯಿ ತಂದೆಗೋ ಈ ಹಂಬಲ ಹಠಮಾರಿತನ, ನಿಶ್ಚಯ ನಿರ್ಧಾರ, ಕೋರಿಕೆ ಬೇಡಿಕೆಗಳೋ– ಪ್ರಾರ್ಥನೆ ದೈನ್ಯತೆಗಳೋ ಒಳಗಿನ ಕರುಳು ಮಾಂಸಪೇಶಿಗಳನ್ನೂ ಕೊರೆದು ತಲ್ಲಣಿಸುತಿತ್ತು. ಅಸಮರ್ಥತೆ ಅಸಹಾಯಕತೆಯಲ್ಲಿ ಸುಟ್ಟು ದಗ್ಧವಾಗುವ ಹೊತ್ತಿನಲ್ಲೇ ಹಣಕಾಸಿನ ಬಡ್ಡಿ ವ್ಯವಹಾರ ಮಾಡುತಿದ್ದ ಸತ್ಕುಲ ಸದ್ಗೃಹಸ್ತರೊಬ್ಬರು ತಮ್ಮ ಎರಡನೆಯ ಕನ್ಯೆಗೆ ವರಾನ್ವೇಷಣೆ ಮಾಡುತಿದ್ದ ಸಮಾಚಾರ ತಿಳಿದುಬಂದು ಮಾತುಕತೆ ನಡೆಯಿತು. ರೂಪಿನಲ್ಲೂ, ಬಣ್ಣದಲ್ಲೂ ಅತಿ ಸಾಮಾನ್ಯವೆನಿಸಿದರೂ ಆಕಾಂಕ್ಷೆಯಲ್ಲಿ ಅತಿ ಎತ್ತರದಲ್ಲಿದ್ದ ಉತ್ಸಾಹಿ ಯುವಕನಿಂದ ಮಾಹಿತಿಗಳೆಲ್ಲವೂ ಮರೆಮಾಚಲ್ಪಟ್ಟು ವಿವಾಹ ಸಂಪನ್ನಗೊಂಡಿತು. ವೈದ್ಯಕೀಯ ವಿದ್ಯಾಕಾಂಕ್ಷಿ ಯುವಕ ತನ್ನಾಸೆಯಂತೆ ದೂರದೂರಿಗೆ ಅಧ್ಯಯನ ನಡೆಸಲು ಹೊರಟು ಹೋದ.

ಕಠಿಣವಾದ ನಾಲ್ಕು ವರ್ಷಗಳು ಕಳೆದು ಹೋದುವು. ವೈದ್ಯಕೀಯ ಪದವಿ ಪಡೆದು ಇಂಗ್ಲೀಷ್ ಡಾಕ್ಟರ್ ಎನಿಸಿಕೊಂಡು ಹಿಂದಿರುಗಿ ಬಂದ ತರುಣನಿಗೆ ವಿಧಿಯ ಕೈಯ ಮೇಲಾಟದ ಅರಿವು ಸುಸ್ಪಷ್ಟವಾಗಿದ್ದರೂ ನೊಂದು ಬೆಂದುಕೊಳ್ಳದೆ ತನ್ನ ವೃತ್ತಿ ಪ್ರವೃತ್ತಿಯಲ್ಲಿ ಕರ್ತವ್ಯನಿಷ್ಠನಾಗಿ ಸುತ್ತುಮುತ್ತಲಿನ 200 ಮೈಲಿ ಪ್ರದೇಶದ ಸಾಮಾನ್ಯ ಜನತೆಯ ಸ್ವಸ್ಥ ಆರೋಗ್ಯ ರಕ್ಷಣೆಯ ಮಹತ್ತರ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡದ್ದೂ ಅಲ್ಲದೇ ಶಿಶು ಜನನ ಸಂದರ್ಭದಲ್ಲಿ ಸಂಕಷ್ಟಕ್ಕೀಡಾಗುತ್ತಿರುವ ಅಸಹಾಯಕ ಹೆಂಗಳೆಯರಿಗೆ ಪ್ರತ್ಯಕ್ಷ ದೇವರೂ ಆಗಿ, ಹಗಲು ರಾತ್ರಿಯೆನ್ನದೇ ಸೇವೆ ನೀಡುವ ಆಪ್ತ ರಕ್ಷಕನೂ ಆಗಿ ನವನಾಗರಿಕತೆಯ ಹೊಸ ಸಹಸ್ರಮಾನಕ್ಕೇರಿಸಿ 'ರೆವರೆನ್ಸ್ ಆಫ್ ಲೈಫ್–ಜೀವಗೌರವ' ಸಲ್ಲಿಸಿದ.

***

ನಾನಾಗಬಯಸುವ ರಾಮಾಯಣದ ಪಾತ್ರ

– ಸುಜಾತಾ ರವೀಶ್, ಮೈಸೂರು

ಪತ್ರಂ ಪುಷ್ಪಂ ಫಲಂ ತೋಯಂ
ಯೋ ಮೇ ಭಕ್ತ್ಯಾ ಪ್ರಯಚ್ಛತಿ
ತದಹಂ ಭಕ್ತ್ಯುಪಹೃತಮಶ್ನಾಮಿ
ಪ್ರಿಯತಾತ್ಮನಃ

ಭಗವದ್ಗೀತೆಯ ಅಧ್ಯಾಯ 9 ಶ್ಲೋಕ 26ರಲ್ಲಿ ಭಗವಂತ ಹೀಗೆ ಹೇಳುತ್ತಾನೆ– "ಭಕ್ತಿಯಿಂದ ಒಂದು ಎಲೆ, ಹೂವು, ಫಲ ಏನನ್ನಾದರೂ ಸರಿ ಸಮರ್ಪಿಸಿದರೆ ಸಾಕು ನಾನು ಸಂತುಷ್ಟನಾಗುತ್ತೇನೆ". ಇಲ್ಲಿ ಆಡಂಬರ ಡಾಂಭಿಕತೆ ಬೇಡವೇ ಬೇಡ, ನಿಷ್ಕಲ್ಮಶ ಪ್ರೀತಿ ಇದ್ದರೆ ಸಾಕು. ರಾಮಾಯಣದ ಶಬರಿಯ ಕಥೆ ಇದಕ್ಕೆ ಸಮಂಜಸ ದೃಷ್ಟಾಂತ. ನಿಷಧವೆಂಬ ಬೇಡರ ಕುಲದ ರಾಜ ಶಬರನ ಮಗಳು ಶಬರಿ. ಅವಳ ಮದುವೆಯ ಮುನ್ನಾದಿನ ಔತಣಕ್ಕೆಂದು ತಂದಿರಿಸಿದ ಬಲಿಯ ಪ್ರಾಣಿಗಳನ್ನು ಕಂಡು ಮನಕರಗಿ ನೊಂದು ತನ್ನ ಮನೆಯನ್ನೇ ತೊರೆದು ಕಾಡಿನಲ್ಲಿ ಅಲೆಯುತ್ತಿರುತ್ತಾಳೆ. ಮಾತಂಗ ಮಹರ್ಷಿಗಳ ಆಶ್ರಮ ತಲುಪಿ ಅವರ ಸೇವೆಯನ್ನು ಮಾಡುತ್ತಾ ದಿನ ಕಳೆದಿರುತ್ತಾಳೆ. ಮಾತಂಗರು ತಮ್ಮ ಕೊನೆಗಾಲದಲ್ಲಿ ಅವಳಿಗೆ ರಾಮನು ಈ ಆಶ್ರಮಕ್ಕೆ ಬಂದು ನಿನಗೆ ದರ್ಶನ ಕೊಟ್ಟು ಸಾಯುಜ್ಯ ನೀಡುತ್ತಾನೆಂದು ತಿಳಿಸುತ್ತಾರೆ. ಬೆನ್ನು ಬಾಗಿ ಹಣ್ಣುಹಣ್ಣು ಮುದುಕಿಯಾಗುವ ವರೆಗೂ ರಾಮನ ಪ್ರತೀಕ್ಷೆಯಲ್ಲಿ ಇದ್ದವಳಿಗೆ ಒಂದು ದಿನ ಆ ಪುರುಷೋತ್ತಮನ ದರ್ಶನಭಾಗ್ಯ ಲಭಿಸುತ್ತದೆ. ರುಚಿನೋಡಿ ಮಧುರವಾದ ಹಣ್ಣುಗಳನ್ನು ಮಾತ್ರ ಅವನಿಗಿತ್ತ ಆ ನಿಷ್ಕಪಟ ಪ್ರೀತಿಗೆ ರಾಮ ಕರಗುತ್ತಾನೆ. ಅವಳು ಬಯಸಿದ ಚಿರಶಾಂತಿಯ ವರ ಕೊಡುತ್ತಾನೆ. ಅಗ್ನಿ ಪ್ರವೇಶಿಸುವಾಗ ಆ ಜರಾ ವೃದ್ಧೆಯು ಯೌವನದ ತರುಣಿಯಾಗಿ ಸಾಲಂಕೃತ ರೂಪದಿಂದ ಬ್ರಹ್ಮ ಸಾಯುಜ್ಯ ಹೊಂದುತ್ತಾಳೆ.

ಚಿಕ್ಕವಳಿದ್ದಾಗ ಪ್ರೈಮರಿ ಶಾಲೆಯಲ್ಲಿ "ಕಾದಿರುವಳು ಶಬರಿ ರಾಮ ಬರುವನೆಂದು ತನ್ನ ಪೂಜೆಗೊಳುವನೆಂದು" ಎಂಬ ಪದ್ಯ ಓದಿದಾಗಲೆಲ್ಲ ಆ ಭಕ್ತಿಯ ಪರಾಕಾಷ್ಠತೆಯ ಅರಿವಾಗದಿದ್ದರೂ ಕುತೂಹಲ ಹುಟ್ಟಿಸಿದಾಕೆ ಶಬರಿ. ಎಲ್ಲಿಯ ಬೇಡ ಕುಲ? ಎತ್ತಣ ರಾಮ ಪ್ರಸಾದಿತ ಸಾಯುಜ್ಯ? ಈ ಎರಡೂ ವೈಪರೀತ್ಯಗಳ ಮಧ್ಯೆ ಆಧ್ಯಾತ್ಮಿಕ ಬಲ ಹೊಂದಿ ಸಾಧನೆಯ ಪಥದಲ್ಲಿ ಸಾಗಿದವಳು ಶಬರಿ. ಆ ಮುಗ್ಧತೆ, ನಿರಾಡಂಬರತೆ ತನ್ನ ಆರಾಧ್ಯದೈವದ ದರ್ಶನಕ್ಕಾಗಿ ತನುಮನಗಳೆರಡೂ ದಣಿಸಿ ಕಾಯುವ ಪರಿ ಅನಾದೃಶ ಅಸದೃಶ. ಹಾಗಾಗಿಯೇ ಮಾತಂಗರಂಥ ಮಹರ್ಷಿಗಳಿಗೂ ಸಾಧ್ಯವಾಗದ ರಾಮದರ್ಶನ ಶಬರಿಗೆ ಲಭ್ಯವಾದದ್ದು. ಪರಮಾತ್ಮ ನಿಜ ಭಕ್ತಿಗೆ ಒಲಿದು ಅವಳಿರುವಲ್ಲಿಗೆ ಬಂದು ಆತಿಥ್ಯ ಸ್ವೀಕರಿಸಿದ್ದು. ಇದನೆಲ್ಲ ನೆನೆದಾಗ ಮೈ ಜುಮ್ಮೆನ್ನುತ್ತದೆ.

ಅದೇ ಏಕಾಗ್ರತೆಯಿಂದ ನಾವು ಮನದಲ್ಲಿ ಧ್ಯಾನಿಸಿದಾಗ ವಾಂಛಿತಗಳು ಖಂಡಿತ ಕೈಗೆಟುಕುತ್ತವೆ ಎಂಬ ನಿತ್ಯಸತ್ಯದ ಅನಾವರಣವಾಗುತ್ತದೆ. ಪುತಿನರವರ ಶಬರಿ ಗೀತ ನಾಟಕವಂತೂ ಅಸೀಮ ಭಕ್ತೆಯ ಮನದಾಳದ ಪದರ ಪದರಗಳನ್ನು ಅನಾವರಣಗೊಳಿಸುತ್ತದೆ. ಹಾಗಾಗಿ ರಾಮಾಯಣದ ಪಾತ್ರಗಳಲ್ಲೆಲ್ಲ ನನಗಿಷ್ಟವಾದವಳು ಶಬರಿ. ಅವಳ ಪಾತ್ರದಂತೆ ನಾನಾಗಿ ಆ ಪರಮಾತ್ಮನ ಪದತಲದಲಿ ವಿನೀತಳಾಗಿ ಸೇರಿಹೋಗುವ ಭಾಗ್ಯ ಸಿಕ್ಕರೆ ಸಾಕು ಪುನೀತವೀ ಜನ್ಮ. ರಾಮಾಯಣ ದರ್ಶನಂನ ಈ ಸಾಲುಗಳೊಂದಿಗೆ ಮುಕ್ತಾಯ ಹಾಡುವೆ–

ಸೌಮಿತ್ರಿ ರಾಮರಂ ಸುಖಬಾಷ್ಪಂ ನೇತ್ರದಿಂ ನೋಡುತ್ತೆ
ನೋಡುತ್ತೆ ಕಣ್ಮುಚ್ಚಿದಳ್ ಆ ಅಮರ ಸನ್ಮಾನ್ಯೆ
ದೇವ ಸೀತಾನಾಥ ದಿವ್ಯಾಶ್ರು ತೀರ್ಥಜಲ
ಸಂಸ್ನಾತೆ, ಸಂಪೂತೆ, ಮೇಣ್ ಶಿವಕಳೇಬರೆ, ಧನ್ಯೆ!

***

ನಮ್ಮನೆ ಅಡುಗೆ ಮನೆ

– ರಘುರಾಂ.ಎನ್.ವಿ.

ಅಡುಗೆ ಮನೆ ಇಲ್ಲದ ಮನೆಯೇ ಇಲ್ಲ ಬಿಡಿ. ನಮ್ಮ ಮನೆಯ ಅಡುಗೆ ಮನೆ ನಿಮಗೆ ತೋರಿಸುತ್ತೇನೆ ಬನ್ನಿ. ವರಾಂಡ, ಹಾಲ್, ಸ್ಟೋರ್ ರೂಂ ದಾಟಿದ ನಂತರ ಊಟದ ಮನೆಗೆ ತಾಗಿಕೊಂಡಿರುವ ಅಡುಗೆಮನೆ ನಮ್ಮಮ್ಮನ ಅತಿ ಮುಖ್ಯವಾದ ಕಾರ್ಯಸ್ಥಾನ. ಬೆಳಿಗ್ಗೆ ಬಾಗಿಲು ತೆಗೆದರೆ ರಾತ್ರಿಯೇ ಬಾಗಿಲು ಮುಚ್ಚುವುದು. ಹಾಗಾಗಿ ಬನ್ನಿ ನೇರವಾಗಿ ಒಳಗೆ ಹೋಗೋಣ.

ಬಾಗಿಲ ಎದುರಿಗೇ ಕಾಣುವುದೇ ನೆಲದಲ್ಲಿ ಹಾಕಿರುವ ಕಲ್ಲಿನ ಒರಳು! ಒಂದು ಸೇರಕ್ಕಿ ಒಂದೇ ಸಾರಿಗೆ ಇಲ್ಲಿ ತಿರುವುದು ಸಾಧ್ಯ. ನೋಡಿ, ಅದರ ಮೇಲೆ ಒಂದು ಕಾವಲಿ ನೇತು ಹಾಕಿದ್ದಾರೆ. ಇದು ಸಾಧಾರಣ ಕಾವಲಿಯಲ್ಲ, ಇದು ಅಮೇರಿಕಾದ 'ನಾನ್ ಸ್ಟಿಕ್' ಕಾವಲಿ! 1966ರ ಡಿಸೆಂಬರ್ ಹೊತ್ತಿಗೆ ನಮ್ಮ ಹತ್ತಿರದ ನೆಂಟರು ಮತ್ತು ಪಕ್ಕದ ಮನೆಯಲ್ಲಿ ಇದ್ದ ಉಷಾ ಮತ್ತು ಭಾಸ್ಕರ, ತಮ್ಮ ಸಣ್ಣ ಮಕ್ಕಳನ್ನು ಕರೆದುಕೊಂಡು ಅಮೇರಿಕಾದಿಂದ ಬಂದಿದ್ದರು. 1960ನೇ ಇಸವಿಯಲ್ಲಿ ಇವರು ನಮ್ಮ ಬಳಗದಲ್ಲಿ ಪ್ರಥಮಬಾರಿಗೆ ಅಮೇರಿಕಾದಲ್ಲಿ ಹೋಗಿ ನೆಲೆಸಿದವರು. ಅವರು ಬಂದಾಗ ಆಗ ತಾನೇ ಅಮೇರಿಕಾ ಮಾರ್ಕೆಟ್‌ನಲ್ಲಿ ಬಂದ 'ನಾನ್ ಸ್ಟಿಕ್ ತವ'ವನ್ನು ಅಮ್ಮನಿಗೆ 'ಪ್ರೆಸೆಂಟ್' ಮಾಡಿದ್ದರು. ಎಣ್ಣೆ ಹಾಕದೇ ದೋಸೆ ಮಾಡಬಹುದು ಎನ್ನುವುದೇ ದೊಡ್ಡ ವಿಷಯ! ಅದಿನ್ನೂ ಭಾರತದಲ್ಲಿ ಆಗ ಬಂದಿರಲಿಲ್ಲ. ಫಾರಿನ್ ಕಾವಲಿ! ಅದರಲ್ಲಿ ಒಂದೆರೆಡು ದೋಸೆ ಮಾಡಿ, ಜೋಪಾನವಾಗಿ ಅಮ್ಮ ತೆಗೆದು ಇಟ್ಟರು. ಯಾರು ಮನೆಗೆ ಬಂದರೂ "ಇದು ಅಮೇರಿಕಾ ಕಾವಲಿ" ಎಂದು ತೋರಿಸಿ, ಜೋಪಾನವಾಗಿ ಅಲ್ಲೇ ತೂಗು ಹಾಕುತ್ತಿದ್ದರು.

ಒರಳಿನ ಪಕ್ಕ ನೀರಿನ ನಲ್ಲಿ. ಅದರ ಕೆಳಗಡೆ ದೊಡ್ಡ ಹಿತ್ತಾಳೆ ಪಾತ್ರೆ, ಕುಡಿಯುವ ನೀರು ತುಂಬಿಸಲು. ನೇರವಾಗಿ ನಲ್ಲಿಯಿಂದ ನೀರು ಪಾತ್ರೆಗೆ! ಮಳೆಗಾಲದಲ್ಲಿ ನೀರು ಹಿಡಿದು ಒಂದು ಅರ್ಧ ಗಂಟೆ ಬಿಟ್ಟರೆ ಒಂದು ತೆಳುವಾದ ಪದರ ಮಣ್ಣು ಕೆಳಗಡೆ ನೆಲೆಗೊಳ್ಳುತ್ತಿತ್ತು. ನಲ್ಲಿಗೆ ಪಾಣಿಪಂಚೆ ಕಟ್ಟಿದ್ದರು ಕೂಡ ಮಣ್ಣು ಬರುತ್ತಿತ್ತು. ಆದರೆ ಆ ನೀರು ಕುಡಿದು ಯಾರೂ ಕಾಹಿಲೆ ಮಲಗಿದ ನೆನಪಿಲ್ಲ! ಎಷ್ಟೆಂದರೂ ತೀರ್ಥಹಳ್ಳಿಯ ತುಂಗಾ ನದಿಯ ನೀರಲ್ಲವೇ?

ಅದರ ಮೇಲೆ ನೋಡಿ, ಅಲ್ಲಿ ಎರಡು ಖಾನಿಗಳಲ್ಲಿ ಇರುವುದು ಅಡುಗೆ ಮಾಡುವ ಪಾತ್ರೆಗಳು. ಎಲ್ಲಾ ಹಿತ್ತಾಳೆ ಪಾತ್ರೆಗಳು. ಆಗಾಗ ಕಲಾಯಿ ಮಾಡಿಸಿಕೊಂಡು ಒಳಗಡೆ ಬೆಳ್ಳಿ, ಹೊರಗಡೆ ಬಂಗಾರದಂತೆ ಹೊಳೆಯುತ್ತಿದ್ದವು.

1965ರಲ್ಲಿ ಮೊದಲ ಬಾರಿಗೆ ನಮ್ಮ ಮನೆಗೆ ಸ್ಟೀಲ್ ಲೋಟಗಳು ಬಂದವು. ಮೊದಲು ಯಾರದ್ರೂ ಗಣ್ಯ ಅತಿಥಿಗಳು ಬಂದರೆ ಮಾತ್ರ ಅವರಿಗೆ ಸ್ಟೀಲ್ ಲೋಟದಲ್ಲಿ ಕಾಫೀ ಕೊಡುತ್ತಿದ್ದರು! ನಂತರ ನಿಧಾನವಾಗಿ ಸ್ಟೀಲ್ ಪಾತ್ರೆಗಳು ಹಿತ್ತಾಳೆಯ ಪಾತ್ರಗಳನ್ನು ಅಟ್ಟಕ್ಕೆ ತಳ್ಳಿದವು.

ಈ ಕಡೆ ಬಾಗಿಲ ಎಡಗಡೆ ಬನ್ನಿ. ಇಲ್ಲಿ ನೋಡಿ ಗೋಡೆಯ ಉದ್ದಕ್ಕೂ ಸಾಮಾನುಗಳನ್ನು ಇಡಲು ಮಾಡಿರುವ ಖಾನಿಗಳು. ಕೆಳಗಡೆ ಮೊದಲ ಸಾಲಿನಲ್ಲಿ ಟಿನ್ ಷೀಟಿನಲ್ಲಿ ಮಾಡಿಸಿದ ನಾಲ್ಕು ದೊಡ್ಡ ಡಬ್ಬಗಳು. ಮೊದಲ ಡಬ್ಬದಲ್ಲಿ ಅಕ್ಕಿ ಹಿಟ್ಟು, ಇದರಲ್ಲಿ 14 ಸೇರಕ್ಕಿ ಹಿಟ್ಟು ಹಿಡಿಯುತ್ತದೆ. ನಂತರ ಊಟದ ಅಕ್ಕಿ, ನಂತರ ತೊಗರಿಬೇಳೆ, ನಂತರ ಅವಲಕ್ಕಿ. ಅದರ ಮೇಲೆ ಸುಮಾರು ಐದು ಸೇರಿನಷ್ಟು ಹಿಡಿಯುವ ಹಿತ್ತಾಳೆ ಡಬ್ಬಗಳು, ನಂತರ ಎರಡು ಸೇರು ಹಿಡಿಯುವ ಹಿತ್ತಾಳೆ ಡಬ್ಬಗಳು.ಈ ಖಾನಿಗಳನ್ನು ಹತ್ತಿರದಿಂದ ಮುಟ್ಟಿ ನೋಡಿ. ಇವೆಲ್ಲಾ ಸುರ್ಕೀ ಗಾರೆ ಹಾಕಿ ಕಟ್ಟಿರುವ ಕಟ್ಟೆಗಳು ಅಷ್ಟೇ. ವರ್ಷಕ್ಕೆ ಆಗುವಷ್ಟು ಸಾಮಾನು ಗಳನ್ನು ತಂದು ಅಟ್ಟದಲ್ಲಿರುವ ದೊಡ್ಡ ಡಬ್ಬಗಳಿಂದ ಈ ಸಣ್ಣ ಡಬ್ಬಗಳಿಗೆ ಹಾಕಿ ದಿನ ನಿತ್ಯದ ಉಪಯೋಗಕ್ಕೆ ಇಟ್ಟಿರುವುದು.

ಆ ಕಡೆ ನೋಡಿ ಕಿಟಕಿ ಇದೆಯಲ್ಲ, ಅದರ ಪಕ್ಕ ಕಾಫೀ ಕಟ್ಟೆ! ಕಟ್ಟೆಯಲ್ಲಿ ಒಂದು ಓಪನ್ ಕಾಯಿಲ್ ಕರೆಂಟ್ ಸ್ಟೌವ್. ಅಲ್ಲಿ ಕಾಫೀ ಫಿಲ್ಟರ್. ಅದರ ಪಕ್ಕವೇ ಸೌದೆ ಒಲೆಗಳು. ಏಕ ಕಾಲದಲ್ಲಿ ಐದು ಪಾತ್ರೆಯಲ್ಲಿ ಒಟ್ಟಿಗೆ ಬೇಕಾದರೆ ಬೇಯಲು ಇಡಬಹುದು. ಅದರ ಮೇಲೆ ದೊಡ್ಡ ಚಿಮಿಣಿ. ಈಗಿನ ಕಾಲದ ಭಾಷೆಯಲ್ಲಿ 'ನ್ಯಾಚುರಲ್ ಡ್ರಾಫ್ಟ್ ಚಿಮಣಿ'. ಆದರೂ ಮಳೆಗಾಲದಲ್ಲಿ ಹೊಗೆ ತುಂಬಿಕೊಳ್ಳುತ್ತಿತ್ತು! ಬೆಳಿಗ್ಗೆ ಒಲೆ ಹಚ್ಚಿದರೆ ಮಧ್ಯಾಹ್ನ ಎರಡು ಗಂಟೆಯವರೆಗೆ ಉರಿಯುತ್ತಿರುತ್ತಿತ್ತು. ನಂತರ ಮಧ್ಯಾಹ್ನ 4 ಗಂಟೆಗೆ ಬೆಳಿಗ್ಗೆ ಬಿದ್ದ ಕೆಂಡ ಒಂದು ಚೂರು ಅಲ್ಲಾಡಿಸಿದರೆ ಮತ್ತೆ ಒಲೆ ಹೊತ್ತಿಕೊಂಡು ರಾತ್ರಿವರೆಗೆ ಉರಿಯುತ್ತಿತ್ತು! ರಾತ್ರಿ ಊಟ ಆದ ಮೇಲೆ ಅಡುಗೆಮನೆ ತೊಳೆದು, ಒಲೆಯ ಬೂದಿ ತೆಗೆದು, ತೊಳೆದು, ಅದರ ಮೇಲೆ ಎರಡು ಎಳೆ ರಂಗೋಲಿ ಹಾಕಿ ಇಡುತ್ತಿದ್ದರು!

ಈ ಕಡೆ ನೋಡಿ, ಅಡುಗೆ ಮನೆ ಬಾಗಿಲ ಪಕ್ಕದಲ್ಲಿ ಇರುವ ಗೋಡೆ ಬೀರು. ಇದು ಮಡಿ ಸಾಮಾನುಗಳಾದ ಹಾಲು, ತುಪ್ಪ, ಇತ್ಯಾದಿ ಇಡುವಂತಹ ಬೀರು. ಮೊಸರು ಮೈಲಿಗೆ. ಹಾಗಾಗಿ ಬೀರುವಿನಲ್ಲಿ ಜಾಗ ಇಲ್ಲ! ಇಲ್ಲಿರುವ ಸಾಮಾನುಗಳನ್ನು ಕೈ ತೊಳೆದು ಮುಟ್ಟಬೇಕು ಎಂಬ ನಿಯಮ ಇದ್ದರೂ, ಅವುಗಳನ್ನು ನಾವು ಪಾಲಿಸಿದ್ದು ಕಡಿಮೆಯೇ. ಅಜ್ಜಿ ಊರಿಂದ ಮನೆಗೆ ಬಂದಾಗ ಮಾತ್ರ, ಅಮ್ಮ ಮುಟ್ಟಬೇಡಿ ಎನ್ನುತ್ತಿದ್ದರು. ಅಜ್ಜಿ ಮಾತ್ರ, ನಾವು ಮುಟ್ಟಿದರೂ, 'ಮಕ್ಕಳು ದೇವರ ತರಹ. ದೋಷ ಇಲ್ಲ' ಎಂದು ಹೇಳುತ್ತಿದ್ದರೇ ಹೊರತು ಮುಟ್ಟಿದರೆ ಬೈಯುತ್ತಿರಲಿಲ್ಲ! ಇಲ್ಲಿ ಪಿಂಗಾಣಿಯ ಜಾಡಿಯಲ್ಲಿ ಉಪ್ಪು, ಉಪ್ಪಿನಕಾಯಿಗಳು ಕೂಡ ಇರುತ್ತಿದ್ದವು.

ಇದೇನು? ಅಡುಗೆಮನೆಗೆ ಬಂದು, ಏನು ಅಡುಗೆ ಎಂದು ನೋಡದೇ ಹಾಗೇ ಹೋಗುವುದೇ? ಏನು ಅಡುಗೆ ಮಾಡುತ್ತಿದ್ದರು ಎಂದು ಎಲ್ಲರಿಗೂ ಗೊತ್ತಿರುವ ವಿಷಯವೇ ಬಿಡಿ. ಅದೇ ಮಲೆನಾಡಿನ ಅಕ್ಕಿ ರೊಟ್ಟಿ, ಕೊಟ್ಟೆ ಕಡಬು, ನೀರು ದೋಸೆ,... ಅದರಲ್ಲೇನೂ ವಿಶೇಷವಿಲ್ಲ. ವಿಶೇಷ ಇದ್ದಿದ್ದು ಎಷ್ಟು ಮಾಡುತ್ತಿದ್ದರು ಎಂದು! ಏನು ಮಾಡಿದರೂ ಸಾಮಾನ್ಯ ದಿನಗಳಲ್ಲಿ 14 ಜನಕ್ಕೆ! ನೆಂಟರು ಬಂದಾಗ ಇನ್ನೂ ಹೆಚ್ಚು. ಬೆಳಿಗ್ಗೆ ಅಮ್ಮ ಎದ್ದು ಕೊಟ್ಟಿಗೆಗೆ ಹೋಗಿ ದೊಡ್ಡ ಕೊಳದಪ್ಪಲೆ ಹಾಲು ಕರೆದು ತಂದು ಇಡುತ್ತಿದ್ದರು. ಅದರಲ್ಲಿ ಕಾಫೀ. ಒಬ್ಬೊಬ್ಬರೇ ಮುಖ ತೊಳೆದುಕೊಂಡು ಬಂದ ಹಾಗೆ ಅವರಿಗೆ ಕಾಫೀ. ಬೆಲ್ಲದ ಅಚ್ಚು ಹಾಕಿ ನೀರು ಕುದಿಸಿ, ಫಿಲ್ಟರಿಗೆ ಹಾಕಿ ಮಾಡಿರುವ ಕಾಫೀ. ಕಾಫೀಬೀಜ ತಂದು ಶ್ರೀ ರಾಘವೇಂದ್ರ ಕಾಫೀ ವರ್ಕ್ಸ್‌ನಲ್ಲಿ ಒಂದು ಸಾರಿಗೆ ಐದು ಕೆ.ಜಿ. ಪುಡಿ ಮಾಡಿಸುತ್ತಿತ್ತು. ಅದು ಸುಮಾರು 20 ದಿನ ಬಂದರೆ ಹೆಚ್ಚು. ಮಧ್ಯಾಹ್ನ ನಾಲ್ಕು ಗಂಟೆಯ ಇನ್ನೊಂದು ಸಾರಿ. ಒಂದು ಫಿಲ್ಟರ್ ಬಹುಶಃ ಸುಮಾರು ಎರಡು ಪಾವಿನಷ್ಟು ಕಾಫೀ ಡಿಕಾಕ್ಷನ್ ಹಿಡಿಯುತ್ತಿತ್ತು. ಇನ್ನೊಂದು ಫಿಲ್ಟರ್ ಒಂದು ಸೇರಿನಷ್ಟು! ನನಗೆ, ನನ್ನ ತಮ್ಮನಿಗೆ ಸ್ವಲ್ಪ ಹಾಲು ಜಾಸ್ತಿ ಹಾಕಿ ಕೊಡುತ್ತಿದ್ದರು. ಉಳಿದವರೆಲ್ಲರಿಗೂ ಸ್ಟ್ರಾಂಗ್ ಕಾಫೀ. ಹೈಸ್ಕೂಲಿಗೆ ಹೋಗುವ ಹೊತ್ತಿಗೆ ನಮಗೂ ಸ್ಟ್ರಾಂಗ್ ಕಾಫೀಗೆ ಬಡ್ತಿ ದೊರೆಯಿತು.

ಈ ಕಡೆ ನೋಡಿ, ದೊಡ್ಡ ಬಾಣಲೆ ಇದೆಯಲ್ಲ, ಇದರಲ್ಲೇ ರೊಟ್ಟಿ ಮಾಡುತ್ತಿದ್ದುದು. ಅದರಲ್ಲಿ ಹಿಟ್ಟು ಹಾಕಿ, ತಟ್ಟಿ ಬೇಯಿಸಿದ ಮೇಲೆ ಚಾಕುವಿನಲ್ಲಿ ಕತ್ತರಿಸಿದರೆ ನಾಲ್ಕು ರೊಟ್ಟಿ ಆಗುತ್ತಿತ್ತು, ಒಂದು ಸಲಕ್ಕೆ! ಇಡ್ಲಿ ತಟ್ಟೆ ಸುಮಾರು 15 ಇಂಚಿನಷ್ಟು ವ್ಯಾಸವಿತ್ತು. ಒಂದು ಸಾರಿಗೆ ೧೦ ತಟ್ಟೆ ಇಡಬಹುದಿತ್ತು. ಇಡ್ಲಿ ಪಾತ್ರೆಯನ್ನು, ಪಾತ್ರೆ ಅನ್ನುವುದಕ್ಕಿಂತ ಸಣ್ಣ ಹಂಡೆ ಎನ್ನಬಹುದು! ಉಬ್ಬಿದ ರೊಟ್ಟಿ ಮಾಡುವಾಗ, ರೊಟ್ಟಿ ಸೌದೆ ಒಲೆಯ ಮೇಲೆ ಇಟ್ಟಿರುವ ಕಾವಲಿಯ ಮೇಲೆ ಅರ್ಧ ಬೆಂದ ಮೇಲೆ ಕೆಂಡದ ಸ್ಟೌವ್ ಮೇಲೆ ಹಾಕಿದರೆ ಉಬ್ಬುತ್ತಿತ್ತು. ನಾವು ಏನು ಕಡಿಮೆ ತಿನ್ನುತ್ತಿರಲಿಲ್ಲ! ಏನೇ ತಿಂಡಿ ಮಾಡಿದರೂ ಅರ್ಧ ತಿಂಡಿಗೆ ತುಪ್ಪ ಹಾಕಿಕೊಂಡು, ಇನ್ನೊಂದು ಅರ್ಧಕ್ಕೆ ಮೊಸರು ಹಾಕಿಕೊಂಡು ತಿನ್ನುವುದು! ಅಕ್ಕಿ ರೊಟ್ಟಿಗೆ ಮಾತ್ರ ಬೆಣ್ಣೆ! ಎಲ್ಲರಿಗೂ ಒಂದೇ ತರಹದ ಅಡುಗೆ. ಎಲ್ಲರೂ ಏನು ಮಾಡಿದ್ದರೋ ಅದನ್ನೇ ಇಷ್ಟಪಟ್ಟು ತಿನ್ನುತ್ತಿದ್ದರು.

ಸುಮಾರು 11.30ರ ಹೊತ್ತಿಗೆ ಮಜ್ಜಿಗೆ ಕಡೆಯುತ್ತಿದ್ದರು. ಪ್ರತಿ ದಿನ ಒಂದು ಟೆನಿಸ್ ಬಾಲಿನಷ್ಟು ದೊಡ್ಡದಾದ ಬೆಣ್ಣೆ ಕಡೆದು ತೆಗೆಯುತ್ತಿದ್ದರು. ಬೇಸಿಗೆ ರಜೆಯಲ್ಲಿ ಬೆಣ್ಣೆ ತೆಗೆದ ತಕ್ಷಣ ನಾವುಗಳು ಹಾಗೇ ಕೈಯಲ್ಲಿ ಹಾಕಿಕೊಂಡು, ನಾಲಗೆಯಿಂದ ನೆಕ್ಕಿ ಕೊಂಡು ತಿನ್ನುತ್ತಾ, ಕೈ ನಿಕ್ಕರಿಗೆ ಸೀಟ್ ಕೊಂಡು (ಒರೆಸಿಕೊಂಡು) ಆಟ ಆಡಲು ಓಡಿರುತ್ತಿದ್ದೆವು! ಮನೆಯ ಬೆಣ್ಣೆ ಜೊತೆಗೆ

ಪ್ರತಿ ಸೋಮವಾರ ಬೆಳಿಗ್ಗೆ ಮಾರುವುದಕ್ಕೆ ಹಳ್ಳಿ ಕಡೆಯಿಂದ ಒಬ್ಬ ಮುದುಕ ಉಗ್ಗದಲ್ಲಿ ಬೆಣ್ಣೆ ಇಟ್ಟುಕೊಂಡು ಬರುತ್ತಿದ್ದ. ಒಂದು ಚೂರು ಬೆಣ್ಣೆ ಕೈಗೆ ತೆಗೆದುಕೊಂಡು, ಅದನ್ನು ಕೈ ಮೇಲೆ ಹಚ್ಚಿಕೊಂಡು, ವಾಸನೆ ನೋಡಿ ಒಂದೆರಡು ಸೇರು ತೆಗೆದು ಕೊಳ್ಳುತ್ತಿದ್ದರು. ಅದನ್ನು ಕಾಯಿಸಿ ತುಪ್ಪ ಮಾಡುತ್ತಿದ್ದರು. ಆಗ ಆ ಪಾತ್ರೆಯಲ್ಲಿ ಹಾಕಿರುತ್ತಿದ್ದ ವೀಳೇದೆಲೆಗೆ ಬಾರಿ ಬೇಡಿಕೆಯಿತ್ತು.

ಈ ಕಡೆ ಇದೆಯಲ್ಲ, ಅದೇ "ಅನ್ನಪೂರ್ಣ ಕುಕ್ಕರ್". ಮೊದಲೆಲ್ಲಾ ತಪ್ಪಲೆಯಲ್ಲಿ ಬಸಿದ ಅನ್ನ ಮಾಡುತ್ತಿದ್ದರು. ನಂತರ ಈ "ಅನ್ನಪೂರ್ಣ" ಕುಕ್ಕರ್ ಬಂತು. ಈಗಿನ ಕುಕ್ಕರ್ ತರಹ ಅಲ್ಲ. ಇದು ನೋಡಿ, ಇದು ಜೋಡಿಸಿ ಇಟ್ಟಾಗ ಸುಮಾರು ಮೂರು ಅಡಿನೇ ಆಗುತ್ತೆ. ನೀರೇನಾದ್ರು ಕಡಿಮೆ ಆಗಿ ಅನ್ನ ಗಟ್ಟಿಯಾದರೆ ಹೇಳುತ್ತಿದ್ದುದು, ಅನ್ನ "ಬಿಂಮ್ಗೆ" ಆಗಿದೆ!

ಊಟಕ್ಕೆ ಮೊದಲಿಗೆ ತುಪ್ಪ ಇರಲೇಬೇಕು. ಹುರಳೀಕಾಳು ಅಥವ ಹಲಸಂಡೆಕಾಳು ಸಾರಾದರೆ ಬೆಣ್ಣೆ! ಒಂದೇ ತರಕಾರಿಯಲ್ಲಿ ಪಲ್ಯ, ಹುಳಿ, ಗೊಜ್ಜು ಹೀಗೆ ಏನು ಬೇಕಾದರೂ ಮಾಡುತ್ತಿದ್ದರು. ತಿಂಗಳಿಗೆ ಒಂದು ಬಾರಿಯಾದರೂ ಯಾವುದೋ ಕೆಲಸ/ ಕಾರ್ಯ/ ಪೂಜೆ ಇದ್ದೇ ಇರುತ್ತಿತ್ತು. ಆಗೆಲ್ಲಾ ಕೆಂಪು ಚಿತ್ರಾನ್ನ, ಪಾಯಸ, ಅಂಬೊಡೆ.. ಇದ್ದೇ ಇರುತ್ತಿತ್ತು!

ಸಾಯಂಕಾಲ ತಿಂಡಿಗೆ ಏನಾದರೂ ಕರಿದ ತಿಂಡಿ ಗ್ಯಾರಂಟಿ! ಮಳೆಗಾಲದಲ್ಲಿ ಇನ್ನೇನು ಮಾಡಲು ಗೊತ್ತಾಗಲಿಲ್ಲ ಅಂದರೆ ಹಪ್ಪಳದ ಡಬ್ಬ ತೆಗೆಯುತ್ತಿದ್ದರು. ಎಲ್ಲಾ ಜಾತಿ ಹಪ್ಪಳ! ಅಕ್ಕಿ, ಹುರಳಿ, ಬಾಳೆಕಾಯಿ, ಹಲಸಿನ ಹಪ್ಪಳ ಸಾಯಂಕಾಲದ ತಿಂಡಿಗೆ!... ಮತ್ತೆ ರಾತ್ರಿ ಊಟ. ಬೆಳಿಗ್ಗೆ ಮಾಡಿದ ಅಡುಗೆ ಬೇಕಾದಷ್ಟು ಇದೆ ಸಾಕು ಎಂದು ಹೇಳುತ್ತಿದ್ದರು. ಆದರೆ ಸಂಜೆ ಏಳು ಗಂಟೆ ಆದಾಗ ಮತ್ತೇನೋ ಅನುಮಾನ! ಮತ್ತೆ ಎರಡು ಪಾವು ಅಕ್ಕಿ ಅನ್ನಕ್ಕೆ ಇಟ್ಟು, ಕಡಿಮೆಯಾದರೆ ಇರಲಿ ಎಂದು ಒಂದು ಕಾಯಿಚಟ್ನಿ ಮಾಡುತ್ತಿದ್ದರು. ಏನಾದ್ರೂ ಇರಲಿ, ಬಿಡಲಿ ಚಟ್ನಿಪುಡಿ, ಉಪ್ಪಿನಕಾಯಿ ಎಲೆ ತುದಿಯಲ್ಲಿ ಇರಲೇಬೇಕು. ಮೊದಲು ಎಲೆ ತುದಿಗೆ ಉಪ್ಪು ಇರುತ್ತಿತ್ತು! ಆದರೆ ಅಪ್ಪನಿಗೆ ಉಪ್ಪು ಕಡಿಮೆ ಮಾಡಿ ಎಂದು ಡಾಕ್ಟರ್ ಹೇಳಿದಾಗ, ಎಲ್ಲರಿಗೂ ಉಪ್ಪು ಕಟ್ ಆಯಿತು. ರಾತ್ರಿ 7.45ಕ್ಕೆ ರೇಡಿಯೋದಲ್ಲಿ ಮೊದಲು ಕನ್ನಡ ವಾರ್ತೆಗಳು ಬರುತ್ತಿತ್ತು. ಅದು ಊಟಕ್ಕೆ ಕರೆ. ಮಣೆ ಹಾಕಿ, ಬಾಳೆ ಎಲೆ ಇಟ್ಟು, ಲೋಟ ಇಡಬೇಕು. ಒಬ್ಬೊಬ್ಬರು ಒಂದೊಂದು ಕೆಲಸ ಮಾಡುತ್ತಿದ್ದರು! 7.45ಕ್ಕೆ ವಾರ್ತೆಯ ಬದಲು ಚಿತ್ರಗೀತೆ ಬರಲು ಪ್ರಾರಂಭ ಮಾಡಿದರೂ, ನಮ್ಮ ಮನೆ ಊಟದ ಸಮಯ ಬದಲಾಗಲಿಲ್ಲ.

ಅಡುಗೆ ಮನೆಯಲ್ಲಿ ಎಷ್ಟು ಸಮಯ ಇದ್ದರೂ ಸಾಲದು ಬಿಡಿ. ಮುಂದಿನ ಬಾರಿ ಇನ್ನೊಂದಿಷ್ಟು ವಿಷಯಗಳ ಜೊತೆ ಭೇಟಿ ಆಗೋಣ.

***

ಶೃಂಗಾರ

– ಶ್ರವಣಕುಮಾರಿ ಟಿ.ಎಸ್.

ನಂಜುಂಡನ ಮನೆಯ ಮುಂದೆ ಸ್ಕೂಟರಿನಲ್ಲಿ ಬಂದಿಳಿದರು ಮಾಧವಿ ಮತ್ತವಳ ಸಹಾಯಕಿ ಸುಮತಿ. ಅವರಿಗಾಗೇ ಕಾಯುತ್ತಿದ್ದವನು ಒಳಗೆಲ್ಲಾ ಕೇಳುವಂತೆ "ಅವ್ರಿಬ್ರೂ ಬಂದ್ರು. ಇನ್ನೊಂದರ್ಧ ಮುಕ್ಕಾಲು ಗಂಟೆ ಅಷ್ಟೇಯಾ. ಎಲ್ರೂ ಸದ್ದಿಲ್ದಂಗೆ ಕೂತ್ಕಳಿ" ಎನ್ನುತ್ತಾ ಷಾಮಿಯಾನಾದ ಹೊರಗೋಡಿ ಬಂದು, "ಬನ್ನಿ ಬನ್ನಿ ನಿಮ್ಗೇಂತ್ಲೆ ಕಾಯ್ತಿದ್ವಿ; ಎಲ್ರೂ ಬಂದ್ಬುಟ್ಟವ್ರೆ. ಸಂಬಾಳ್ಸೋದೇ ಕಷ್ಟ ಆಗೋಗದೆ" ಎನ್ನುತ್ತಾ ಅವರ ಕೈಯಲ್ಲಿದ್ದ ಬ್ಯಾಗುಗಳನ್ನೆತ್ತಿಕೊಂಡು ಮನೆಯ ಒಳ ಕೋಣೆಯ ಕಡೆ ನಡೆದ. ಅವರಿಬ್ಬರೂ ಹಿಂಬಾಲಿಸಿದರು.

ರಿಕ್ಲೈನರ್ ಚೇರಿನ ಮೇಲೆ ಒರಗಿದ್ದಳು ವಸುಮತಿ. "ಎಲ್ಲಾ ನಿಮ್ಮ ಕೈಗೇ ಸಿಗೋಂಗದೆ. ನೋಡಿ ಇದೇ ಸೀರೆ, ರವ್ಕೆ. ವಡ್ವೆಗ್ಳೆಲ್ಲಾ ಇಲ್ಲವೆ. ವಳ್ಳೇ ಮಲ್ಗೆ ಊವ್ವ ತರ್ಸಿಟ್ಟಿವ್ನಿ. ಎಲ್ಲಾ ನೋಡ್ಕಳಿ ಮಂತೆ. ಆದಷ್ಟು ಬಿರೀನ್ ಮಾಡಿ. ಜನ ಆಗ್ಲೇ ಬಂದು ವೊರ್ಗೆ ಕಾಯ್ತಾ ಕುಂತವ್ರೆ. ಅವ್ರನೆಲ್ಲಾ ಸುಮ್ನಿರ್ಸೋದೇ ದೊಡ್ ಕಷ್ಟ ನೋಡಿ. ತಲೆಗೊಂದು ಮಾತಾಡ್ತರೆ. ನಾನು ವೊರ್ಗೋಗ್ತೀನಿ. ಏನಾರಾ ಬೇಕಿದ್ರೆ ಕರೀರಿ" ಎನ್ನುತ್ತಾ ನಂಜುಂಡ ಕೋಣೆಯಿಂದ ಹೊರಗೆ ಕಾಲಿಟ್ಟ.

"ಆಯ್ತು ಆಯ್ತು ಇನ್ನೊಂದ್ ಸ್ವಲ್ಪೊತ್ತು ಅಷ್ಟೇಯಾ. ಒರ್ಗಡೆ ಷಾಮಿಯಾನ್ದಾಗೆ ಕಾಫಿ, ತಿಂಡಿ ವೆವಸ್ಥೆ ಆಗದೆ. ತಿಂಡಿ ಬಂದದೆ ಅಂತ ಕಾಣ್ತದೆ. ಅಸ್ವಾದವ್ರು ಓಗಿ ತಿನ್ಕಬೈದು. ಎಲ್ಲಾ ಮುಗ್ಯೋತ್ಕೆ ತಡವಾಗ್ಬೋದು. ಅಲ್ಲೀವರ್ಗಾ ಅಸೀಕಂಡಿರಕ್ಕಾಗಲ್ಲ. ಏಳಿ ಏಳಿ" ಎಂದವನೇ ಮತ್ತೇನನ್ನೋ ನೆನಪಿಸಿಕೊಂಡು, "ಏನ್ಲಾ ಕಂಠೀ, ವಾದ್ಯದವ್ರು ಬಂದ್ರಾ. ಊವಿನ್ ಪಲ್ಲಕ್ಕೀನವ್ರು ಎಲ್ಲವ್ರಂತೆ. ಈಗಾಗ್ಲೇ ಅತ್ಗಂಟೆ ಆಯ್ತು. ಫೋನ್ ಮಾಡಿದ್ಯೇನಲಾ" ಎಂದು ತಮ್ಮನನ್ನು ಕರೆದು ವಿಚಾರಿಸಿಕೊಂಡ. ಸುಮ್ಮನೆ ಗುಸುಗುಸು ಎಂದು ಕುಳಿತಿದ್ದವರು ಎದ್ದು ತಿಂಡಿಯನ್ನಾದರೂ ತಿಂದು ಬರೋಣವೆಂದು ಹೊರಗಿನ ಷಾಮಿಯಾನಕ್ಕೆ ನಡೆದರು.

ವಸುಮತಿಯನ್ನೇ ನೋಡುತ್ತಾ, "ಆಯಾಸಕ್ಕೆ ಮಲ್ಗಿರೋ ಹಾಗಿದೆ" ಎಂದಳು ಮಾಧವಿ, ಸುಮತಿಯತ್ತ ತಿರುಗಿ. ಹೌದೆನ್ನುತ್ತಾ ತಲೆಯಾಡಿಸಿದವಳು. ಇಬ್ಬರೂ ಸೇರಿ ಗಾಲಿ ಕುರ್ಚಿಯಲ್ಲಿ ಕೂರಿಸಿಕೊಂಡು ಹೊಂದಿಕೊಂಡಂತಿದ್ದ ಬಚ್ಚಲುಮನೆಗೆ ತಳ್ಳಿಕೊಂಡು ಹೋದರು. ವಸುಮತಿಯ ತಲೆಗೂದಲನ್ನೆಲ್ಲಾ ಬಿಚ್ಚಿ, ಹಾಕಿಕೊಂಡಿದ್ದ ಹೌಸ್ ಕೋಟನ್ನೂ ತೆಗೆದು ಶವರನ್ನು ಬಿಟ್ಟುಕೊಂಡು ಘಮಘಮಿಸುವ ಸೋಪು, ಶಾಂಪೂವಿನಿಂದ ತಲೆಯಿಂದ ಕಾಲಿನವರೆಗೆ ಹಿತವಾಗುವಂತೆ ಸ್ನಾನ ಮಾಡಿಸಿದರು. ಒಳ್ಳೆಯ ಟರ್ಕಿ ಟವೆಲಿನಿಂದ ಮೈಯನ್ನೂ, ತಲೆಗೂದಲನ್ನೂ ಒರೆಸಿ ಮತ್ತೆ ಕೋಣೆಗೆ ಕರೆತಂದರು.

ಹೇರ್ ಡ್ರೈಯರ್‌ನಿಂದ ಒಬ್ಬಳು ತಲೆಗೂದಲನ್ನು ಒಣಗಿಸಿದರೆ, ಇನ್ನೊಬ್ಬಳು ಮೈಗೆಲ್ಲಾ ಸುಗಂಧ ಸಿಂಪಡಿಸಿದಳು. ಒಬ್ಬಳು ರವಿಕೆ ತೊಡಿಸಿದರೆ ಇನ್ನೊಬ್ಬಳು ಹೊಸ ರೇಷ್ಮೆ ಸೀರೆಯನ್ನು ನೆರಿಗೆ ಹಾಕಿ ನಾಜೂಕಾಗಿ ಉಡಿಸಿದಳು. "ಒಳ್ಳೇ ಗಿಣಿ ಹಸುರಿಗೆ, ಬಾಳೆಹೂವಿನ ಬಣ್ಣದ ಅಂಚು ಭರ್ಜರಿಯಾಗಿದೆ ಸೀರೆ" ಎಂದಳು ಮಾಧವಿ. ಒಪ್ಪಿಕೊಂಡು ತಲೆದೂಗಿದ ಸುಮತಿ "ಈ ಒಡವೆಗಳ್ನ ನೋಡು, ಒಂದಕ್ಕಿಂತ ಒಂದು ಎಷ್ಟು ಚೆನ್ನಾಗಿದೆ" ಎನ್ನುತ್ತಾ ಓಲೆ ಝುಮಕಿಯನ್ನು ಎರಡು ಬೆಟ್ಟುಗಳಲ್ಲಿ ಹಿಡಿದು ಕಣ್ಣಮುಂದೆ ಒಮ್ಮೆ ತೂಗಿ ಅದರ ಸೌಂದರ್ಯವನ್ನು ಆಸ್ವಾದಿಸಿದಳು. ಈ ಮಾವಿನಕಾಯಿ ಹಾರ ನೋಡು ಎನ್ನುತ್ತಾ ಮಾಧವಿಯೂ ಹಾರವನ್ನು ಆಸೆಗಣ್ಣಿಂದ ನೋಡಿದಳು. "ಇವೆಲ್ಲಾ ಬಂಗಾರದ್ದೇ ಆಗೋದಾಗಿದ್ರೆ ಎಷ್ಟು ಲಕ್ಷವಾಗ್ಬೋದು" ಎಂದಳು ಸುಮತಿ ಒಂದೊಂದನ್ನೇ ವಸುಮತಿಗೆ ತೊಡಿಸುತ್ತಾ. "ನಂಗೂ ನಿಂಗೂ ಎಟುಕೋದಲ್ಲ ಬಿಡು" ನಕ್ಕಳು ಮಾಧವಿ.

"ಕೂದಲು ಒಣಗಿದೆ. ಬಾಚಿ ಹೆರಳು ಹಾಕ್ತೀನಿ" ಎನ್ನುತ್ತಾ ಮಾಧವಿ ಬಾಚಣಿಕೆಯನ್ನು ಕೈಗೆ ತೆಗೆದುಕೊಂಡು ನಿಧಾನವಾಗಿ ಸಿಕ್ಕುಬಿಡಿಸಿ ಚಂದದ ಹೆರಳು ಕಟ್ಟಿದಳು. ಮುಖಕ್ಕೆ ತೆಳುವಾಗಿ ಮೇಕಪ್ ಮಾಡಿ ಹುಬ್ಬಿನ ಮೇಲೆ ಕಪ್ಪು ಪೆನ್ಸಿಲ್ಲಿನಿಂದ ತಿದ್ದಿ, ಕಾಡಿಗೆಯಿಂದ ಸೋಗೆ ತಿದ್ದಿದಳು. ಕೆನ್ನೆಗೆ ರೋಜನ್ನು, ತುಟಿಗೆ ಲಿಪ್‌ಸ್ಟಿಕ್ಕನ್ನೂ ಬಳಿದಳು. ವಸುಮತಿ ಯಾವಾಗಲೂ

ಇರಿಸಿಕೊಳ್ಳುತ್ತಿದ್ದಂತೆ ಕತ್ತಿನ ಮೇಲೊಂದು ಕಪ್ಪುಚುಕ್ಕೆಯನ್ನೂ ಇಟ್ಟಳು. ಮುಖಕ್ಕೊಪ್ಪುವ ಅಂದವಾದ ಬಿಂದಿಯನ್ನು ಹಣೆಗಿರಿಸಿದಳು. ಎಲ್ಲಾ ಮುಗಿದಿದೆಯೆಂದಾದ ಮೇಲೆ ಹೆರಳಿಗೆ ಮಲ್ಲಿಗೆಯ ಮಾಲೆಯನ್ನು ಸುತ್ತುತ್ತಿರುವಾಗ ಸುಮತಿ ಕೈಬೆರಳುಗಳಿಗೆ, ಕಾಲ್ಬೆರಳುಗಳಿಗೆ ನೈಲ್ ಪಾಲೀಶ್ ಹಚ್ಚಿ ಅವನ್ನು ಚಂದಗಾಣಿಸಿದಳು. ಸ್ವಲ್ಪ ದೂರದಲ್ಲಿ ನಿಂತು ಇಬ್ಬರೂ ಕುರ್ಚಿಯಲ್ಲೊರಗಿದ್ದ ವಸುಮತಿಯನ್ನು ನೋಡಿ ಎಲ್ಲವೂ ಸರಿಯಾಗಿದೆ ಎಂದು ತಲೆಯಾಡಿಸಿಕೊಂಡು ತಮ್ಮ ಹತಾರಗಳನ್ನು ಚೀಲಗಳಿಗೆ ತುಂಬಿಕೊಂಡರು.

ಬಾಗಿಲು ತೆರೆದೊಡನೆ ಆ ಶಬ್ದಕ್ಕೇ ಕಾಯುತ್ತಿದ್ದ ನಂಜುಂಡ ಓಡಿ ಬಂದ. "ನೀವೊಂದ್ಸಲ ನೋಡ್ಬಿಡಿ. ಎಲ್ಲಾ ಸರಿಯಾಗಿದೆ ಅಂದ್ರೆ ನಾವು ಹೊರಡ್ತೀವಿ" ಎಂದಳು ಮಾಧವಿ. ಎದ್ದು ಬರುವಂತಿರುವವಳನ್ನು ನೋಡಿ ತೃಪ್ತಿಯಿಂದ ತಲೆಯಾಡಿಸಿದ ನಂಜುಂಡ ಎಲ್ಲಾ ಅವ್ವ ಹೇಳಿದ್ಹಾಗೇ ಇದೆ ಬುಡಿ. ನಿಮ್ಮಿಂದ ಉಪ್ಕಾರವಾಯ್ತು. ಟೇಂಕ್ಸ್" ಎನ್ನುತ್ತಾ ಮಾತಾಡಿದ್ದ ಹಣವನ್ನು ಅವರ ಕೈಗಿತ್ತ. ಅವರಿಬ್ಬರೂ ಕೈಮುಗಿದು ಹೊರಟರು. "ಕಂಠೀ, ಎಲ್ಲಾ ಆಯ್ತು ಬಾರಲೇ" ಎಂದು ತಮ್ಮನನ್ನು ಜೋರಾಗಿ ಕರೆದ. ಇಬ್ಬರೂ ಸೇರಿ ವಸುಮತಿಯ ಕುರ್ಚಿಯನ್ನು ನಡುಮನೆಗೆ ಎಳೆದು ತಂದರು. ಬೆಕ್ಕಸ ಬೆರಗಾದ ಸೇರಿದ್ದ ಬಂಧು ಬಾಂಧವರು, ಚಿಕ್ಕ ಪುಟ್ಟ ದೊಡ್ಡವರು, ಚಿಳ್ಳೆಪಿಳ್ಳೆಗಳು "ಇದ್ಯಾವ ಹೊಸ ಪರಿ" ಎಂದು ಮೂಗಿನ ಮೇಲೆ ಕೈಯಿಟ್ಟುಕೊಂಡರು.

"ನನ್ನೆಡ್ತಿ ವಸು ಈಗೊಂದು ವರ್ಸದಿಂದ ಖಾಯ್ಲೆಯಿಂದ ನರಳ್ತಿದ್ದದ್ದು ನಿಮ್ಗೆಲ್ಲಾ ಗೊತ್ತೇ ಅದೆ. ಅವ್ವ ಲಕ್ಸ್ಮಿ ಅಂಗ್ ಚಂದಾಗಿದ್ದೋಳು. ಅವ್ಳ ಕಡೆಯಾಸೆ ತಾನು ಸತ್ಮೇಲೆ, ಎಣ ನೋಡಿ ಯಾರೂ ಅಯ್ಯೋ ಅನ್ನಂಗಿರ್ಬಾರ್ದು. ತಾನು ಯಾವಾಗ್ಲೂ ಅಲಂಕಾರ ಮಾಡ್ಕತಿದ್ದ ಹಾಗೇ ತನ್ನ ಎಣಕ್ಕೂ ಅಲಂಕಾರ ಮಾಡ್ಬೇಕು ಅಂತ. ಈಗ್ ನೋಡಿದ್ರೂ ಎದ್ದು ಬರೋಂಗಿದಾಳೆ ಅನ್ನೋ ಆಗಿರ್ಬೇಕು ಅಂತ ಆಸೆಪಟ್ಟಿದ್ಲು. ತಾನು ಸತ್ತಾಗ ತಂಗೆ ಉಡಿಸ್ಬೇಕಿರೋ ಸೀರೆ, ಆಕೋ ವಡ್ವೆ ಎಲ್ಲಾನೂ ಎತ್ತಿಕ್ಕಿ ವೋಗಿದ್ಲು. ಇವತ್ತು ಅವ್ಳ ಕಡೆಯಾಸೆ ನಾನು ತೀರ್ಸಿದೀನಿ" ಎನ್ನುವಷ್ಟರಲ್ಲಿ ನಂಜುಂಡನ ಗಂಟಲು ಒತ್ತಿಕೊಂಡು ಬಂದು ಬಿಕ್ಕಿಬಿಕ್ಕಿ ಅಳಲು ಆರಂಭಿಸಿದ. ನಿಬ್ಬೆರಗಾಗಿ ಈ ಅವತಾರವನ್ನು ನೋಡುತ್ತ ಅಳಬೇಕೆಂಬುದನ್ನೂ ಮರೆತಿದ್ದ ಸುತ್ತ ಸೇರಿದ ಜನವೆಲ್ಲವೂ ಈಗ ವಾಸ್ತವಕ್ಕೆ ಬಂದು ಅವನೊಂದಿಗೆ ತಮ್ಮ ಶ್ರುತಿಯನ್ನೂ ಸೇರಿಸಿದರು. ಅಲ್ಲಿಯವರೆಗೂ ಅಲ್ಲಿದ್ದ ಬೆರಗೆಲ್ಲವೂ ಮಾಯವಾಗಿ ರೋಧನದ ದನಿ ಎಲ್ಲಾ ಕಡೆಯೂ ತುಂಬತೊಡಗಿತು...

ವಾದ್ಯದವರು ಬಂದರು. ಹೂವಿನ ಪಲ್ಲಕ್ಕಿ ಬಂತು. "ಮಾತಾಯಿ ಇನ್ನೆಂಥಾ ಪುಣ್ಯಾತ್ಮಳವ್ವ ಇವ್ಳು. ಇರೋತಂಕ ಮಾರಾಣಿ ಅಂಗೇ ಇದ್ಲು. ಸತ್ ಮ್ಯಾಕೂ ಇಂಗೆ ಮಾರಾಣಿ ಅಂಗೆ ಪಲ್ಲಕ್ಕಿ ಮೇಲೆ ಕುಂತು ಮ್ಯಾಲಿನ್‌ಲೋಕಕ್ಕೆ ಓಗ್ತವ್ಳಲ್ಲ" ಎಂದು ಅಲ್ಲಿ ನೆರೆದಿದ್ದ ಹೆಂಗಳೆಯರೆಲ್ಲಾ ಅವಳು ಇರುವಾಗ ಪಟ್ಟುಕೊಂಡಿದ್ದ ಹಾಗೆಯೇ ಈಗಲೂ ರೋಧಿಸುತ್ತಿರುವಾಗಲೂ ಒಂದು ವಿಧದ ಈರ್ಷೆಯನ್ನೇ ಅನುಭವಿಸಿದರು. ಅಂತೂ ರೋಧನದ ಮಧ್ಯವೇ ವಸುಮತಿ ಮಾರಾಣಿಯಂತೆಯೇ ಪಲ್ಲಕ್ಕಿಯಲ್ಲಿ ಕುಳಿತಳು. ವಾದ್ಯಗಳು ಜೋರಾಗಿ ಮೊಳಗತೊಡಗಿದವು. ಆ ಬೀದಿಯುದ್ದಕ್ಕೂ ಅಲ್ಲಲ್ಲಿ "ವಸುಮತಿ ಮತ್ತೊಮ್ಮೆ ಹುಟ್ಟಿ ಬಾ" ಎನ್ನುವ ಅವಳ ನಗುಮುಖ ಹೊತ್ತ ಪೋಸ್ಟರುಗಳು! ಎಲ್ಲರೂ ದಾರಿಯುದ್ದಕ್ಕೂ ಮಂಡಕ್ಕಿ, ಹೂವು ಚೆಲ್ಲುತ್ತಾ ಸಾಗಿದರು.

ಎಲ್ಲಾ ಕ್ರಿಯೆಗಳೂ ಮುಗಿದು ಕುಣಿಯೊಳಗೆ ಇಳಿಸಿ ಮಣ್ಣುಮುಚ್ಚಿ ಬಂದಾಗಲೂ ಸೇರಿದ ಜನಕ್ಕೆ ಏನೋ ಒಂದು ಹೊಸ ಸಿನಿಮಾವನ್ನು ನೋಡಿ ಬಂದಂತಾಗಿತ್ತು. ತಲೆಯ ಮೇಲೆ ಕೈಹೊತ್ತು ಕೂತಿದ್ದ ನಂಜುಂಡನ ಹೆಗಲ ಮೇಲೆ ಕೈಹಾಕಿದ ಮಾವ ಮಾದೇಶು, "ನಂಜುಂಡಾ, ನರಳ್ತಿದ್ದವ್ಳು ಸಿವನ ಪಾದ ಸೇರ್ಕಂಡ್ಲು ಕಣಾ. ಆವಮ್ಮಂಗೆ ಜೀವದ್ ಮ್ಯಾಗೆ ಭೋ ಪಿರೂತಿ ಇತ್ತು. ಸಾಯ್ವಾಗ್ಲೂ ಅಂಗೇ ಇರ್ಬೇಕನ್ಕಂಡ್ಲೇನೋ. ಊರು ಉಪ್ಕಾರ ಅರೀದು; ಎಣ ಸಿಂಗಾರ ಅರೀದು ಅಂತ ಗಾದೆ ಮಾತದೆ. ವೋದದ್ದಷ್ಟೇ ಸತ್ಯ. ಇರೋತಂಕ ನಮ್ದುಷ್ಟೇಯ. ಸತ್ಮೇಲೆ ಎಲ್ಲಾ ಒಂದೇಯ. ಇರ್ಲಿ ಬಿಡು. ನೀನೂ ಅವ್ಳಾಸೆ ತೀರ್ಸಿದೀಯಾ. ನಿಂಗ್ ಆ ಸಮಾಧಾನ ಇರ್ತದೇಳು. ಇನ್ನೂ ಮಕ್ಳು ಚಿಕ್ಕವ್ರು ಅವ್ರುನ ಸಾಕೋ ಕತೆ ನೋಡ್ಬೇಕು. ಈಗೇಳಪ್ಪಾ" ಎನ್ನುತ್ತಾ ಎಬ್ಬಿಸಿದರು.

***

ಉತ್ತರವಿಲ್ಲದ ಪ್ರಶ್ನೆಗಳು

– ಬೆಂ.ಶ್ರೀ. ರವೀಂದ್ರ

ಸೂರ್ಯ ಪಶ್ಚಿಮಕ್ಕೆ ಜಾರುತ್ತಿದ್ದಂತೆ
ನಮ್ಮ ಕಣ್ಣವೆಗಳು ದೊಡ್ಡದಾಗಿ ಬಿಚ್ಚಿಕೊಳ್ಳುತ್ತವೆ
ಕಿವಿಯ ಹಾಲೆಗಳು ನಿಮಿರುತ್ತವೆ
ಮೂಗು ಹೆಣದ ವಾಸನೆಯನ್ನು ಆಘ್ರಾಣಿಸುತ್ತದೆ

ನಾವು ಆರಂಭಿಸದ ಯುದ್ಧ
ನಾವಿಲ್ಲದ ಯುದ್ದ
ನಮಗಾಗಿ ಎಂದು ನುಡಿಯಲಾದ ಯುದ್ಧ
ನಾವು ನಿಲ್ಲಿಸಲಾಗದ ಯುದ್ದ
ಅನಿಶ್ಚಿತತೆಯೇ ನಿಶ್ಚಿತವಾಗಿ
ನೆಲಮುಗಿಲು ಆವರಿಸಿದ ಯುದ್ಧರಕ್ಕಸಿಯ
ಗರ್ಭದಲಿ ಮಡುಗಟ್ಟಿದ ನಮ್ಮ ಕನಸುಗಳು
ಸುರಕ್ಷಿತವಾಗಿ ಇಳಿಯುವುದೆ ಧರೆಗೆ
ಯಾವ ಮಿಸೈಲಿಗೋ ದ್ರೋಣಿಗೋ ಛಿದ್ರವಾಗಬಹುದು;
ಗರ್ಭಪಾತವಾಗಬಹುದು

ನಮ್ಮ ಶಾಲೆಗಳ ಗಂಟೆ ಈಗ ಹೊಡೆಯುವುದಿಲ್ಲ
ಪಾಳುಬಿದ್ದ ನಮ್ಮ ಹೊಲಗಳಲ್ಲಿ ಹುಲ್ಲೂ ಹುಟ್ಟುವುದಿಲ್ಲ
ನಮ್ಮ ಮನೆ ಮನದ ಮಾಡುಗಳು
ಮಿಸೈಲ್ ಹೊಡೆತದಲ್ಲಿ ತೂತಾಗಿವೆ
ತಟ್ಟೆಗಳು ಖಾಲಿಯಾಗಿ ಗಂಜಿ ಕೇಂದ್ರದಲ್ಲಿ
ಬಾಯಿ ತೆರೆದುಕೊಂಡಿವೆ
ಹರಕು ಕೈ ಚೀಲದಲ್ಲಿ ಮುರುಕು ವಸ್ತುಗಳನಿಟ್ಟು
ಹೊರಡಬೇಕಿದೆ ಹುಡುಕಿ ಸುರಕ್ಷತೆಯ ಮಾಡು

ಕೊನೆಗಾಣದ ದೀಪವಾರಿಸಿದ ರಾತ್ರಿಗಳು
ಕಿವಿ ಹರಿಯುವ ಸೈರನ್ನುಗಳು ಮದ್ದುಗುಂಡುಗಳು
ಮಂಕು ಮಾಡುವ ಸದ್ದುಗಳು
ಹಿತ್ತಲಲಿ ತೋಡಿದ ಬಂಕರುಗಳು
ಪರ್ವತಗಳಾಚೀಚೆ ಅಕಾಲದ ರಕ್ತ ದೀಪಾವಳಿ

ಲವಲವಿಕೆಯಿಲ್ಲದ ಭೀತಿತುಂಬಿದ ಮೌನ
ಧ್ಯಾನಕ್ಕೆ ಇದು ಸರಿಯಾದ ಸಮಯವೇ
ಉಸಿರುಗಟ್ಟುವ ವಿಚಿತ್ರ ಪರ್ವ

ಮರೆಮಾಚಿಕೊಂಡ ಅಶ್ವಥ್ಥಾಮರು
ಅಲೆಯುತ್ತಿದ್ದಾರೆ ರಾತ್ರಿಗಳಲ್ಲಿ
ಉಪ ಪಾಂಡವರ ಹುಡುಕಿ
ವ್ಯೂಹದೊಳಿದ ಅಭಿಮನ್ಯುಗಳಂತಾಗದೆ
ಗೆಲ್ಲುವುವೆ ಲವಕುಶರಂತೆ

ನಲವತ್ತೇಳರಲಿ ಅಡ್ಡಡ್ಡ ಸೀಳಿ
ಸೋದರರನೆರಡು ಮಾಡಿ
ಅಣ್ಣ ತಮ್ಮರ ದಾಯಾದಿಗಳ ಮಾಡಿ
ನಗುತ್ತಿದ್ದ ಕೆಂಮೂತಿಯ ರಕ್ಕಸನೀಗ ಶಸ್ತ್ರಾಸ್ತ್ರ ವ್ಯಾಪಾರಿ
ಸ್ಯಾಂ ಚಿನ್ ರಷ್ ಫ್ರಂ ಎಲ್ಲರೂ ತುಂಬಿಕೊಂಡಿದ್ದಾರೆ
ಶಸ್ತ್ರಾಸ್ತ್ರ ಕೋಠಿಗಳು.

ಕಾಡುತ್ತಿವೆ ಆಚೀಚೆಯ ನೆನಪುಗಳು
ಕಾಣೆಯಾದ ಮಗಳು
ದೂರವಾದ ಚಿಕ್ಕಪ್ಪ
ಎಂದು ಎಲ್ಲವೂ ಸರಿಯಾದಾವು

ಭಯಾತ್ಪಾದಕತೆಯ ಉಗ್ರತೆಯಲಿಡಿಯಲಿ
ಮಾನವತೆಯ ನರಳು
ಪಹಲ್ಗಾಮಿನ ಪ್ರವಾಸಿಗಳು
ಪೂಂಚ್‌ನ ಶಾಲೆಯ ಪುಟ್ಟ ಮಕ್ಕಳು
ಹಾಸಿಗೆಯೇ ಮಸಣವಾದ ಹಸಿ ಜೀವಗಳು
ಉತ್ತರವಿಲ್ಲದ ಪ್ರಶ್ನೆಗಳು

ತನಗುಂಟು ಅಸೀಮ ಶಕ್ತಿಯೆಂದು ಭ್ರಮಿಸಿಹ
ಮತಾಂಧ ಅಸಿಮನೇ
ಔರಂಗಜೇಬನ ಅಪರಾವತಾರವೇ
ಮನುಜರು ಬೇರೆ ಬೇರೆಯೆಂದು ಸಾರುವೆಯಾ
ಮುನೀರ್ ನಾವೀಗ ಮುನಿದಿದ್ದೇವೆ
ಕಂಸ ನಿನಗೆ ಕೃಷ್ಣ ಕಾಣುತ್ತಿಲ್ಲ


ನೋವು ನೂರಾರಿರಲಿ
ನಾವೆಲ್ಲ ಈಗ ಒಂದು
ಹಿಂದು ಮುಸ್ಲಿಮ್ ಕ್ರೈಸ್ತರಲ್ಲ
ನಾವು ಭಾರತೀಯರು
ಆಸೇತು ಹಿಮಾಚಲ ನಾವು ಅಚಲ
ನಂಬಿಕೆಯಿದೆ ಇಂದಿನ ಬವಣೆ ಹಣಾಹಣಿ
ಹೇಣೆದೀತು ನಾಳೆಗೆ ಶಾಂತಿ ಸುಂದರ ಬದುಕು
ನಂಬಿಕೆಯಿದೆ ತಾಯಿ ಭಾರತಿಯ ಮೇಲೆ
ನೋಗ ಹೊತ್ತ ನಾಯಕರ ಮೇಲೆ.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 237

ಅಧ್ಯಕ್ಷರ ಅನಿಸಿಕೆಗಳು



– ಜಿ.ಎನ್. ನರಸಿಂಹ ಮೂರ್ತಿ

ಎಲ್ಲರಿಗೆ ನಮಸ್ಕಾರ

ಈ ದಾಸೋಹದ ಅಧ್ಯಕ್ಷನನ್ನಾಗಿ ಮಾಡಿರುವುದಕ್ಕೆ ಶ್ರೀ ಕೆ.ಎನ್.ಮಹಾಬಲ ಅವರಿಗೂ ಶ್ರೀ ಬೆಂ.ಶ್ರೀ.ರವೀಂದ್ರ ಅವರಿಗೂ ಧನ್ಯವಾದಗಳು. ನಾನು ದಾಸೋಹಕ್ಕೆ ಯಾವ ರೀತಿಯಲ್ಲಿಯೂ ಕೊಡುಗೆ ನೀಡದಿದ್ದರೂ ನನಗೆ ಈ ಅವಕಾಶ ದೊರೆತಿದೆ. ಎಲ್ಲ ಪ್ರತಿಭಾನ್ವಿತರ ಪ್ರಸ್ತುತಿಗಳನ್ನು ಕೇಳುವ ಅವಕಾಶ ದೊರೆಯುವುದೆಂಬ ಕಾರಣದಿಂದಲೂ ಮಹಾಬಲರ ಸ್ನೇಹಪೂರ್ವಕ ವಿನಂತಿಗಾಗಿಯೂ ಇದನ್ನು ಒಪ್ಪಿಕೊಂಡೆ.

1. ಟಿ.ಆರ್. ಉಷಾರಾಣಿ – 'ಕಲ್ಪನಾ ಅವರ ಬದುಕು-ಒಂದು ನೋಟ'

ಮೊದಲಿಗೆ ಶ್ರೀಮತಿ ಉಷಾರಾಣಿಯವರು 'ಕಲ್ಪನಾ ಅವರ ಬದುಕು – ಒಂದು ನೋಟ' ಎಂಬ ಲೇಖನವನ್ನು ಪ್ರಸ್ತುತಿ ಗೊಳಿಸಿದರು. ಕಲಾವಿದರ ಬದುಕು ಅವರು ಅಭಿನಯಿಸುವ ಪಾತ್ರಗಳಷ್ಟು ಸುಂದರವಾಗಿರುವುದಿಲ್ಲ ಎನ್ನುವುದಕ್ಕೆ ಎದ್ದು ಕಾಣುವ ಉದಾಹರಣೆ ಎಂದರೆ ಕಲ್ಪನಾ ಎನ್ನಬಹುದು. ಕಲ್ಪನಾ ಅವರ ಬಗ್ಗೆ ಅನೇಕ ಮಾಹಿತಿಗಳನ್ನು ಉಷಾರಾಣಿಯವರು ಸಂಗ್ರಹಿಸಿದ್ದಾರೆ. ಅವರು ಚಿಕ್ಕವಾರಿಗಿದ್ದಾಗ ಅವರ ಮನೆಗೆ ಕಲ್ಪನಾ ಅವರು ಬಂದದ್ದನ್ನು ಹಿರಿಯರು ಹೇಳಿದರೆಂದು ನೆನೆದುಕೊಂಡಿದ್ದಾರೆ. ತುಂಬ ಭಾವುಕಜೀವಿಯ ಬಗ್ಗೆ ಒಂದು ವಾಸ್ತವ ನೆಲೆಗಟ್ಟಿನ ಲೇಖನ. ಇದು ಇನ್ನಷ್ಟು ವಿಸ್ತಾರವನ್ನು ಕಂಡು ಪ್ರಕಟವಾಗಲಿ.

2. ಎಂಎಸ್ಸೆನ್ – 'ಸಿಂಹಾನ ಕೆಣಕಿದ ಕೋತಿ'

ಎಂಎಸ್ಎನ್ ಅವರು ಬರವಣಿಗೆಯಲ್ಲಿ ಸಿದ್ಧಹಸ್ತರು. ಯುದ್ಧದಂತಹ ಗಂಭೀರ ವಿಷಯವನ್ನು ಹಾಸ್ಯದ **ಲೇಪನದೊಂ**ದಿಗೆ ಲಲಿತ ಶೈಲಿಯಲ್ಲಿ ನಿರೂಪಿಸುವುದು ಅವರ ವೈಶಿಷ್ಟ್ಯ. ವಿಶ್ವ-ವಿಶಾಲು ಅವರ ಸಂಭಾಷಣೆಯಲ್ಲಿ ಪ್ರಸಕ್ತ ಯುದ್ಧದ ಪರಿಸ್ಥಿತಿ ಇಲ್ಲಿ ಅನಾವರಣವಾಗಿದೆ. ಚಿಂತನೆಗಳು ಮಡುಗಟ್ಟಿವೆಯಾದರೂ ಭಾರ ಒಂದು ಚೂರೂ ಇಲ್ಲ. ಅಳುವ ಕಡಲಿನ ಮೇಲೆ ತೇಲಿಬಂತು ನಗೆಯ ಹಾಯಿದೋಣಿ ಎಂಬ ಕವನದ ಸಾಲುಗಳನ್ನು ನೆನಪಿಸಿಕೊಳ್ಳಬಹುದು.

3. ನಾಗರತ್ನ ಚಂದ್ರಶೇಖರ್ – 'ಗಟ್ಟಿ ಮೇಳ'

ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು ಕಿರುಪ್ರಹಸನವೊಂದನ್ನು ಮಂಡಿಸಿದ್ದಾರೆ. ಆರು ನಿಮಿಷಗಳಲ್ಲಿ ಒಂದು ಪ್ರಹಸನವನ್ನು ಸಿದ್ಧಪಡಿಸಿ ಮಂಡಿಸುವುದು ಕಷ್ಟವೇ. ಈಗಾಗಲೇ ಪ್ರಬಂಧಕಾರ್ತಿ, ವೈಚಾರಿಕ ಲೇಖನಗಳ ಸೃಷ್ಟಿಕರ್ತೆ ಎಂಬ ನಾನಾ ಬಗೆಯ ವಿಶೇಷಣಗಳನ್ನು ಹೊಂದಿರುವ ಶ್ರೀಮತಿ ನಾಗರತ್ನ ಅವರ ಈ ಪ್ರಹಸನ ನಗೆಯನ್ನು ತರಿಸುತ್ತಲೇ ವಿವಾಹಾಸಕ್ತರ ವಿವಾಹ ಮಾಡಿಸಲು ಇರುವ ಸಂಸ್ಥೆಗಳ ವಿದ್ಯಮಾನಗಳ ಬಗ್ಗೆ ಬೆಟ್ಟು ಮಾಡುತ್ತದೆ.

ಜಿ.ಎನ್. ನರಸಿಂಹ ಮೂರ್ತಿ

ಮೂಲತಃ ತುಮಕೂರು ಜಿಲ್ಲೆ ಗುಬ್ಬಿಯವರು. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸ ಗುಬ್ಬಿಯಲ್ಲಿ. ತುಮಕೂರಿನಲ್ಲಿ ಬಿಎಸ್ಸಿ ಪದವಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಗಣಿತದಲ್ಲಿ ಎಂ.ಎಸ್ಸಿ. ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ಮಾಡುತ್ತಿರುವಾಗಲೇ 1972ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ಬೆಂಗಳೂರು ನಗರ ಶಾಖೆಯಲ್ಲಿ ಉದ್ಯೋಗ.

ಬಾಲ್ಯದಿಂದಲೇ ಸಾಹಿತ್ಯ, ಕನ್ನಡ ಭಾಷೆಯಲ್ಲಿ ಆಸಕ್ತಿ. 1973ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ನಗರ ಶಾಖೆಯಲ್ಲಿ ಕನ್ನಡ ಸಂಘ ಸ್ಥಾಪನೆಗೆ ಕಾರಣಕರ್ತರಾದ ಪ್ರಮುಖ ರೂವಾರಿಗಳ ಪೈಕಿ ನರಸಿಂಹ ಮೂರ್ತಿಯವರೂ ಒಬ್ಬರು. ನಂತರ ನಿರಂತರವಾಗಿ ಬ್ಯಾಂಕನ್ನಡ ಚಟುವಟಿಕೆಯಲ್ಲಿ ಸಕ್ರಿಯ. ಪ್ರಾ.ಎಚ್ಚೆಸ್ಕೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದ ಬ್ಯಾಂಕಿಂಗ್ ಕಮ್ಮಟಗಳಲ್ಲಿ ಭಾಗಿ. 'ಬ್ಯಾಂಕಿಂಗ್ ಪ್ರಪಂಚ' ನಿಯತಕಾಲಿಕಕ್ಕೆ ಖಾಯಂ ಬರಹಗಾರ. 'ಬ್ಯಾಂಕಿಂಗ್ ನಿಘಂಟು' ರಚನೆಯಲ್ಲಿ ಪ್ರಮುಖ ಪಾತ್ರ..

1990ರ ದಶಕದಲ್ಲಿ ಬ್ಯಾಂಕುಗಳಲ್ಲಿ ಕಂಪ್ಯೂಟರ್ ಬಳಕೆ ತಳ ಊರಲು ಆರಂಭ. ಕನ್ನಡದಲ್ಲೂ ಗಣಕ ವ್ಯವಹಾರ ನಡೆಸುವಂತಾಗಬೇಕು ಎಂಬುದು ನರಸಿಂಹಮೂರ್ತಿಯವರ ಕನಸು. ಅದರ ಫಲವಾಗಿ 1996ರಲ್ಲಿ ಹಾಸನದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕನ್ನಡ ಮತ್ತು ಗಣಕಗಳು' ಎಂಬ ಪ್ರಬಂಧ ಮಂಡನೆ. 1997ರಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ಗಣಕ ಪರಿಷತ್ತಿನ ಚಟುವಟಿಕೆಗಳಲ್ಲಿ ಹಲವು ಹಿರಿಯರೊಂದಿಗೆ ಇವರದೂ ಮಹತ್ವದ ಪಾತ್ರ. 2002ರಲ್ಲಿಯೇ ಬ್ಯಾಂಕ್ ಸೇವೆಯಿಂದ ಸ್ವಯಂನಿವೃತ್ತಿ ಪಡೆದ ನರಸಿಂಹಮೂರ್ತಿ, ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು ಕನ್ನಡ ಗಣಕ ಪರಿಷತ್ತಿಗೆ. ಪ್ರಸ್ತುತ ಅವರು ಕನ್ನಡ ಗಣಕ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ.

ಈಗ ಗಣಕಯಂತ್ರದಲ್ಲಿ ಕನ್ನಡ ಬೆರಳಚ್ಚಿಸುವವರು ಹೆಚ್ಚಾಗಿ ಬಳಸುವುದು 'ನುಡಿ' ತಂತ್ರಾಂಶವನ್ನೇ. ಇದರ ಆವಿಷ್ಕಾರ ಕನ್ನಡ ಗಣಕ ಪರಿಷತ್ತಿನದು. ಇದು ಕನ್ನಡ ಲಿಪಿ ತಂತ್ರಜ್ಞಾನದಲ್ಲಿ ಶಿಷ್ಟತೆ ಮತ್ತು ಏಕರೂಪತೆ ತರುವ ವಿಚಾರದಲ್ಲಿ ಪರಿಷತ್ತು ಮಾಡಿದ ಬಹುದೊಡ್ಡ ಸಾಧನೆ. ನುಡಿ ತಂತ್ರಾಂಶ ಎಲ್ಲರಿಗೂ ಉಚಿತವಾಗಿ ಲಭ್ಯ. 'ವಾಗಕ್ಷರ' ಎಂಬ ಧ್ವನಿ ಕಡತಗಳನ್ನು ಕನ್ನಡ ಪಠ್ಯಕ್ಕೆ ಪರಿವರ್ತಿಸುವ ಸಾಧನವೂ ಇದೀಗ ಬಳಕೆಗೆ ಸಿದ್ಧ. ಮೂರ್ತಿಯವರ ಮುಂದಾಳತ್ವದಲ್ಲಿ ಗಣಕ ಪರಿಷತ್ತು ಗಣಕದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಮಾಡಿದ ಹಲವು ಸಾಧನೆಗಳಲ್ಲಿ ಕೆಲವು:

1. ಕನ್ನಡ-ಕನ್ನಡ ಸಂಕ್ಷಿಪ್ತ ನಿಘಂಟು, ಪಂಪನ ಎರಡು ಕಾವ್ಯಗಳ ಅಡಕಮುದ್ರಿಕೆ (ಸಿಡಿ) ರಚನೆ; 2. ಮೈಸೂರು ವಿ.ವಿ.ಯ 14 ಸಂಪುಟಗಳ ಕನ್ನಡ ವಿಶ್ವಕೋಶದ ಗಣಕೀಕರಣ; 3. ಕುಮಾರವ್ಯಾಸ ಭಾರತದ ಮುದ್ರಣ, ಪರಿಷ್ಕರಣೆ, ಗದ್ಯಾನುವಾದ, ಸಿ.ಡಿ. ಪ್ರಕಟಣೆ; 4. ಬಿ.ಎಂ.ಶ್ರೀ. ಅವರ ಸಮಗ್ರ ಕೃತಿಗಳ ಜಾಲತಾಣ; 5. ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನೂರಾರು ಕವಿಗಳ ಮಾಹಿತಿಯ ಜಾಲತಾಣ; 6. ನಿಸಾರ್ ಅಹಮ್ಮದ್ ಅವರ ಸಮಗ್ರ ಕೃತಿಗಳ ಸಿ.ಡಿ.; 7. ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಅಗತ್ಯವಾದ ಗಣಕಯಂತ್ರ ಬಳಕೆ ಕುರಿತ ಪುಸ್ತಕಗಳ ಪ್ರಕಟಣೆ, ತರಬೇತಿ ಇತ್ಯಾದಿ.

ನರಸಿಂಹಮೂರ್ತಿಯವರಿಗೆ ಸಂದ ಪ್ರಶಸ್ತಿ, ಪುರಸ್ಕಾರಗಳ ಪಟ್ಟಿ ಬಹಳ ದೊಡ್ಡದು. ಕರ್ನಾಟಕ ಸರ್ಕಾರದ ಹಿರಿಯ ನಾಗರಿಕ ಪ್ರಶಸ್ತಿ ದೆಹಲಿಯ ಮಂಥನ ಸಂಸ್ಥೆ, ವಿ.ಸೀ.ಸಂಪದ ಸಂಸ್ಥೆ, ಹಾಸ್ಯಬ್ರಹ್ಮ ಟ್ರಸ್ಟ್, ಕರ್ನಾಟಕ ಕನ್ನಡ ಬಳಗದ ಪ್ರಶಸ್ತಿಗಳು ಅವುಗಳಲ್ಲಿ ಮುಖ್ಯವಾದುವು.

ನಮ್ಮ ಸಾಹಿತ್ಯ ದಾಸೋಹ ತಂಡದ ಮೊದಲನೆಯ ದಾಸೋಹದಿಂದಲೂ ಸಕ್ರಿಯರಾಗಿದ್ದು ಮಾರ್ಗದರ್ಶನ ನೀಡುತ್ತಿರುವ, ಸಮನ್ವಯ ಸಮಿತಿ ಕನ್ನಡವೇ ಸತ್ಯ ಕನ್ನಡವೇ ನಿತ್ಯ ವೇದಿಕೆಯ ಹಿರಿಯ ಸದಸ್ಯರಾಗಿರುವ ಜಿ.ಎನ್.ನರಸಿಂಹ ಮೂರ್ತಿಯವರು ಇಂದಿನ ದಾಸೋಹದ ಅಧ್ಯಕ್ಷತೆ ವಹಿಸುತ್ತಿರುವುದು ಅಭಿನಂದನೀಯ.

***

4. ಗಣಪತಿ ಹೆಗಡೆ – 'ಕಾಂತಾ ಸಮ್ಮಿತ'

ಶ್ರೀ ಗಣಪತಿ ಹೆಗಡೆ ಅವರು ಕಾಂತಾಸಮ್ಮಿತ ಎಂಬ ಲೇಖನವನ್ನು ಓದಿದ್ದಾರೆ. ಅವರು ವಿದ್ವಾಂಸರು. ಕನ್ನಡ, ಸಂಸ್ಕೃತಗಳನ್ನು ಚೆನ್ನಾಗಿ ಬಲ್ಲವರು. ಕಾಂತಾ ಸಮ್ಮಿತದಂತೆ ಉಪದೇಶವಿದ್ದರೆ ಯಾರಾದರೂ ಅದನ್ನು ಅನುಸರಿಸಿಯಾರು ಎಂಬುದು ಅವರ ನಿರೀಕ್ಷೆ. ಈ ಕುರಿತು ಅನೇಕ ಮಾಹಿತಿಗಳನ್ನು ನಮ್ಮ ಮುಂದಿರಿಸಿದ್ದಾರೆ. ಕಾವ್ಯಮೀಮಾಂಸೆ ಅವರಿಗೆ ತಿಳಿಯದ್ದೇನೂ ಅಲ್ಲ. ಕಾಂತಾ ಸಮ್ಮಿತ ಬರಿಯ ಉಪದೇಶವೇ ಆಗಿರಬೇಕಿಲ್ಲ. ಅದೊಂದು ಸಂವಹನ ಶೈಲಿಯಾಗಿಯೂ ಇರಬಹುದು. ಒಂದು ಕಾವ್ಯವನ್ನು ಓದುವಾಗ ಅದು ಕಾಂತೆಯ ಮೆಲುನುಡಿಯಂತೆ ಕೇಳುತ್ತಿದ್ದರೆ ಆ ಕಾವ್ಯ ಯಶಸ್ವಿಯಾದೀತು ಎಂಬ ಅಭಿಪ್ರಾಯವಿದೆಯಲ್ಲ. ಅದು ಉಪದೇಶಕ್ಕೂ ಅನ್ವಯಿಸಬಹುದು ಎಂಬುದು ಹೆಗಡೆಯವರ ಅಭಿಪ್ರಾಯ. ಇಲ್ಲಿ ಸಂಕ್ಷಿಪ್ತವಾದ ವಿವರಗಳಿವೆ. ಇವೆಲ್ಲ ಸೇರಿ ಒಂದು ದೊಡ್ಡ ಲೇಖನಕ್ಕೆ ಮಾಡಿಕೊಂಡ ಟಿಪ್ಪಣಿಯಂತಿದೆ. ಇದು ವಿಸ್ತೃತ ಲೇಖನವಾಗಿ ಬರಲಿ ಎಂದು ಹಾರೈಸುತ್ತೇನೆ.

5. ಜೆ.ಎನ್. ಜಗನ್ನಾಥ್ – 'ಮನೆಯೇ ಶಾಲೆ'

ಶ್ರೀ ಜಗನ್ನಾಥ್ ಜೆ.ಎನ್. ಅವರು 'ಮನೆಯೇ ಶಾಲೆ' ಎಂಬ ಕಿರುಬರಹವೊಂದನ್ನು ಮಂಡಿಸಿದ್ದಾರೆ. ಇದರಲ್ಲಿ ಅಡಕವಾದ ಕೆಲವು ಮಾತುಗಳನ್ನಾಡಿದ್ದಾರೆ. ಅಮ್ಮನೇ ಮೊದಲ ಗುರು ಎಂಬ ಸತ್ಯವನ್ನು ಪ್ರಸ್ತಾಪಿಸಿದ್ದಾರೆ. ಹಣ ಬ್ಯಾಂಕಿಂಗನ್ನು ಕುರಿತು ಬರೆಯುವುದರ ಜೊತೆಗೆ ಹಳಗನ್ನಡ ಕಾವ್ಯಗಳ ಪರಿಚಯ ಕಾರ್ಯಕ್ರಮಗಳನ್ನು ನಡೆಸುವ ಶ್ರೀ ಜಗನ್ನಾಥ್ ಅವರ ಲೇಖನಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಲೇಖನಗಳು ಮೂಡಿಬರಲಿ.

6. ಧೀರೇಂದ್ರ ಎಸ್. – 'ರಂಗಭೂಮಿಯ ರೋಚಕ ಪ್ರಸಂಗಗಳು'

ಶ್ರೀ ಎಸ್.ಧೀರೇಂದ್ರ ಅವರು ಖ್ಯಾತ ನಟರೂ ರಂಗಕರ್ಮಿಗಳೂ ಆಗಿರುವವರು. ಅವರು ತಮ್ಮ ನೆನಪಿನ ಬುತ್ತಿಯಿಂದ ರಂಗಭೂಮಿಯ ಅವರ ಅನುಭವದ ಅನೇಕ ಸಂಗತಿಗಳನ್ನು ಇಲ್ಲಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಅವರಿಗೆ ಹಾರ್ದಿಕ ಅಭಿನಂದನೆಗಳು. ಅದು ನಾಣಿಯವರದ್ದಿರಬಹುದು, ಬಿ.ಆರ್.ಜಯರಾಂ ಅವರದ್ದಿರಬಹುದು, ಸಿ.ಆರ್. ಸಿಂಹರದ್ದಿರಬಹದು, ವಿಷ್ಣುವರ್ಧನ್ ಅವರದ್ದಾಗಿರಬಹುದು, ಯಾರದೇ ಇರಲಿ ನಮಗೆ ಚೇತೋಹಾರಿ ಅನುಭವವನ್ನು ನೀಡುತ್ತದೆ, ನಗೆಯನ್ನುಕ್ಕಿಸುತ್ತದೆ. ಧೀರೇಂದ್ರ ಅವರ ನೆನಪಿನ ಬುತ್ತಿಯಿಂದ ನಾವು ಮೊಗೆದುಕೊಳ್ಳಬಹುದಾದದ್ದು ತುಂಬಾ ತುಂಬಾ ಸಂಗತಿಗಳಿವೆ ಎನಿಸುತ್ತದೆ. ಅದಕ್ಕೆ ಅವರು ಅವಕಾಶ ಮಾಡಿಕೊಡಬೇಕು ಎಂದು ವಿನಂತಿಸುತ್ತೇನೆ.

7. ಬೆಂ.ಶ್ರೀ. ರವೀಂದ್ರ – 'ಉತ್ತರವಿಲ್ಲದ ಪ್ರಶ್ನೆಗಳು" (ಕವನ)

ಶ್ರೀ ಬೆಂ.ಶ್ರೀ. ರವೀಂದ್ರ ಅವರು ಈಗಾಗಲೇ ಅನೇಕ ಕವನ ಸಂಕಲನಗಳನ್ನು ಹೊರತಂದಿರುವ ಕವಿ. ಸದಾ ಸಮಕಾಲೀನ ಸಂಗತಿಗಳಿಗೆ ತುಡಿಯವ ಮನಸ್ಸು ಅವರದು. ಇಲ್ಲಿ ಅವರು ಮಂಡಿಸಿದ ಒಂದು ಕವನ 'ಯುದ್ದ'. ಯುದ್ಧವೊಂದು ತಂದಿಡುವ ಪಡಿಪಾಟಲುಗಳು, ಅದರ ಹಿಂದಿರುವ ಹುನ್ನಾರಗಳು, ಅದಕ್ಕೆ ಸಂಬಂಧಿಸಿದವರ ವ್ಯಕ್ತಿತ್ವಗಳನ್ನು, ಅನೇಕ ಉತ್ತರಿಸಲಾರದ ಪ್ರಶ್ನೆಗಳನ್ನು ಬಿಚ್ಚಿಡುತ್ತಲೇ ಕವನ ಆಶಾಭಾವನೆಯಿಂದ ಕೊನೆಗಾಣುತ್ತದೆ. ಎಲ್ಲಕ್ಕೂ ಒಂದು ಕೊನೆ ಇರಬೇಕಲ್ಲವೆ? ಇನ್ನೊಂದು ಕವನ ಮೊದಲ ಕವನದ ಮುಂದುವರಿಕೆಯಾಗಿ ಬಿಚ್ಚಿಕೊಳ್ಳುತ್ತದೆ. ಇಂತಹ ಸನ್ನಿವೇಶಗಳಲ್ಲಿ ನಮ್ಮ ಮನೋಭೂಮಿಕೆ ಹೇಗಿರಬೇಕು ಎಂಬುದನ್ನು ಚರ್ಚಿಸುತ್ತದೆ. ಕವನ ದೇಶದ ಜನರೆಲ್ಲ ಒಗ್ಗಟ್ಟಾಗಿ ದೇಶದ ಒಳಿತಿಗಾಗಿ ಬೆಂಬಲ ನೀಡಬೇಕು ಎಂದಿದೆ. ಭಾರತಮಾತೆಗೆ ಗೆಲುವಿನ ಹೂಮಾಲೆಯನ್ನು ಹಾಕುವ ಆಶಯವನ್ನು ಕವಿತೆ ಹೊಂದಿದೆ. ಇದನ್ನು ಬಿಟ್ಟು ಬೇರೆ ಯಾವ ಆಶಯವನ್ನು ಇರಿಸಿಕೊಳ್ಳಲು ಸಾಧ್ಯ?

8. ಪೂರ್ಣಿಮ ಭಗವಾನ್ – 'ತಾನೊಂದು ಬಗೆದರೆ ಮಾನವ'

ಶ್ರೀಮತಿ ಪೂರ್ಣಿಮ ಭಗವಾನ್ ಅವರು ತಮ್ಮ ಕಾಶ್ಮೀರ ಪ್ರವಾಸದ ನೆನಪುಗಳನ್ನು ದಾಖಲಿಸಿದ್ದಾರೆ. ಲೇಖನ ತುಂಬ ಆಕರ್ಷಕವಾಗಿ ಮೂಡಿಬಂದಿದೆ. ಆದರೆ ಈ ಸಂದರ್ಭದಲ್ಲಿ ಬೇರೆ ಬೇರೆ ಅನುಭವಗಳ ಅಭಿವ್ಯಕ್ತಿಗಳನ್ನು ಈಗ ನಾವು ಕಾಣುತ್ತಿದ್ದೇವೆ. ಇಂತಹವು ತಾತ್ಕಾಲಿಕ ಎಂದೇ ನಾವು ಭಾವಿಸುವುದು ಅಗತ್ಯ ಎನಿಸುತ್ತದೆ. ಮತ್ತೊಮ್ಮೆ ಪರಿಸ್ಥಿತಿ ತಿಳಿಯಾದಾಗ ಪೂರ್ಣಿಮಾ ಅವರ ಕಾಶ್ಮೀರ ಪ್ರವಾಸ ನಮ್ಮೆಲ್ಲರಲ್ಲಿಯೂ ಅಲ್ಲಿಗೆ ಹೋಗಿಬರುವ ಆಶಯವೊಂದನ್ನು ಬಿತ್ತಬಹುದು. ಅವರ ಭಾಷೆ ಸೊಗಸಾಗಿದೆ. ಚಿತ್ರಗಳನ್ನು ಕಟ್ಟಿಕೊಡಲು ಶಕ್ತವಾಗಿದೆ. ಆರು ನಿಮಿಷಗಳ ಪ್ರಸ್ತುತಿಯಲ್ಲಿ ಪೀಠಿಕೆಯನ್ನು ಸೇರಿಸ ಬೇಕಾಗಿರುವುದರಿಂದ ಹೆಚ್ಚು ಹೇಳಲು ಸಾಧ್ಯವಿಲ್ಲ.

9. ಮಾಧುರಿ ಕೃಷ್ಣ – 'ಜೀವ ಗೌರವ'

ಶ್ರೀಮತಿ ಮಾಧುರಿ ಕೃಷ್ಣ ಅವರು ಜೀವ ಗೌರವ ಎಂಬ ಪ್ರಸ್ತುತಿಯಲ್ಲಿ ಆದರ್ಶ ಜೀವನ ನಡೆಸುವವರ ಒಂದು ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಚಿತ್ರ ಚೆನ್ನಾಗಿಯೇ ಮೂಡಿಬಂದಿದೆ. ಆ ವೈದ್ಯರು ನಿಜ ಜೀವನದ ವೈದ್ಯರಾಗಿದ್ದರೆ ವೈದ್ಯರ ಹೆಸರನ್ನು ಉಲ್ಲೇಖಿಸಿ ಮತ್ತಷ್ಟು ವಿವರಗಳನ್ನು ಸೇರಿಸಿ ವಿಸ್ತಾರವಾದ ಲೇಖನವನ್ನು ಸಿದ್ಧಪಡಿಸಬಹುದು. ಎಷ್ಟೇ ಓದಿದರೂ ತನ್ನ ಪರಿಸರಕ್ಕೆ ಹಿತಿರುಗಿ ಅಲ್ಲಿಯ ಜನಗಳ ಯೋಗಕ್ಷೇಮವನ್ನೇ ತನ್ನ ಜೀವನದ ಗುರಿಯಾಗಿರಿಸಿಕೊಳ್ಳುವ ವೈದ್ಯರು ಬಹಳ ಅಪರೂಪವೇ ಸರಿ. ಅವರ ಕುರಿತು ಇನ್ನಷ್ಟು ಮಾಹಿತಿಗಳನ್ನು ಲೇಖನ ಒದಗಿಸಿದ್ದರೆ 'ಜೀವಗೌರವ'ದ ಮಹತ್ವ ಇನ್ನೂ ಹೆಚ್ಚಾಗುತ್ತಿತ್ತು. ಸಮಯ ಮಿತಿ ಇದಕ್ಕೆ ಕಾರಣವಾಗಿರಬಹುದು.

10. ಎನ್.ವಿ. ರಘುರಾಂ – 'ನಮ್ಮನೆ ಅಡುಗೆ ಮನೆ'

ಶ್ರೀ ಎನ್.ವಿ. ರಘುರಾಂ ಅವರು 'ನಮ್ಮನೆ ಅಡುಗೆ ಮನೆ' ಎಂಬ ಲಲಿತ ಪ್ರಬಂಧವನ್ನು ಮಂಡಿಸಿ ಉಪಕರಿಸಿದ್ದಾರೆ. ಅವರ ಬಾಲ್ಯದ ಅಡುಗೆ ಮನೆಗೆ ನಮಗೆಲ್ಲ ಪ್ರವೇಶ ದೊರಕಿಸಿಕೊಟ್ಟಿದ್ದಾರೆ. ಹದಿನಾಲ್ಕು ಜನರಿದ್ದ ದೊಡ್ಡ ಕುಟುಂಬದಲ್ಲಿ ಇರುವ ಅನುಭವವೇ ವಿಶೇಷವಾದುದು. ಅದು ಈಗ ಎಲ್ಲರಿಗೆ ಕೇವಲ ನೆನವರಿಕೆ ಮಾತ್ರವಷ್ಟೆ. ದೊಡ್ಡ ಇಡ್ಲಿ ಪಾತ್ರೆ, ಒಮ್ಮೆ ನಾಲ್ಕು ರೊಟ್ಟಿ ತಯಾರಿಸಬಲ್ಲ ತಪ್ಪಲೆಕಾವಲಿ ಇವೆಲ್ಲ ಅನೇಕ ಓದುಗರಿಗೆ ಹೊಸದಾಗಿ ಕಂಡು ಬೆರಗನ್ನುಂಟು ಮಾಡುತ್ತವೆ. ಇಲ್ಲಿರುವ ಆಪ್ತತೆ, ವಿವರಗಳನ್ನು ಪೋಣಿಸಿರುವ ರೀತಿ, ಬಹಳ ಅಚ್ಚುಕಟ್ಟಾಗಿದೆ. ಐದು ಕೇಜಿ ಕಾಫಿ ಪುಡಿ ಕೇವಲ ಇಪ್ಪತ್ತು ದಿನಗಳಲ್ಲಿ ಮುಗಿದುಹೋಗುತ್ತಿತ್ತು ಎಂಬ ವಿವರವೇ ನಮ್ಮನ್ನು ದಿಕ್ಕೆಡಿಸುತ್ತದೆ. ಕೆಲವು ಮರೆತುಹೋದ ಪದಗಳಿಗೆ ರಘುರಾಂ ಮತ್ತೆ ಜೀವ ತುಂಬಿದ್ದಾರೆ. ಉಗ್ಗದಲ್ಲಿ ಬೆಣ್ಣೆಯನ್ನು ತರುವ ಹಿರಿಯರ ನೆನಪು ಮುಂತಾದುವಲ್ಲಿ ಇದನ್ನು ನಾವು ನೋಡಬಹುದು. ರಘುರಾಂ ಅವರ ಇಂತಹ ಬರಹಗಳು ಇನ್ನಷ್ಟು ಬರಲಿ.

11. ರಾಧಿಕಾ ಗುಜ್ಜರ್ – 'ಸಾವಿರವ ಕಟ್ಟಿದಾಕೆ'

ರಾಧಿಕಾ ಗುಜ್ಜರ್ ಅವರು ಒಂದು ರೀತಿಯ ಮುಗ್ಧ ಕವಿ. ಎಂದರೆ ಏನೂ ತಿಳಿಯದವರು ಎಂದಲ್ಲ. ಒಬ್ಬ ಗೌರವಾನ್ವಿತ, ಜೀವನ ಪ್ರೀತಿಯಿರುವ ಮಹಿಳೆಯ ಚಿತ್ರವನ್ನು ಅವರು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ನಿಜವಾಗಿ ಸಹಜವಾಗಿ ಮೂಡಿಬಂದಿರುವ ಚಿತ್ರವಿದು. ಇಲ್ಲಿ ಯಾವುದೇ ಹೇಳಿಕೆಯಿಲ್ಲ. ವೈಭವವಿಲ್ಲ. ಅಲಂಕಾರವಿಲ್ಲ. ಆದರೂ ಆ ಚಿತ್ರದ ಮಹಿಳೆಯನ್ನು ನಾವೆಲ್ಲ ನೋಡಿದ್ದೇವೆ, ಆ ಚಿತ್ರ ಎಲ್ಲ ಭಾರತೀಯರ ಮನೆಯಲ್ಲಿಯೂ ಇರುತ್ತದೆ ಎಂಬುದನ್ನು ನಮ್ಮೆಲ್ಲರ ಮನಸ್ಸು ಕಂಡುಕೊಳ್ಳುವ ಹಾಗೆ ಮಾಡುತ್ತದೆ, ಕವನ. ಭಾರತೀಯ ಸಂಸ್ಕೃತಿಯ ರೂಪಕವಾಗಿ ಈ ಮಹಿಳೆಯ ಚತ್ರ ಒಡಮೂಡಿದೆ. ಮಿಕ್ಕೆಲ್ಲರ ಬಗ್ಗೆ ಸಹಜ, ದಟ್ಟವಾದ ಪ್ರೀತಿ, ಜೊತೆಗೆ ಉತ್ಕಟವಾದ ಜೀವನಪ್ರೀತಿ, ಜೊತೆಯಲ್ಲಿರುವವರ ಹಿತವೇ ತನ್ನ ಜೀವನದ ಗುರಿ ಎಂದು

ಬಿಂಬಿತವಾಗುವ ಮಹಿಳೆಯ ಚಿತ್ರ ಸೊಗಸಾಗಿದೆ. ಇಂತಹ ಚಿತ್ರಕ್ಕೆ ಸಾವಿಲ್ಲ. ಇನ್ನೊಬ್ಬರು ಆ ಚಿತ್ರದ ಸ್ಥಾನವನ್ನು ತುಂಬಿ ಬಿಡುತ್ತಾರೆ. ಸಂಸ್ಕೃತಿಯ ಸಾತತ್ಯ ಇಲ್ಲಿ ನೋಡಸಿಗುತ್ತದೆ.

12. ಮಾಲತಿ ಶ್ರೀನಿವಾಸನ್ – 'ಸೃಷ್ಟಿ ವೈಚಿತ್ರ್ಯ'

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಯಶಸ್ವಿ ಕವಯಿತ್ರಿ. ಅವರು ತಮ್ಮ 'ಸೃಷ್ಟಿ ವೈಚಿತ್ರ್ಯ' ಎಂಬ ಕವನದಲ್ಲಿ ಸೃಷ್ಟಿಯ ವೈಚಿತ್ರ್ಯಗಳನ್ನು ಕುತೂಹಲದಿಂದ ಗಮನಿಸಿದ್ದಾರೆ. ಒಂದೆಡೆ ಮರುಭೂಮಿ, ಇನ್ನೊಂದೆಡೆ ಸಸ್ಯಕಾಶಿ. ಬೋಳಾದ ಮರಗಳು ಕೆಲದಿಗಳಲ್ಲಿಯೇ ಹಸಿರೆಲೆಗಳಿಂದ ಕಂಗೊಳಿಸುವ ನೋಟ. ಒಂದೆಡೆ ಕಗ್ಗತ್ತಲ ಖಂಡ, ಇನ್ನೊಂದೆಡೆ ಸದಾ ಬೆಳಗುವ ಸೂರ್ಯ ಇಂತಹ ನೋಟಗಳನ್ನ ಕಂಡು ಚಕಿತರಾಗಿದ್ದಾರೆ. ಸೃಷ್ಟಿ ಸದಾ ಮಾನವನಿಗೆ ಒಂದು ಸವಾಲು ಎನಿಸಿದೆ. ಮಾನವ ಅದನ್ನು ಗೆದ್ದಾನೆಯೆ? ಕಡೆಗೆ ಮಾನವ ಪ್ರಕೃತಿಯ ಸಹಕಾರವನ್ನು ಬಯಸಬೇಕು. ದಾನವನಾಗಬಾರದು ಎಂಬ ವಿನಂತಿಯೊಂದಿಗೆ ಕವನ ಮುಗಿಯುತ್ತದೆ. ಅನೇಕ ಒಳನೋಟಗಳನ್ನು ಕವನ ನಮ್ಮ ಮುಂದಿಡುತ್ತದೆ.

13. ರೇಣುಕಾ ದೇಸಾಯಿ – 'ಪ್ರಕಟವಾಗದಿರುವ ಸುದ್ದಿಗಳು'

ಶ್ರೀಮತಿ ರೇಣುಕಾ ದೇಸಾಯಿಯವರು ಅನೇಕ ಆಸಕ್ತಿಗಳನ್ನು ಹೊಂದಿರುವವರು. ಸದಾ ಕ್ರಿಯಾಶೀಲರಾಗಿರುವವರು. ಅವರ 'ಪ್ರಕಟವಾಗದಿರುವ ಸುದ್ದಿಗಳು' ಎಂಬ ಆಸಕ್ತಿ ಹುಟ್ಟಿಸುವ ಲೇಖನ ಅನೇಕ ಒಳ್ಳೆಯ ಸುದ್ದಿಗಳನ್ನು ಪ್ರಕಟಿಸುತ್ತದೆ. ಮನಸ್ಸಿಗೆ ಸಮಾಧಾನವನ್ನು ತರುವ, ಆದರ್ಶ ಜೀವನವನ್ನು ಜೀವಿಸುತ್ತಿರುವ ನಿದರ್ಶನಗಳು ಇಲ್ಲಿ ಕಾಣಬರುತ್ತವೆ. ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಇಂದು ಇಂತಹ ಸುದ್ದಿಗಳಿಗೆ ಜಾಗವಿಲ್ಲ. ಅಲ್ಲಿ ಕೇವಲ ವಿನಾಶಕರವಾದ, ದುಷ್ಟ ಪ್ರವೃತ್ತಿಗಳನ್ನು ಮೆರೆಸುವ ಸುದ್ದಿಗಳೇ ರಾರಾಜಿಸುತ್ತವೆ. ರೇಣುಕಾ ದೇಸಾಯಿಯವರು ಪತ್ರಿಕೆ ಮಾಧ್ಯಮಗಳಲ್ಲಿ ಬರುವುದೇ ಸುದ್ದಿಯಲ್ಲ, ಅದರಾಚೆಗೂ ಮನುಷ್ಯರ ಜೀವನವಿದೆ, ಜೀವನ ವಿಧಾನಗಳಿವೆ ಎಂಬುದನ್ನು ನಮಗೆ ಮನದಟ್ಟು ಮಾಡುತ್ತಾರೆ. ಅವರಿಂದ ಹೆಚ್ಚು ಹೆಚ್ಚು ಬರಹಗಳು ಬರಲಿ ಎಂದು ಹಾರೈಸುತ್ತೇನೆ.

14. ವಿಠ್ಠಲ ಇಜೇರಿ – ಕನ್ನಡ ಜಾನಪದ ಕಥೆಗಳು

ಶ್ರೀ ವಿಠ್ಠಲ ಇಜೇರಿಯವರು ವೇದಿಕೆಯವರಿಗೆಲ್ಲ ಎಲ್ಲರಿಗಿಂತ ಹೆಚ್ಚು ಸುಪರಿಚಿತರು. ಅವರ ಬರಹದ ವಸ್ತು ವೈವಿಧ್ಯ ಬೆರಗುಗೊಳಿಸುವಂತಹದು. ಅವರು ಈ ಬಾರಿ ಜಾನಪದ ಕೃತಿಯೊಂದನ್ನು ನಮಗೆ ಪರಿಚಯಿಸಿದ್ದಾರೆ. ಜನಪದ ಕಥೆಗಳ ತವರು ಭಾರತವೇ. ನಮ್ಮ ಕಥಾಸರಿತ್ಸಾಗರ, ಪಂಚತಂತ್ರಗಳೇ ವಿಶ್ವದ ಎಲ್ಲೆಡೆಯ ಕಥೆಗಳಿಗೆ ಪ್ರೇರಣೆ ಇತ್ತಿವೆ ಎಂಬುದು ವಿದ್ವಾಂಸರ ಅಭಿಪ್ರಾಯ. ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮೊದಲಿಗೆ ಜಾನಪದ ಅಧ್ಯಯನವನ್ನು ಕೈಕೊಂಡಿತು. ಅಲ್ಲಿ ಆ ವಿಭಾಗದ ಮೊದಮೊದಲ ಪ್ರಾಧ್ಯಾಪಕರುಗಳಲ್ಲಿ ಒಬ್ಬರಾದ ಪ್ರೊ. ಜೀ.ಶಂ. ಪರಮಶಿವಯ್ಯ ಅವರ 'ಕನ್ನಡ ಜಾನಪದ ಕಥೆಗಳು' ಎಂಬ ಕೃತಿಯ ಪರಿಚಯ ಇಲ್ಲಿದ್ದು ಅದು ಹೃಯಂಗಮವಾಗಿದೆ. ಆ ಕಥೆಗಳ ಸ್ವಾರಸ್ಯ ನಮಗೆ ತಲಪಲಿ ಎಂದು ಇಜೇರಿಯವರು ಅದರಲ್ಲಿನ ಒಂದು ಕಥೆಯನ್ನೂ ಒದಗಿಸಿದ್ದಾರೆ. ಜಾನಪದದ ವಿಶಾಲ ಕ್ಷೇತ್ರದ ಕಡೆಗೆ ಈ ಕಥೆಗಳು ನಮ್ಮನ್ನು ಎಳೆಯುತ್ತವೆ. ಆ ಬಗೆಗೆ ತಣಿಯದ ಕುತೂಹಲವನ್ನು ನಮ್ಮಲ್ಲಿ ಮೂಡಿಸುತ್ತದೆ. ಇಜೇರಿಯವರದು ಸಾರ್ಥಕ ಕೆಲಸ. ಅವರ ಲೇಖನಿಯಿಂದ ಇನ್ನೂ ಅನೇಕ ಲೇಖನಗಳು ಬರಲಿ.

15. ಶೀಲಾ ಅರಕಲಗೂಡು – 'ಒಂದೇ ಏಟಿಗೆ ಎರಡು ಹಣ್ಣು'

ಶ್ರೀಮತಿ ಶೀಲಾ ಅರಕಲಗೂಡು ಅವರು ನಾಡಿನ ಪ್ರಸಿದ್ಧ ಕವಯಿತ್ರಿ. ಅವರು ವೈಚಾರಿಕ ಚಿಂತನೆಯನ್ನೂ ಯಶಸ್ವಿಯಾಗಿ ಮಾಡಬಲ್ಲರು ಎಂಬುದಕ್ಕೆ ಅವರ 'ಒಂದೇ ಏಟಿಗೆ ಎರಡು ಹಣ್ಣು' ಎಂಬ ಲೇಖನವೇ ಸಾಕ್ಷಿ. ಭಾಷಾ ಸಮಸ್ಯೆಗೆ ಸರಳವಾದ

ಪರಿಹಾರವನ್ನು ಹುಡುಕುವ ಪ್ರಯತ್ನ ಈ ಲೇಖನದಲ್ಲಿದೆ. ಆದರೆ ಭಾರತದ ಭಾಷಾ ಸಮಸ್ಯೆಗಳಿಗೆ ನಾನಾ ಮಗ್ಗುಲುಗಳಿವೆ. ಕಗ್ಗಂಟಾಗಿಬಿಟ್ಟಿರುವ ಅದನ್ನು ಬಿಡಿಸಿ ಪರಿಹಾರ ಕಂಡುಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಅವರ ಪ್ರಾಮಾಣಿಕ ಪ್ರಯತ್ನ ಮೆಚ್ಚುವಂತಹದು.

16. ಶ್ರವಣ ಕುಮಾರಿ ಟಿ.ಎಸ್. – 'ಶೃಂಗಾರ'

ಶ್ರೀಮತಿ ಶ್ರವಣ ಕುಮಾರಿಯವರು ನಮ್ಮ ವೇದಿಕೆಯಲ್ಲಿರುವ ಓರ್ವ ಯಶಸ್ವೀ ಕತೆಗಾರ್ತಿ. ಈಗಾಗಲೇ ಅನೇಕ ಕಥೆಗಳನ್ನು ಬರೆದು ಸಂಗ್ರಹಗಳಾಗಿ ಪ್ರಕಟಿಸಿ ಅನೇಕ ಬಹುಮಾನಗಳಿಗೆ ಭಾಜನರಾಗಿರುವವರು. ಅವರ ಈ ಕಥೆಯೂ ತುಂಬ ವಿವರಗಳಿಂದ ಕೂಡಿ ಆ ವಿವರಗಳೇ ಒಂದು ರೂಪಕವೆಂಬಂತೆ ಬಳಕೆಯಾಗಿ ಮನಸ್ಸನ್ನು ಕಲಕುವ, ಅದೇ ಸಮಯಕ್ಕೆ ವಿಶಿಷ್ಟವಾದ ಹೊಸ ಸಂಗತಿಗಳತ್ತ ನಮ್ಮ ಮನಸ್ಸನ್ನು ಸೆಳೆಯುವ 'ಶೃಂಗಾರ' ಎಂಬ ಕಥೆ, ಕನ್ನಡದ ಸಂದರ್ಭದಲ್ಲಿ ಮಹತ್ವದ ಕಥೆಯಾಗಿದೆ. ಹೆಣಕ್ಕೆ ಶೃಂಗಾರ ಮಾಡುವ ಪರಿಪಾಠ ನಮ್ಮ ಸಮಾಜದ ಕೆಲವೆಡೆಯಲ್ಲಿದೆ. ಆದರೆ ಅದನ್ನು ಅದ್ಭುತವಾದ ದೃಷ್ಟಿಕೋನದಿಂದ ನೋಡಿರುವುದೇ ಶ್ರವಣಕುಮಾರಿಯವರ ಹೆಚ್ಚುಗಾರಿಕೆ. ಅಲ್ಲಲ್ಲಿ ಬರುವ ವಿಡಂಬನಾತ್ಮಕ ಮಾತುಕತೆಗಳು, ಶೃಂಗಾರದ ವಿವರಗಳು ಎಲ್ಲವೂ ಕಡೆಗೆ ಮನಸ್ಸಿನಲ್ಲಿ ದಟ್ಟೈಸಿ ಅಂತ್ಯ ದಿಗ್ಭ್ರಮೆಯನ್ನು ಮೂಡಿಸುತ್ತದೆ.

17. ಸಿಂಧು ಹರಿಥಸ್ – 'ಅಮ್ಮನ ಪರಿಚಯ'

ಸಿಂಧು ಹರಿಥಸ್ ಅವರು ಒಳ್ಳೆಯ ಕಥೆಗಾರ್ತಿಯಾಗಿ ಬೆಳೆಯಬಲ್ಲರು ಎಂಬುದಕ್ಕೆ ಎಲ್ಲ ನಿದರ್ಶನಗಳನ್ನು ಅವರ 'ಅಮ್ಮನ ಪರಿಚಯ' ಎಂಬ ಕಥೆ ಒದಗಿಸುತ್ತದೆ. ಕಥೆಯಲ್ಲಿನ ಅಷ್ಟಾಗಿ ಪರಿಚಿತವಲ್ಲದ ಸಂಗತಿಗಳು, ನಿಧಾನದ ನಿರೂಪಣೆ, ಕಡೆಯಲ್ಲಿ ಅಪ್ಪ – ಅಮ್ಮಂದಿರ ಕಳೆದ ದಿನಗಳ ಸ್ವಭಾವ, ಅನಂತರದ ಸ್ವಭಾವಗಳ ರೀತಿ ಎಲ್ಲವೂ ಒಂದು ಹೊಸ ಬಗೆಯ ಚಿತ್ರವನ್ನು ಕಟ್ಟಿಕೊಡುತ್ತವೆ. ಸಿಂಧು ಹರಿಥಸ್ ಅವರು ಭರವಸೆಯ ಲೇಖಕಿ ಎಂಬುದರಲ್ಲಿ ಸಂದೇಹವಿಲ್ಲ.

18. ಸುಜಾತಾ ರವೀಶ್ – 'ನಾನಾಗಬಯಸುವ ರಾಮಾಯಣದ ಪಾತ್ರ'

ಸುಜಾತಾ ರವೀಶ್ ಅವರ 'ನಾನಾಗಬಯಸುವ ರಾಮಾಯಣದ ಪಾತ್ರ' ಒಂದು ಹೊಸಬಗೆಯ ಬರಹ. ನಾವು ಶಾಲಾ ವಿದ್ಯಾರ್ಥಿಗಳಾಗಿದ್ದಾಗ ನಾನು ಏನಾಗಬಯಸುತ್ತೇನೆ ಎಂಬ ವಿಷಯದ ಕುರಿತು ಆಶುಭಾಷಣಗಳಿರುತ್ತಿದ್ದವು. ಅಂದಿನಿಂದ ಇಂದಿನವರೆಗೆ ಅಂತಹ ಅನೇಕ ಬರಹಗಳು ಬಂದಿವೆ. ಆದರೆ ರಾಮಾಯಣದ ಪಾತ್ರವೊಂದರಲ್ಲಿ ತಲ್ಲೀನರಾಗಿ ನಾನು ಆ ಪಾತ್ರವೇ ಆಗಿಬಿಡಬೇಕು ಎಂಬ ಆಶಯ ಅಪರೂಪದ್ದು. ರಾಮಾಯಣ ಇತಿಹಾಸವೆಂದರೂ ಅದು ಸಹಸ್ರಾರು ವರ್ಷಗಳ ಕೆಳಗಿನದು. ಮೇಲಾಗಿ ಒಂದು ಕಥೆ. ಅಂತಹ ಕಥೆಯ ಒಂದು ಪಾತ್ರವಾಗುವುದಾದರೆ ನನ್ನ ಜೀವನ ಸಾರ್ಥಕ ಎಂದು ಭಾವಿಸುವವರು ಎಷ್ಟು ಜನರಿದ್ದಾರು. ಇಂತಹ ಹೊಸತನದ ಬರಹ**ವನ್ನು ನೀಡಿದ** ಸುಜಾತಾ ರವೀಶ್‌ರಿಗೆ ಅಭಿನಂದನೆಗಳು.

19. ಸ್ನೇಹ ಶಶಿಧರ್ – 'ಅಮರನ ಆಂಬೊಡೆ ಪುರಾಣ'

ಸಾಮನ್ಯವಾಗಿ ದಾಸೋಹಗಳಲ್ಲಿ ಅನೇಕ ಹಾಸ್ಯಲೇಖನಗಳು ಮಂಡನೆಯಾಗುತ್ತವೆ. ಈ ದಾಸೋಹದಲ್ಲಿ ಅದು ಇಲ್ಲಿಯವರೆಗೆ ಕಾಣಿಸಿರಲಿಲ್ಲ. ಎಂಎಸ್‌ಎನ್ ಅವರ ಮಂಡನೆ ಹಾಸ್ಯಲೇಪಿತವಾಗಿದ್ದರೂ ವಿಷಯ ಬಹಳ ಗಂಭೀರವಾದುದು. ಶ್ರೀಮತಿ ಸ್ನೇಹಾ ಶಶಿಧರ್ ಅವರು 'ಅಮರನ ಆಂಬೊಡೆ ಪುರಾಣ' ಎನ್ನುವ ಹಾಸ್ಯಲೇಖನವನ್ನು ಮಂಡಿಸಿ ಆ ಕೊರತೆಯನ್ನು ತುಂಬಿದ್ದಾರೆ. ಅವರಿಗೆ ಅಭಿನಂದನೆಗಳು. ಯಾವುದೇ ವಿಷಯವನ್ನು ಕುರಿತು ಬರೆಯುವ ಕಲೆ ಅವರಿಗೆ ಸಿದ್ಧಿಸಿದೆ. ಅದು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಆಂಬೊಡೆಯ ಚಪಲದ ಗಂಡ ಕಡೆಗೆ ತಾನೇ ಆಂಬೊಡೆಯನ್ನು ಮಾಡುವಾಗ ಮನೆಯವರೆಲ್ಲ ಅವರಿಗೆ ಸಹಕರಿಸುವುದು ಮುಂತಾದುವೆಲ್ಲ ಸಂಸಾರದ ಒಂದು ಸುಂದರ ಚಿತ್ರವನ್ನು ಕಟ್ಟಿಕೊಡುತ್ತದೆ.

ಈ ದಿನ ನನಗೆ ಕೆಲವು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಶ್ರೀ ಮಹಾಬಲ ಮತ್ತು ರವೀಂದ್ರ ಅವರಿಗೆ**,** ನನ್ನ ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡ ಎಲ್ಲರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಎಲ್ಲರಿಗೆ ನಮಸ್ಕಾರ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 237 ನಡೆದ ದಿನಾಂಕ: 10 ಮೇ 2025

ಸಂಚಿಕೆಯ ಬಿಡುಗಡೆ ದಿನಾಂಕ: 14 ಜೂನ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)